

ಕಲ್ಯಾಣ ಕಿರಣ

ಜೂನ್-2009 ಬೆಲೆ-10.00






HE CAME HE SAW HE CONQUERE



ಪ್ರವಚನ ಪಿತಾಮಹಾ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿ

ಮದಗಜದೊಲು ಮುನ್ನುಗ್ಗಿ ಬಸವ ಪ್ರೇಮ ಬೀರ್ದಿರಿ
ನವ ಕ್ರಾಂತಿಯ ನಿರ್ಮಾಪಕರಿಂದು ತಾವು ಆದಿರಿ
ಸ್ತ್ರೀಕುಲಕ್ಕೆ ಪೀಠವೊಂದು ರಚಿಸಿ ಸಮತೆ ಸಾರ್ದಿರಿ
ಬಸವನುಸಿರ ಪಸರಿಸುತ ಮರ್ತ್ಯಕೆ ಬೆಳಕಾದಿರಿ



A.C.P. R. Ramadas Chennai, delivering speech



Sharana G.R.Basavarajan, Vice President Tamil Nadu Lingayat Welfare Association is honoured

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಸಂಪುಟ-39 ಸಂಚಿಕೆ-5 | ಬಸವ ಶಕೆ -876 ಜೂನ್-2009 | ಆಜೀವ ಸದಸ್ಯತ್ವ 1000 ರೂ. ವಾರ್ಷಿಕ ಚಂದಾ 100/- ರೂ.

ಜಂಗಮ ಜ್ಯೋತಿ ಗುರು ಲಿಂಗಾನಂದ

ಈ ಬಗೆಯ ನಿಲುವ ಇನ್ನಾವ ಜಂಗಮದೊಳು ಕಾಣೆ
ಬಸವ ಕರುಣೆಯ ಕಿರಣ ಗುರು ಲಿಂಗಾನಂದರಲಲ್ಲದೆ ||ಪ||

ಹರಿವ ಗಂಗೆಯ ತೆರದಿ ಜಗದ ಬಯಲಲಿ ಚರಿಸಿ
ವರ ಭಕ್ತಿ-ಜ್ಞಾನಗಳ ಬೆಳೆ ತೆಗೆದ ಗುರುವೆ।
ಬಸವ ಧರ್ಮದ ಪ್ರಭೆಯ ಪುನಃ ಬೆಳಗಿದ ಯೋಗಿ
ಬಸವ ಸಾಮ್ರಾಜ್ಯವನು ಕಟ್ಟಿದ ಮಹತ್ಯಾಗಿ ||1||

ಮನುಗೂಳಿಯಲಿ ಜನಿಸಿ ವಿಜಯಪುರದೊಳು ಓದಿ
ಬೆಳಗಾಂವಿಯ ನೆಲದಿ ಪದವಿಯಂ ಪಡೆದು।
ಧಾರವಾಡದಿ ಜ್ಞಾನ ಸಂಪದವ ಸಂಚಯಿಸಿ
ಚರಿಪ ಮಾರುತವಾಗಿ ಸುಳಿದ ಜ್ಞಾನದಾಸೋಹಿ ||2||

ಮಲ್ಲಪ್ಪ ಕಲ್ಲಮ್ಮ ದಂಪತಿಯ ಶಿಶುವಾಗಿ
ಚೆಲುವಿನಾ ಕಾಯವನು ಧರಿಸಿದ ಶಿವದೇಹಿ।
ಸಂಗಮೇಶನೆಂಬ ದಿವ್ಯ ನಾಮದಿ ಬೆಳೆದು
ಆದೆ ಲಿಂಗಾನಂದ ಬಸವ ಕರುಣೆಯ ಪಡೆದು ||3||

ಮಹಿಳಾಗುರು ಪೀಠವಂ ಸ್ಥಾಪಿಸಿದ ಮಹಾಗುರು
ಮಹಮನೆಯ ಆಸರೆಯ ನೀಡಿದ ಕಲ್ಪತರು।
ಕೂಡಲ ಸಂಗಮದ ಬಸವ ಧರ್ಮದ ಪೀಠ
ಏರಿ ಜಗದ್ಗುರುವಾಗಿ ಬೆಳಗಿದ ಸುವಿರಾಗಿ ||4||

ರಾಷ್ಟ್ರ ಪ್ರೇಮದ ಖಣಿಯೆ ಸತ್ಯನಿಷ್ಠೆಯ ಕಲಿಯೆ
ರಾಷ್ಟ್ರೀಯ ಬಸವ ದಳ ಸ್ಥಾಪಿಸಿದ ತತ್ತ್ವವಾದಿ।
ಪ್ರವಚನದ ಪಟುವಾಗಿ ಜ್ಞಾನ ನೀಡಿದ ಮೂರ್ತಿ
ವಚನ ವಾಙ್ಮಯ ಕೀರ್ತಿ ಪಸರಿಸಿದ ಗುರು ಜ್ಯೋತಿ ||5||

ಚೈತನ್ಯ ಚಿಲುಮೆಯೆ ಸತ್ಯ ಚಿಂತನ ನಿಧಿಯೆ
ಜಾತಿವಾದವ ಜರಿದ ವಿಶ್ವಪ್ರೇಮದ ಸುಧೆಯೆ।
ಶರಣ ಧರ್ಮದ ದಿವ್ಯ ವರರತ್ನ ತಾವು
ಎಂದು ಬಸವಾತ್ಮಜೆಯು ನಿತ್ಯ ನೆನೆಯುವೆ ನಾನು ||6||

-ಮಾತಾಜಿ

ಜನನ - 15-9-1931
ಕ್ರಿಯಾ ವಿಶ್ರಾಂತಿ - 30-6-1995

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 15ನೆಯ ಲಿಂಗೈಕ್ಯ ಸಂಸ್ಮರಣೆ

ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಹಿರಿಯೂರಿನಲ್ಲಿ ದಿ. 30 -6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ದಿ.30-6-2009ಕ್ಕೆ 15 ವರ್ಷಗಳಾಗುತ್ತಿರುವುದರಿಂದ ಪೂಜ್ಯರು ಸ್ಥಾಪಿಸಿದ ಮತ್ತು ಅನುಗ್ರಹಿಸಿದ ಸಂಸ್ಥೆಗಳಲ್ಲಿ ಬಸವ (ಮಂಗಳ) ವಾರ ಬೆಳಿಗ್ಗೆ 11 ಗಂಟೆಯಿಂದ ಸಂಸ್ಮರಣಾ ಕಾರ್ಯಕ್ರಮ ಮತ್ತು ಪ್ರಸಾದ ದಾಸೋಹವನ್ನು ಏರ್ಪಡಿಸಲಾಗಿದೆ.

1. ಧಾರವಾಡ ಜಗನ್ಮಾತಾ ಅಕ್ಕಮಹಾದೇವಿ ಮಠ
   ದಿವ್ಯ ಸನ್ನಿಧಿ : ಪರಮ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
2. ಕೂಡಲ ಸಂಗಮದ ಬಸವ ಧರ್ಮ ಪೀಠ, ಮಹಾಮನೆ ಮಹಾಮಠ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು.
3. ಬಸವ ಕಲ್ಯಾಣದ ಬಸವ ಧರ್ಮ ಪೀಠ, ಬಸವ ಮಹಾಮನೆ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು.
   ನೇತೃತ್ವ : ಪೂಜ್ಯ ಶ್ರೀ ಬಸವ ಪ್ರಭು ಸ್ವಾಮಿಗಳು.
4. ಬೆಂಗಳೂರಿನ ಬಸವ ಮಂಟಪ, ರಾಜಾಜಿನಗರ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು.
5. ನವ ದೆಹಲಿಯ ಬಸವ ಮಂಟಪ, ಮಹಾವೀರ ಎನ್‌ಕ್ಲೇವ್
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಚನ್ನಬಸವಾನಂದ ಸ್ವಾಮಿಗಳು
   ನೇತೃತ್ವ : ಪೂಜ್ಯ ಶ್ರೀ ಮಾತೆ ಸರ್ವಮಂಗಳಾದೇವಿ.
6. ಅಲ್ಲಮಗಿರಿಯ ಅಲ್ಲಮಪ್ರಭು ಮಠ, ಮಹಾರಾಷ್ಟ್ರ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಬಸವ ಲಿಂಗ ಸ್ವಾಮೀಜಿ.

ವಿಶೇಷ ಸೂಚನೆ : ದಿ. 30-6-2009ರಂದು ಬಸವ (ಮಂಗಳ) ವಾರ - ಕಾಯಕದ ದಿನವಾದ್ದರಿಂದ ರಾಷ್ಟ್ರೀಯ ಬಸವ ದಳಗಳವರು ಅಂದು ಕಾರ್ಯಕ್ರಮ ಮಾಡಲು ಸಾಧ್ಯವಾಗಲಿಕ್ಕಿಲ್ಲ. ಅಂತಹವರು ದಿ. 28-6-2009 ಅಥವಾ 5-7-2009 ದೇವ (ಭಾನು) ವಾರದಂದು ಸಂಸ್ಮರಣೆಯ ನಿಮಿತ್ತ ಉಪನ್ಯಾಸಗಳನ್ನು ಏರ್ಪಡಿಸಬಹುದು.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9620058492

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ 814ನೆಯ ಲಿಂಗೈಕ್ಯ ಸಂಸ್ಮರಣೆ



ಶರಣ (ಶನಿ)ವಾರ ದಿ. 25-7-2009 ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ
ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ
ಸರ್ ಕೆ.ಪಿ.ಪುಟ್ಟಣ್ಣಚೆಟ್ಟಿ (ಟೌನ್ ಹಾಲ್)
ಪುರಭವನದಲ್ಲಿ

❋ ಶರಣರ ಬರುವೆಮಗೆ ಪ್ರಾಣ ಜೀವಾಳ ❋

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 814ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ:ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನ,ಬೆಂಗಳೂರು,

ದಿ.25-7-2009, ಬೆಳಿಗ್ಗೆ .10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 814ನೆಯ ಲಿಂಗೈಕ್ಯ ದಿನವು ಭಾನು(ದೇವ) ವಾರ ದಿ.26-7-2009ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 814ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ವಿಶೇಷ ವಿವರ: ಪ್ರತಿ ವರ್ಷವೂ ಬಸವ ಪಂಚಮಿಯನ್ನು ಸರ್.ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಆಚರಿಸುತ್ತಾ ಬಂದಿದ್ದೇವೆ. ಈ ಸಲ ಅದು ಭಾನುವಾರ ಬಂದಿದ್ದು ನಮಗೆಲ್ಲ ಅತೀವ ಆನಂದವಾಗಿತ್ತು. ಆದರೆ ಪುರಭವನವು ಭಾನುವಾರದಂದು ಬೇರೆಯವರಿಗೆ ಕೊಡಲ್ಪಟ್ಟ ಕಾರಣ ನಾವು ಕಾರ್ಯಕ್ರಮವನ್ನು ದಿ.25-7-2009, ಶನಿ (ಶರಣ)ವಾರದಂದು ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ, ದಿ.26-7-2009 ಭಾನು (ದೇವ) ವಾರದಂದು ರಾಜಾಜಿ ನಗರದ ಬಸವ ಮಂಟಪದಲ್ಲಿ ಏರ್ಪಡಿಸುತ್ತಿದ್ದೇವೆ.

ಹಾಲು ಹಣ್ಣು ವಿತರಣೆ

ನಾಗರ ಪಂಚಮಿ ಎಂದು ಹುತ್ತಕ್ಕೆ, ನಾಗರ ಕಲ್ಲಿಗೆ ಹಾಲು ಎರೆಯುವ ಮೂಢ ಸಂಪ್ರದಾಯ ಬಿಟ್ಟು ಮಾನವೀಯ ಕಾರ್ಯಕ್ಕೆ ಅದನ್ನು ಬಳಸಬೇಕೆಂದು ರಾಷ್ಟ್ರೀಯ ಬಸವ ದಳದ ವತಿಯಿಂದ ವಿಕ್ಟೋರಿಯಾ ಮತ್ತು ಕುಷ್ಠರೋಗಿಗಳ ಆಸ್ಪತ್ರೆಯಲ್ಲಿ ದಿ.26-7-2009ರಂದು ಹಣ್ಣು- ಹಾಲು ವಿತರಿಸುವ ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕವನ್ನು ಏರ್ಪಡಿಸಲಾಗುವುದು. ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕವು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿದೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ)ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ದಿ.25ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 814 ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ(ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4
4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ . ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್‌ದಿಂದ ಹೊರಟು ನಗರ್ತರ ಪೇಟೆ, ಅವೆನ್ಯೂ ರಸ್ತೆ ಮಾರ್ಗವಾಗಿ ಸಾಗಿ ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು. ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು, ಬೆನ್ನ ಮೇಲೆ ಬಸವ ರಕ್ಷೆ(ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಬಸವ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲು ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದನ್ನೇ ನೇರ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು,ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ನೀಲಾಂಬಿಕಾ ಷಷ್ಠಿ - ಸಾಮೂಹಿಕ ಇಷ್ಟಲಿಂಗಾರ್ಚನೆ

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣಿಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ.26-7-2009ರಂದು 814ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30ರಿಂದ ಬೆಂಗಳೂರಿನ ರಾಜಾಜಿ ನಗರದ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆಯೊಡನೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ. ಶರಣ ಬಂಧುಗಳು ಪೂಜಾ ನಂತರ ಕರುಣ ಪ್ರಸಾದವನ್ನು ಪಡೆಯಬೇಕು.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿ ನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ(ಸಿಟಿ ಆಸ್ಪತ್ರೆ ಪಕ್ಕ) ಇದೆ.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಬಸವ ಮಂಟಪಕ್ಕೆ ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251,80ಎ, 265, 80ಇ
ರೂಟಿನ ಸಿಟಿ ಬಸುಗಳು ಬರುತವ

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ,
ಬೆಂಗಳೂರು-10
ದೂರವಾಣಿ : 080- 23131476

ಸಂಪಾದಕೀಯ :

- ಮಾತಾಜಿ

ಮದುವೆ ಮತ್ತು ಮೂಢ ನಂಬಿಕೆಗಳು

ಭಾರತೀಯ (ಹಿಂದುಗಳ) ಮನಸ್ಸಿನಲ್ಲಿ ನೂರಾರು ಬಗೆಯ ಮೂಢನಂಬಿಕೆಗಳು ಆಳವಾಗಿ ಬೇರುಬಿಟ್ಟಿವೆ. ಒಂದು ಬಗೆಯ ಭಯಗ್ರಸ್ತ ಮನಸ್ಥಿತಿಯನ್ನು ಜನರಲ್ಲಿ ಪುರೋಹಿತಶಾಹಿಯು ಶತಮಾನಗಳ ಕಾಲದಿಂದಲೂ ಬೆಳೆಸಿಬಿಟ್ಟಿರುವುದರಿಂದ ಆ ಭಯದ ವಿಷವರ್ತುಲದಿಂದ ಹೊರಬರಲು ಬಹುಪಾಲು ಜನರಿಗೆ ಸಾಧ್ಯವೇ ಇಲ್ಲವಾಗಿದೆ. ವಿದ್ಯಾವಂತರು ಸಹ, ಈ ಆಚರಣೆ ಸೂಕ್ತವೆ ? ಇದಕ್ಕೆ ಅರ್ಥವಿದೆಯೆ ? ಎಂದು ಆಲೋಚಿಸದೆ ಮೂಢನಂಬಿಕೆಗೆ ಬಲಿಪಶುವಾಗಿ ತಲೆ (ಬುದ್ಧಿ) ಕೊಡುವುದನ್ನು ನೋಡಿದಾಗ ಅಚ್ಚರಿ ಎನಿಸುತ್ತದೆ.

ಸಾಗಿ ಬಂದಿರುವ ಹಲವಾರು ಆಚರಣೆ ನೋಡಿದಾಗ, ಅದರಲ್ಲಿ ಸತ್ ಸಂಪ್ರದಾಯ ಮತ್ತು ಅಂಧಾನುಕರಣೆ ಎರಡನ್ನೂ ಕಾಣಬಹುದಾಗಿದೆ. ಆದಿ ಪ್ರಮಥ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಮೂಢನಂಬಿಕೆ ನಿವಾರಿಸಿ ಅರ್ಥಗರ್ಭಿತ ಆಚರಣೆಗಳನ್ನು ಉಳಿಸಿಕೊಂಡರು. ಆದರೆ ಇಂದಿನ ಹೊಲಬುಗೆಟ್ಟ ಲಿಂಗಾಯತ ಸಮಾಜದಲ್ಲಿ ಪುನಃ ಎಲ್ಲ ಮೂಢ ಸಂಪ್ರದಾಯಗಳು ಸೇರ್ಪಡೆಗೊಂಡಿರುವುದನ್ನು ಕಾಣಬಹುದಾಗಿದೆ. ಇದರಲ್ಲಿ ಎರಡು ರೀತಿಯ ಕೊಳೆಗಳು ಸೇರಿವೆ. 1. ಶಾಸ್ತ್ರೀಯ ಸಂಪ್ರದಾಯ (classical tradition) 2. ಕ್ಷುದ್ರ (ಬಣ) ಸಂಪ್ರದಾಯ (petty tradition, clan tradition) ಮಳೆಯ ನೀರು ನದಿಯಾಗಿ ಹರಿಯುವುದು. ಅದು ಕುಡಿಯಲು ಯೋಗ್ಯವಿರದು. ಅದರಲ್ಲಿ ಹೊಲಗದ್ದೆಗಳಲ್ಲಿ ಜನರು, ಪ್ರಾಣಿಗಳು ವಿಸರ್ಜಿಸಿದ ಮಲಮೂತ್ರಾದಿಗಳ ಕೊಳೆಯು ಸೇರಿರುತ್ತದೆ. ಇನ್ನು ವಾಹನಗಳ, ಕಾರ್ಖಾನೆಗಳ ಹೊಗೆ ಮತ್ತು ಕಾರ್ಖಾನೆ ವಿಸರ್ಜಿಸುವ ತ್ಯಾಜ್ಯ ಸಹ ಸೇರಿ ಅಪಾಯಕರ ಮತ್ತು ಅನಾರೋಗ್ಯಕರ ಗುಣವನ್ನು ಉಂಟು ಮಾಡಿರುತ್ತದೆ. ಜಲ ಮಂಡಳಿಯವರು ಅಂಥ ನೈಸರ್ಗಿಕ ನೀರನ್ನು ಶುದ್ಧೀಕರಿಸುವರಲ್ಲದೆ ಕ್ರಿಮಿನಾಶಕವಾದ ಕ್ಲೋರಿನ್ ಅಂಶವನ್ನೂ ಸೇರಿಸುತ್ತಾರೆ.

ಇದೇ ರೀತಿ ಸಾಗಿ ಬಂದ ಸಾಂಪ್ರದಾಯಿಕ ಆಚರಣೆಗಳನ್ನು ಬಸವಾದಿ ಪ್ರಮಥರು ತೆಗೆದುಹಾಕಿ ಸದ್ಧರ್ಮವನ್ನು ಕೊಟ್ಟರು, ಅರ್ಥಗರ್ಭಿತವೂ ಸರಳವೂ ಆದ ಆಚರಣೆಗಳನ್ನು ರೂಢಿಗೆ ತಂದರು. ಪುರೋಹಿತಶಾಹಿಯ ಜಾಲದಲ್ಲಿ ಬಂಧಿತರಾಗಿರುವ ಭಾರತೀಯರು ಅವನ್ನು ಅಳವಡಿಸಿಕೊಳ್ಳಲಿಲ್ಲ; ಮಾತ್ರವಲ್ಲ ಲಿಂಗಾಯತರು ಇತರರಿಗೆ ಮಾರ್ಗದರ್ಶಕರಾಗಿರಬೇಕಾದವರು ಸಹ ವೈದಿಕ/ ಶೈವ ಪುರೋಹಿತಶಾಹಿಯು ಹೆಣೆದ ಜಾಲದಲ್ಲಿ ಸಿಕ್ಕಿಬಿದ್ದಿರುವರು. ಉತ್ತರ ಕರ್ನಾಟಕವು ಸ್ವಭಾವತಃ ಶರಣ ಸಂಸ್ಕೃತಿಯ ಬೀಡಾಗಿತ್ತು. ಹಳೆ ಮೈಸೂರು ವೈದಿಕ ಪ್ರಭಾವಕ್ಕೆ ಒಳಗಾಗಿರುವ ಪ್ರದೇಶವಾಗಿತ್ತು. ಕರ್ನಾಟಕದ ಏಕೀಕರಣವಾದ ಬಳಿಕ ಉತ್ತರ ಕರ್ನಾಟಕದಿಂದ ಬಂದು ಬೆಂಗಳುರು ಮುಂತಾದ ಹಳೆಮೈಸೂರು ಪ್ರದೇಶಗಳಲ್ಲಿ ನೆಲೆಸಿರುವ ಅನೇಕ ಲಿಂಗಾಯತರು ಹೋಮ -ಹವನ, ನವಗ್ರಹ, ಸತ್ಯನಾರಾಯಣ ಪೂಜೆಗಳಿಗೆ ಪಕ್ಕಾಗಿರುವುದನ್ನು ಕಂಡಾಗ ಬಹಳ ದುಃಖವೆನಿಸುತ್ತದೆ.

1. ಜಾತಕ ನೋಡುವಿಕೆ : ಮಗು ಹುಟ್ಟಿದಾಗ ಜಾತಕ ಬರೆಸುವುದು ವೈದಿಕ ಸಂಪ್ರದಾಯ. ಉತ್ತರ ಕರ್ನಾಟಕದಲ್ಲಿ ಆ ಪದ್ಧತಿ ಇರಲಿಲ್ಲ. ಹುಟ್ಟಿದ ದಿನಾಂಕ, ಸಮಯ ಗುರುತು ಹಾಕಿ ಕೊಳ್ಳುವುದು ಮಾತ್ರ ಆಚರಣೆಯಲ್ಲಿತ್ತು. ಹಳೆ ಮೈಸೂರಿನವರ ಪ್ರಭಾವದಿಂದ ಉತ್ತರ ಕರ್ನಾಟಕದವರೂ ಈ ಮೌಢ್ಯತೆಗೆ ಬಲಿಯಾಗುತ್ತಿದ್ದಾರೆ.

ಚುನಾವಣೆ ಸಮಯದಲ್ಲಿ ಜೋತಿಷಿಗಳು ಜನ್ಮ ಕುಂಡಲಿಗಳನ್ನು ಕಾಣಿಸಿ ಫಲಿತಾಂಶದ ಬಗ್ಗೆ ಭವಿಷ್ಯ ನುಡಿಯುತ್ತಾರೆ. ಆದರೆ ಒಬ್ಬೊಬ್ಬರದು ಒಂದು ರೀತಿ ಬಂದಿರುತ್ತದೆ. ಒಂದು ವೇಳೆ ಅದು ಸತ್ಯವಿದ್ದರೆ ಗಣಿತದ ಉತ್ತರ ಹೇಗೆ ಒಂದೇ ಬರುತ್ತದೋ ಹಾಗೆ ಎಲ್ಲರದೂ ಒಂದೇ ರೀತಿ ಬರಬೇಕಷ್ಟೆ. ಹುಡುಗ -ಹುಡುಗಿ, ತಾಯಿ - ತಂದೆ ಎಲ್ಲರಿಗೂ ಒಪ್ಪಿಗೆಯಾಗಿರುತ್ತದೆ. ಕೇವಲ ಜಾತಕ ಕೂಡಿಬಂದಿರಲಿಲ್ಲ ಎಂದು ಮದುವೆ ಮಾಡದಿರುವ ಪ್ರಸಂಗ ಕಾಣುತ್ತೇವೆ. ವೈಶ್ಯ ಸಮಾಜದಲ್ಲಂತೂ ಈ ಪ್ರವೃತ್ತಿ ಬಹಳ. ವೈದಿಕ ಧರ್ಮವನ್ನೇ ಅನುಸರಿಸುತ್ತಿದ್ದ ರಾಮ- ಸೀತೆ, ನಳ

-ದಮಯಂತಿ, ಪಾಂಡವರು -ದ್ರೌಪತಿ ಇವರ ಕಥೆಗಳನ್ನು ನೋಡಿದರೆ ಅವರ ಜಾತಕಗಳು ಏಕೆ ಅವರನ್ನು ಸುಖವಾಗಿ ಬಾಳಲು ಬಿಡಲಿಲ್ಲ ಎನಿಸುವುದಿಲ್ಲವೆ? "ಅವರುಗಳು ಸ್ವಯಂವರಗಳಲ್ಲಿ ಮದುವೆಯಾದರು; ಶಿವ ಧನುಸ್ಸನ್ನು ಮುರಿದ ರಾಮ ಸೀತೆಯನ್ನು, ಮತ್ಸ್ಯಭೇದನ ಮಾಡಿ ಪಾಂಡವರು ದ್ರೌಪತಿಯನ್ನು ವಿವಾಹವಾದರೂ ಜಾತಕ ನೋಡಿ ಅಲ್ಲ; ಅದಕ್ಕೆ ಕಷ್ಟಪಟ್ಟರು." ಎಂದು ಯಾರಾದರೂ ಜೋತಿಷಿಗಳು ಹೇಳಬಹುದು. ಅಂದರೆ ಇವರು ದೇವರೆಂದು ಆರಾಧಿಸುವ ರಾಮನೇ ಅನುಸರಿಸಲಿಲ್ಲ ಎಂದಾಗ ಇವರೇಕೆ ಅನುಸರಿಸಬೇಕು? ಹಾಗೆ ಜಾತಕ ನೋಡದ್ದೇ ತಪ್ಪು ಎನ್ನುವುದಾದರೆ ಹಾಗಾದರೆ ಇವರ ದೇವರಾದ ರಾಮ ಭವಿಷ್ಯವನ್ನರಿಯದ ಸಾಮಾನ್ಯ ಮನುಷ್ಯನೆನಿಸಿಕೊಳ್ಳುವನಲ್ಲವೆ? ಅದಕ್ಕಾಗಿ ಧರ್ಮಪಿತ ಬಸವಣ್ಣನವರ ಹೇಳುವುದು :

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ
ರಾಶಿ ಕೂಟ ಗಣ ಸಂಬಂಧ ಉಂಟೆಂದು ಹೇಳಿರಯ್ಯ
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯ
ಲಿಂಗದೇವನ ಪೂಜಿಸಿದ ಫಲ ನಿಮ್ಮದಯ್ಯ.

ಇಲ್ಲಿ "ಎಮ್ಮವರು" ಎಂದರೆ ಸಹ ಧರ್ಮೀಯರು ಎಂದು ಅರ್ಥ. ತನ್ನ ಧರ್ಮದ ದೀಕ್ಷೆ ಹೊಂದಿದವರು ಕೇಳಿದರೆ, ಪ್ರಸ್ತಾಪಿಸಿದರೆ ಒಳ್ಳೆಯ ಹೊಂದಾಣಿಕೆ ಎಂದುಕೊಳ್ಳಬೇಕಂತೆ! ಶರಣ ಸಂಸ್ಕೃತಿಯಲ್ಲಿ ಏಕದೇವೋಪಾಸಕರಾಗಿ ಬೆಳೆದವರಿಗೆ ಬಹುದೇವತೋಪಾಸನೆಯ, ಮೂಢನಂಬಿಕೆಯ ಆಗರವಾದ ಸಂಗಾತಿ ಸಿಕ್ಕರೆ ಬಹಳ ಮಾನಸಿಕ ಹಿಂಸೆ. ಚಿಕ್ಕ ವಯಸ್ಸಿನಿಂದಲೂ ಗುರು - ಲಿಂಗ -ಜಂಗಮ ಪೂಜೆಯಲ್ಲಿ ನಿರತರಾದ ಕುಟುಂಬದಲ್ಲಿ ಅಂಥ ಸಂಸಾರವು ಇಬ್ಬೋಡಾಗುವುದು. ಆದ್ದರಿಂದ ಸಮಾನ ಸಂಸ್ಕೃತಿಯವರು ವಿವಾಹವಾದರೆ ಅಂಥ ಸಂಸಾರವು ಸುಖಮಯವಾಗುವುದು. ಅಂಥ ಸಂಬಂಧ ಒದಗಿದಾಗ ಯಾವ ಜ್ಯೋತಿಷಿಗಳನ್ನೂ ಕೇಳದೆ ರಾಶಿ, ಕೂಟ, ಸಮಾಜೋಧಾರ್ಮಿಕ (ಗಣ) ಸಂಬಂಧ ಕೂಡಿ ಬಂದಿಹುದೆಂದು ಭಾವಿಸಬೇಕು. ನಾಳೆ, ನಾಡಿದ್ದು ಒಪ್ಪಂದ (ನಿಶ್ಚಯ) ಮಾಡುತ್ತೇವೆ ಎಂಬುದರ ಬದಲಿಗೆ ಇಂದೇ ನಿಶ್ಚಯಿಸುತ್ತೇವೆ ಎಂದುಕೊಳ್ಳಬೇಕು. ಲಿಂಗದೇವನನ್ನು ಇಷ್ಟಲಿಂಗ ರೂಪದಲ್ಲಿ ಪೂಜಿಸುವ ಸಮಾನ ಧರ್ಮೀಯರ ಹೊಂದಾಣಿಕೆ ಬಹಳ ಚಂದ. ಈ ವಚನದ ಪ್ರಕಾರ ಜಾತಕದ ಹೊಂದಾಣಿಕೆಗಿಂತಲೂ ಧಾರ್ಮಿಕ ತಾತ್ವಿಕ ಮತ್ತು ಮಾನಸಿಕ ಹೊಂದಾಣಿಕೆ ಮುಖ್ಯವಾಗಿದೆ.

2. ಮುಹೂರ್ತ : ಜನರು ಅತ್ಯಂತ ಕಾಳಜಿಯಿಂದ ಮತ್ತು ಗಾಬರಿಯಿಂದ ಪಾಲಿಸುವ ಮತ್ತೊಂದು ನಂಬಿಕೆ ಎಂದರೆ ಮುಹೂರ್ತ ನೋಡುವಿಕೆ. ಒಬ್ಬ ಹುಲು ಮಾನವನಾದ ಜ್ಯೋತಿಷಿ ಕೋಟಿ ಕೋಟಿ ಮೈಲಿ ದೂರವಿರುವ ಮಂಗಳ, ಬುಧ, ಗುರು, ಶನಿ ಇತ್ಯಾದಿಗಳ ಸಂಚಾರ ಕುರಿತು ಲೆಕ್ಕಾಚಾರ ಮಾಡಿ ಮುಹೂರ್ತವನ್ನು ಹೇಳುವನು. ಆ ಸಮಯದಲ್ಲೇ ವಿವಾಹವು ನೆರವೇರಬೇಕೆಂದು ವರ ಕನ್ಯೆಯರ ಮಾತಾಪಿತೃಗಳು ಚಟಪಟಿಸುವರು. ಪ್ರಸಿದ್ಧ ಗಣಿತ ಶಾಸ್ತ್ರಜ್ಞ, ಜೋತಿಷಿ ಭಾಸ್ಕರಾಚಾರ್ಯನ ಮಗಳು ಬಹು ಬೇಗನೆ ವಿಧವೆಯಾದಳು. ಮುಹೂರ್ತಗಳನ್ನು ನೋಡಿಯೇ ಮದುವೆ ಮಾಡಿರಬಹುದಾದ ರಾಮ - ಸೀತೆ, ನಳ -ದಮಯಂತಿ, ಪಾಂಡವರು ಒಂದು ದಿನವೂ ಸುಖವಾಗಿ ಸಂಸಾರ ಮಾಡಲಿಲ್ಲ. ಮುಹೂರ್ತ ನೋಡಿ ಮದುವೆ ಮಾಡಿದ ದಂಪತಿಗಳೆಲ್ಲರೂ ಸುಖವಾಗಿಯೇ ಇರುವರೆ?

ಶರಣ ಧರ್ಮದ ಪ್ರಕಾರ,

ಅಂದು ಇಂದು ಮತ್ತೊಂದೆನಬೇಡ
ದಿನವಿಂದೇ ಹರ ಶರಣೆಂಬವಗೆ
ದಿನವಿಂದೇ ಶಿವ ಶರಣೆಂಬವಗೆ
ದಿನವಿಂದೇ ಲಿಂಗದೇವ ನಿಮ್ಮ ಮಾಣದೆ ನೆನೆವಂಗೆ

ಶರಣ ಬಂಧುಗಳಿಗೆ ಅನುಕೂಲಕರವಾದ ಸಮಯವೇ ಶುಭ ಸಮಯ, ದಿನವೇ ಶುಭದಿನ.

ಪ್ರವಚನ ಕೇಳಿ, ವಚನ ಸಾಹಿತ್ಯ ಓದಿ ತಾವು ಪ್ರಗತಿಪರರು ಎಂದು ಭಾವಿಸುವ ಕೆಲವು ಜನರು ತಮಗೆ ಅರಿವಿಲ್ಲದೆ ತಪ್ಪು ಮಾಡುವುದುಂಟು. ಹೇಗೆಂದರೆ, ಪಂಚಾಂಗ, ಜ್ಯೋತಿಷಿ, ಕ್ಯಾಲೆಂಡರ್ ಪ್ರಕಾರ ಕೆಲವು ದಿನಗಳಂದು ಮದುವೆ ಮುಹೂರ್ತವಿದೆ ಎಂದು ಕೊಡಲಾಗಿರುತ್ತದೆ. ಪ್ರಗತಿಪರ ಬಸವ ಧರ್ಮೀಯರು ಬೇರೆ ದಿನಗಳಂದು ವಿವಾಹ ಏರ್ಪಡಿಸಬೇಕು. ಇವರು, ಮುಹೂರ್ತವಿದೆ ಎಂದು ಸಾಂಪ್ರದಾಯಿಕ ಜ್ಯೋತಿಷ್ಯ ಹೇಳಿದ ದಿನದಿಂದೇ ಏಕೆ ವಿವಾಹವನ್ನು ಏರ್ಪಡಿಸಬೇಕು?!

ಇನ್ನೊಂದು ಹಾಸ್ಯಾಸ್ಪದ ವಿಷಯ, "ಶರಣ ಸಮ್ಮತವಾದ ಶುಭಸಮಯ" ಎಂದು ಬರೆದು ಬೆಳಿಗ್ಗೆ 8 ಗಂಟೆಗೋ, 9 ಗಂಟೆಗೋ ಮದುವೆ ಮುಹೂರ್ತ ನಿಗದಿಪಡಿಸಿರುತ್ತಾರೆ. ಇದು ಅನುಕೂಲಕರ ಸಮಯವಲ್ಲವೇ ಅಲ್ಲ. ಮದುವೆಗೂ ಭರ್ಜರಿ ಊಟಕ್ಕೂ ನಂಟು. ಬೆಳಿಗ್ಗೆ 9 ಗಂಟೆಗೆ ಅಕ್ಕಿಕಾಳು ಹಾಕಿ ಹೋಗಿ ಭೂರಿ ಭೋಜನ ಮಾಡಲು ಸಾಧ್ಯವೇ ಇಲ್ಲವಷ್ಟೆ. ಅದು ಉಪಾಹಾರದ ಸಮಯ. ಸೂಕ್ತ ಸಮಯವೆಂದರೆ ಮಧ್ಯಾಹ್ನ 12-30. ಮಾಂಗಲ್ಯ ಧಾರಣೆ ನಂತರ ಅಕ್ಕಿಕಾಳು ಹಾಕಿ ಜನರು ಊಟಕ್ಕೆ ಹೋಗಲು ಸೂಕ್ತ ಸಮಯ.

ಮದುವೆಯು ಜೀವನದಲ್ಲಿ ಒಮ್ಮೆ ಘಟಿಸುವ ಮಂಗಲ ಕಾರ್ಯ. ನಿಧಾನವಾಗಿ ಸಂತೋಷದಿಂದ ಸಾಗಬೇಕು. ಮುಹೂರ್ತದ ದಾಸರು ಗಡಿಬಿಡಿ ಮಾಡಿ ತಾಳಿ ಕಟ್ಟಿಸಿಬಿಡುವರು. ತಾಳಿ ಕಟ್ಟುವುದಷ್ಟೇ ಮುಖ್ಯ ಪ್ರಸಂಗವಲ್ಲ ಗುರು ಬಸವ ಪೂಜೆ, ಕಂಕಣ ಧಾರಣೆ, ಧಾರೆ, ಪ್ರತಿಜ್ಞೆ, ಮಾಂಗಲ್ಯ ಧಾರಣೆ, ಅಕ್ಷತಾರೋಪಣೆ - ಎಲ್ಲವೂ ಧಾರ್ಮಿಕವಾಗಿ ಮುಖ್ಯವೆ. ಆದರೂ ಅಜ್ಞಾನಿಗಳು ಕಾಲವನ್ನು ತಾವೇ ಅಳೆಯುವ ರೀತಿ ಮುಹೂರ್ತ ನಿಗದಿ ಮಾಡುವರು.

3. ಮದುವೆ ಆಹ್ವಾನ ಪತ್ರದೊಡನೆ ಅಕ್ಕಿಕಾಳು -ವ್ಯರ್ಥ : ವಿವಾಹದ ಆಹ್ವಾನ ಪತ್ರ ಕಳಿಸುವಾಗ ಕವರಿನಲ್ಲಿ ಅಕ್ಕಿಕಾಳು ಹಾಕಿ ಕಳಿಸುವರು. ಇದು ಅರ್ಥರಹಿತ. ಇದರಿಂದ ಯಾವ ಉದ್ದೇಶವೂ ಸಫಲವಾಗುವುದಿಲ್ಲ. ವಿವಾಹದ ಆಮಂತ್ರಣ ಎಂದು ತಿಳಿಸಲಿಕ್ಕೆ ಆಹ್ವಾನ ಪತ್ರವೇ ಇರುತ್ತದೆ. ಇನ್ನು ಆ ಅಕ್ಕಿ ಕಾಳನ್ನು ತಂದು ನವ ದಂಪತಿಗಳ ಮೇಲೆ ಹಾಕುವ ಉದ್ದೇಶವಿರುತ್ತದೆ ಎನ್ನುವುದಾದರೆ, ಸಾಮಾನ್ಯವಾಗಿ ಯಾರೂ ಜೊತೆಗೆ ಅಕ್ಕಿ ಕಾಳನ್ನು ಒಯ್ಯುವುದಿಲ್ಲ. ಅನವಶ್ಯಕವಾಗಿ ಆ ಅಕ್ಕಿ ಕಾಳುಗಳು ವ್ಯರ್ಥವಾಗುತ್ತವೆ.

4. ಅಕ್ಕಿ ಕಾಳು ವಿತರಣೆ - ಬೇಡ : ಮಾಂಗಲ್ಯಧಾರಣೆ, ಅಕ್ಷತಾರೋಪಣೆಯ ಮೊದಲು ಸಭಿಕರೆಲ್ಲರಿಗೆ ಅಕ್ಕಿ ಕಾಳನ್ನು ವಿತರಿಸಲಾಗುವುದು. ವೇದಿಕೆ ಮೇಲೆ ಗುರುಗಳು, ಪುರೋಹಿತರು, ಹಿರಿಯರು ಅಕ್ಕಿ ಕಾಳು ಹಾಕುತ್ತಲೇ ಸಭೆಯಲ್ಲಿ ಕೂತವರೂ ಎರಚುತ್ತಾರೆ. ಆ ಕಾಳುಗಳು ಎಂದೋ ಮದುವೆ ಆದವರ ಮೇಲೆ, ಮದುವೆಯಾಗಿ ಗಂಡ/ಹೆಂಡತಿ ಸತ್ತ ವಿಧವೆ/ ವಿಧುರರ ಮೇಲೆ, ಇನ್ನೂ ಮದುವೆ ಆಗದ ಹುಡುಗಿ/ ಹುಡುಗರ ಮೇಲೆ ಬೀಳಬಹುದು. ಅಕ್ಷತೆ ಹಾಕುವ ಉದ್ದೇಶವೇ ಸಫಲವಾಗದು. ಅದಕ್ಕಾಗಿಯೇ ನಾವು ಅಕ್ಷತೆಯನ್ನು ಸಭೆಯಲ್ಲಿ ಹಂಚಿಸದೆ ವೇದಿಕೆ ಮೇಲೆ ಇದ್ದವರಷ್ಟೆ ಹಾಕಲು ಏರ್ಪಾಡು ಮಾಡುತ್ತೇವೆ.

5. ಕಾಲು ತೊಳೆದು ಕನ್ಯಾದಾನ : ಮದುವೆ ಮಂಟಪಕ್ಕೆ ಬಂದಾಗ ಅಳಿಯನ ಪಾದವನ್ನು ಅತ್ತೆ-ಮಾವ ತೊಳೆಯುವರು. ವೈದಿಕ ಸಂಪ್ರದಾಯದಲ್ಲಿ ಕಾಲು ತೊಳೆದು ಕನ್ಯಾದಾನ ಮಾಡಬೇಕು ಎಂದಿದೆ. ಇದು ಶರಣ ಧರ್ಮದ ಪ್ರಕಾರ ತಪ್ಪು. 1. ಕನ್ಯೆ ದಾನ ಕೊಡುವ ವಸ್ತುವಲ್ಲ ಜೀವನ ಸಂಗಾತಿ, ಸಹ ಧರ್ಮಿಣಿ. ಗಂಡ ಮಗಳನ್ನು ಮದುವೆ ಮಾಡಿಕೊಂಡು ಉಪಕಾರ ಮಾಡುತ್ತಾನೆ ಎಂಬ ಭಾವವಲ್ಲಿದೆ. ಇದು ತಪ್ಪು. ತನ್ನ ಜೀವನ ಸಂಗಾತಿಯನ್ನು ಪಡೆದು ಅವನೇ ಉಪಕೃತನಾಗುತ್ತಾನಷ್ಟೆ! ವಿಚಾರ ಶೀಲರಾದ ತರುಣರು ಅತ್ತೆ - ಮಾವರ ಕೈಯಿಂದ ಪಾದಪೂಜೆ ಮಾಡಿಸಿಕೊಳ್ಳಬಾರದು. ಇದು ನಿಷೇಧಾರ್ಹ.

6. ಗಂಡು ಕಾಲುಂಗುರ ತೊಡಿಸಬಾರದು : ಗಂಡಿನಿಂದ ಹೆಣ್ಣಿಗೆ ಮಾಂಗಲ್ಯ ಧಾರಣೆಯಾದ ಮೇಲೆ ಹೆಣ್ಣಿಗೆ ಕಾಲುಂಗುರವನ್ನು ತೊಡಿಸಲಾಗುವುದು. ಕೆಲವು ಕಡೆ ಗಂಡನಿಂದಲೇ ಕಾಲುಂಗುರ ಹಾಕಿಸಲಾಗುವುದು. ಇದು ತಪ್ಪು. ಏಕೆಂದರೆ ಗಂಡನು ಹೆಂಡತಿಯ ಪಾದ ಸೇವಕನಲ್ಲ.

ಇಬ್ಬರೂ ಸಮಾನರು. ಹುಡುಗಿಯ ಕಡೆಯ ಬಂಧುಗಳಲ್ಲಿ ಒಬ್ಬ ಮಹಿಳೆ ಕಾಲುಂಗುರ ತೊಡಿಸಬೇಕು.

7. ಕಾಶೀಯಾತ್ರೆ : ವರನು ಕಾಶೀಯಾತ್ರೆ ಎಂದು ಹೋಗುವುದುಂಟು (ಹೋಗುವಂತೆ ನಟಿಸುವುದುಂಟು) ಅವನನ್ನು ಪುಸಲಾಯಿಸಿ, ಮನವೊಲಿಸಿ ಕರೆತರುವುದುಂಟು. ಹಿಂದೆ ಯಾವಾಗಲಾದರೂ ಒಮ್ಮೆ ತಾಯಿ ತಂದೆ ಮದುವೆ ಮಾಡದ್ದಕ್ಕೆ ಮಗನು ಕಾಶಿಗೆ ಹೋಗುತ್ತೇನೆ ಎಂದು ಕೃತಕ ವೈರಾಗ್ಯ ತಾಳಿ ಹೊರಟಿರಬಹುದು. ತಾಯಿ ತಂದೆ ಮನವೊಲಿಸಿ ಕರೆತಂದು ಮದುವೆ ಮಾಡಿರಬಹುದು. ಆದರೆ ಇದನ್ನೇ ಒಂದು ಸಂಪ್ರದಾಯವೆಂಬಂತೆ ಕೆಲವರು ಆಚರಿಸುತ್ತಿರುವುದು ನಿಜಕ್ಕೂ ಹಾಸ್ಯಾಸ್ಪದ. ಅಂದು ಕಾಶೀಯಾತ್ರೆ ಕೈಗೊಳ್ಳುವುದು ದುಸ್ಸಾಹಸವಾಗಿತ್ತು. ಇಂದು ಅದೇನೂ ಕಷ್ಟದಾಯಕವಲ್ಲದ್ದರಿಂದ ಬೆದರಿಕೆಯ ಸೂತ್ರವೇನಲ್ಲ.

8. ನಕ್ಷತ್ರ ವೀಕ್ಷಣೆ : ಆಕಾಶವನ್ನು ತೋರಿಸಿ ನಕ್ಷತ್ರ ದರ್ಶನ ಎಂದು ಮಾಡಿಸುವುದುಂಟು. ಇದೂ ಸಹ ಈ ಕಾಲದಲ್ಲಿ ಹಾಸ್ಯಾಸ್ಪದ. ಆದ್ದರಿಂದ ವಿವಾಹ ಕ್ರಮದಲ್ಲಿ ಅಸಂಬದ್ಧವಾದ ಆಚರಣೆಗಳನ್ನು ಬಿಟ್ಟು ಇಂದಿನ ಕಾಲಕ್ಕೆ ಸಮಂಜಸ ಎನಿಸಿಕೊಳ್ಳುವ ಆಚರಣೆಗಳನ್ನು ಬೆಳೆಸಿ ಕೊಳ್ಳುವುದು ಅತ್ಯಂತ ಸೂಕ್ತ. ತೆಂಗಿನಕಾಯಿಯಂತಹ 8 -10 ರೂ ಬೆಲೆಬಾಳುವ ವಸ್ತುವನ್ನು ಕೊಡುಗೆಯಾಗಿ (ತಾಂಬೂಲವಾಗಿ) ಕೊಡುವ ಬದಲು ವಚನ ಸಾಹಿತ್ಯದ ಚಿಕ್ಕ ಚಿಕ್ಕ ಕೃತಿಗಳನ್ನು ಮುದ್ರಿಸಿ ಹಂಚುವುದು ಹೆಚ್ಚು ಅರ್ಥಗರ್ಭಿತ ಮತ್ತು ಉಪಯುಕ್ತ.

9. ಯಾದಿ ಮೆ ಶಾದಿ - ಎಂಬುದು ಮಹಾರಾಷ್ಟ್ರದಲ್ಲಿ ಇದು ಜನಪ್ರಿಯವಾಗುತ್ತಿದೆ. ಮೊದಲೊಮ್ಮೆ ನೋಡಿ ಬಂದಿದ್ದು, ಒಪ್ಪಿಗೆಯಾಗುವ ಸೂಚನೆ ಕಂಡರೆ ಕೆಲವೇ ಜನರು ಹೋಗಿ ಅಲ್ಲೇ ಸಂಕ್ಷಿಪ್ತವಾಗಿ ಮದುವೆ ಮುಗಿಸಿಬಿಡುತ್ತಾರೆ. ನಂತರ ಎರಡೂ ಮನೆಗಳವರು ತಮ್ಮ ತಮ್ಮ ಊರಲ್ಲಿ ಆರತಿ -ಅಕ್ಷತೆ ಇಟ್ಟುಕೊಂಡು ಬಂಧು - ಬಳಗವನ್ನು, ಮಿತ್ರರನ್ನು ಆಹ್ವಾನಿಸುತ್ತಾರೆ. ಇದು ಸಾಕಷ್ಟು ಅಪವ್ಯಯವನ್ನು ತಪ್ಪಿಸುತ್ತದೆ.

10. ಸರಳ ವಿವಾಹ : ಕೆಲವು ಶ್ರೀಮಂತರು ನಮ್ಮಲ್ಲಿ ನಿಶ್ಚಯ ಕಾರ್ಯವನ್ನೇ ಮದುವೆ ಎಂಬಂತೆ ಅದ್ದೂರಿಯಾಗಿ ಕಲ್ಯಾಣ ಮಂಟಪ ಗೊತ್ತುಪಡಿಸಿ ನೂರಾರು ಜನರನ್ನು ಕರೆದು ಲಕ್ಷಾಂತರ ರೂಪಾಯಿ ವ್ಯಯಿಸುವುದುಂಟು. ಇದು ಅಗತ್ಯವಿಲ್ಲ. ಸಾಂಕೇತಿಕವಾಗಿ ಕೆಲವರೇ ಸೇರಿ ನಿಶ್ಚಯ ಕಾರ್ಯ ಮಾಡಿ, ಮದುವೆಯನ್ನು ವಿವರವಾಗಿ ಮಾಡುವುದು ಸೂಕ್ತ. ಶ್ರೀಮಂತರು ವಿನಾ ಕಾರಣ ಅಪವ್ಯಯವಾಗುವುದನ್ನು ತಡೆಗಟ್ಟಿ ಆ ಹಣವನ್ನು ತಮ್ಮ ಮಕ್ಕಳಿಗೇ ಉಪಯೋಗಿಸಬಹುದು, ದಾನ ಧರ್ಮ ಮಾಡಲು ಸಾರ್ಥಕವಾಗಿ ಬಳಸಬಹುದು.

11. ಒಂದೇ ತಾಳಿ : ಮದುವೆಯ ವಿಧಿವಿಧಾನಗಳಲ್ಲಿ ಒಂದೊಂದು ಕಡೆ ಒಂದೊಂದು ರೀತಿ ಇದೆ. ಕೆಲವು ಅರ್ಥಗರ್ಭಿತ ಆಚರಣೆಗಳಾದರೆ ಮತ್ತೆ ಕೆಲವು ಅರ್ಥರಹಿತ. ಅದಕ್ಕೆ ನಾನು ಕ್ರೋಢೀಕರಿಸಿ ಏಕರೂಪದ ಮದುವೆಯ ವಿಧಿ - ವಿಧಾನಗಳು ಆಚರಣೆಗೆ ಬರುವಂತೆ ಬಸವ ಧರ್ಮ ಸಂಸ್ಕಾರ ಪುಸ್ತಕದಲ್ಲಿ ಬರೆದಿದ್ದೇನೆ.

ಚಿತ್ರದುರ್ಗ ಭಾಗದಲ್ಲಿ ಒಂದೇ ತಾಳಿಯನ್ನು ಸ್ವಲ್ಪ ಅಗಲವಾಗಿ ಗುಂಡಾಗಿ ಇರುವುದನ್ನು ಕಟ್ಟಿಕೊಳ್ಳಲಾಗುವುದು. ಉತ್ತರ ಕರ್ನಾಟಕದಲ್ಲಿ ಎರಡು ತಾಳಿ ಕಟ್ಟುವರು, ಒಂದು ತೌರು ಮನೆಯದಂತೆ ಇನ್ನೊಂದು ಗಂಡನ ಮನೆಯದಂತೆ. ಇದು ಅರ್ಥರಹಿತ. ತೌರು ಮನೆಯ ಸಂಬಂಧ ಕಡಿದುಕೊಂಡು ಗಂಡನ ಮನೆ ಸೇರುವುದೇ ಮಾಂಗಲ್ಯಧಾರಣೆಯ ಉದ್ದೇಶ. ಪತಿಯು ಮಾಂಗಲ್ಯಧಾರಣೆ ಮೂಲಕ ಕನ್ಯೆಯನ್ನು ತನ್ನ ಸೊತ್ತನ್ನಾಗಿ ಮಾಡಿಕೊಳ್ಳುವನು. ಒಬ್ಬ ಲಿಂಗದೇವ ಪತಿಯ ಕುರುಹಾಗಿ ಹೇಗೆ ಒಂದು ಇಷ್ಟಲಿಂಗವನ್ನು ಕಟ್ಟಿಕೊಳ್ಳಲಾಗುವುದೋ ಹಾಗೆ, ಒಬ್ಬ ಪತಿಯ ಕುರುಹಾಗಿ ಒಂದು ತಾಳಿಯನ್ನು ಕಟ್ಟಿಕೊಳ್ಳಬೇಕು. ಮತ್ತು ಇದು ನಮ್ಮ ಧರ್ಮದ ವಿಶೇಷ ಚಿಹ್ನೆಯಾಗಿರುವ ಷಟ್ಕೋನ, ಇಷ್ಟಲಿಂಗದ ಚಿತ್ರವನ್ನು ಒಳಗೊಂಡಿರಬೇಕು.

ಹೀಗೆ ಮದುವೆಯ ಕಾರ್ಯಕ್ರಮ ಆನಂದೋಲ್ಲಾಸದಿಂದ ಅರ್ಥಗರ್ಭಿತವಾಗಿ ನಡೆಯುವ ಧಾರ್ಮಿಕ ಆಚರಣೆಯಾಗಬೇಕೇ ವಿನಾ ಅರ್ಥರಹಿತ ಆಡಂಬರವಾಗಬಾರದು.

- ಮಾತಾಜಿ

ಬಸವ ವಚನಾಮೃತ

203. ದಾಸೋಹದ ಮರ್ಮ

ಮಾಡಿ ನೀಡಿ ಲಿಂಗವ ಪೂಜಿಸಿಹೆನೆಂಬುವವರು ನೀವೆಲ್ಲಾ ಕೇಳಿರಣ್ಣಾ;
ಹಾಗದ ಕೆರಹ ಹೊರಗೆ ಕಳೆದು
ದೇಗುಲಕ್ಕೆ ಹೋಗಿ ದೇವರಿಗೆ ನಮಸ್ಕಾರವ ಮಾಡುವವನಂತೆ -
ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ
ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು
ಲಿಂಗದೇವನ ಶರಣರಿಗೆ ಸವೆಸಲೇಬೇಕು. -ಬ.ವ.ದೀ.201

ಬಸವ ಪಥವನ್ನು ಹಿಡಿದ ಅನೇಕ ಶರಣರು ನಿಷ್ಠೆಯಿಂದ ಇಷ್ಟಲಿಂಗಾರ್ಚನೆ ಮಾಡುವರು, ಜಂಗಮದಾಸೋಹಕ್ಕೆ ನೀಡುವರು. ಇಂಥವರಿಗೆ ಒಂದು ಮರ್ಮವನ್ನು ಪ್ರಸ್ತುತ ವಚನದಲ್ಲಿ ಧರ್ಮಪಿತರು ಬೋಧಿಸುವರು. ದಾಸೋಹವು ಒಂದು ಸಹಜ ಕ್ರಿಯೆಯಾಗಬೇಕು; ಸಮಯೋಚಿತವಾಗಿ ಇರಬೇಕು. ಕೀರ್ತಿವಾರ್ತೆಗಾಗಿ ಉದ್ದೇಶಪೂರ್ವಕವಾಗಿ ಮಾಡುವ ಕ್ರಿಯೆಯು ಹೇಗೆಂದರೆ, ಹಾಗದಷ್ಟು ಬೆಲೆಯ ಮೆಟ್ಟುಗಳನ್ನು ದೇಗುಲಗಳ ಹೊರಗೆ ಬಿಟ್ಟು ದೇವರ ದರ್ಶನಕ್ಕೆಂದು ಒಳಗೆ ಹೋದರೆ, ಕೆರಹುಗಳ ಧ್ಯಾನವೇ ಜಾಸ್ತಿ ಇರುತ್ತದೆ. ಯಾರು ಒಯ್ಯುವರೋ ಏನೋ ಎಂಬ ಆತಂಕದಿಂದ ಬೇಗ ಬೇಗನೆ ದರ್ಶನ ಮಾಡಿ ಹೊರ ಬರುವ ಆತುರ ಇರುತ್ತದೆ. ಇದು ತಮಾಷೆಯಲ್ಲವೆ? ದೇಗುಲಕ್ಕೆ ಹೋಗಿ ಕೆರಹುಗಳ ಧ್ಯಾನ ಮಾಡುವುದಕ್ಕಿಂತಲೂ ಮನೆಯಲ್ಲಿ ಕುಳಿತು ದೇವರ ಧ್ಯಾನ ಮಾಡುವುದೇ ಫಲಪ್ರದಾಯಕವಲ್ಲವೆ? ಹಾಗೆ, ಕೀರ್ತಿವಾರ್ತೆಗಾಗಿ ಹೊಗಳಿಸಿಕೊಳ್ಳಲು ಮಾಡುವ ದಾಸೋಹವು ಇನ್ನೂ ಹೆಚ್ಚು ಹೊಗಳಿಕೆ ಬೇಕು ಎಂದು ಎಲ್ಲರಿಂದಲೂ ಅದನ್ನೇ ನಿರೀಕ್ಷಿಸುವುದು.

ಅದೇ ರೀತಿ ಮನಸ್ಸಿನ ಶಾಂತಿಯನ್ನು ಕೆಡಿಸುವ ವಸ್ತು ಮತ್ತೊಂದೆಂದರೆ ಸಂಪತ್ತು. ಮೊದಮೊದಲು ಅದನ್ನು ಗಳಿಸುವ ಚಿಂತೆ, ನಂತರ ಅದನ್ನು ಉಳಿಸಿಕೊಳ್ಳುವ ಚಿಂತೆ. ಧನವನಿರಿಸದಿರಾ, ಇರಿಸಿದರೆ ಭವ ಬಪ್ಪುದು. ಎನ್ನುತ್ತಾರೆ ಧರ್ಮಪಿತರು. ಇಲ್ಲಿ ಧನ ಎಂದರೆ ಸಂಪತ್ತು, ಕರ್ಮಗಳ ಸಂಚಯವೂ ಒಂದು ನಿಧಿಯೆ. ಅದನ್ನು ಉಳಿಸಿಕೊಂಡರೂ ಪುನರ್ಜನ್ಮ ತಪ್ಪಿದ್ದಲ್ಲ. ಹಾಗಾದರೆ ಏನು ಮಾಡಬೇಕು? ಸಂಪತ್ತು ಬಂದಂತೆಲ್ಲ ಆದಾಯಕ್ಕೆ ತಕ್ಕಂತೆ ಸತ್ಕಾರ್ಯಕ್ಕೆ ವಿನಿಯೋಗಿಸಬೇಕು. ಆಗ ಅದು ಕರ್ಮ ಸಂಚಯ ಕರಗಲು ಸಹಾಯಕವಾಗುವುದು. ಸವೆಸುವುದು - ಎಂದರೆ ಯಾವ್ಯಾವದಕ್ಕೋ ವಿನಿಯೋಗಿಸುವುದಲ್ಲ, ಶರಣರಿಗೆ ಅದು ವಿನಿಯೋಗವಾಗಬೇಕು. ತನ್ನ ಧರ್ಮ - ಸಮಾಜ - ಸಂಸ್ಕೃತಿಗಳ ಏಳ್ಗೆಗೆ ಉಪಯುಕ್ತವಾಗಬೇಕು.

204. ಉಣ್ಣುವುದರಲ್ಲೇ ಸಾರ್ಥಕತೆ ಇಲ್ಲ

ಉಂಡುದು ಬಂದಿತ್ತೆಂಬ ಸಂದೇಹಿ ಮಾನವ ನೀ ಕೇಳಾ;
ಉಂಡುದೇನಾಯಿತ್ತೆಂಬುದ ನಿನ್ನ ನೀ ತಿಳಿದು ನೋಡಾ
ಉಂಡುದು ಆಗಳೇ ಅಪೇಯವಾಯಿತ್ತು,
ಆ ಉಂಡುದನುಣಬಂದ ಹಂದಿಯು ಬಾಳುವೆಯವರ ಕಂಡು
ಅನು ಮರುಗುವೆನಯ್ಯಾ, ಲಿಂಗದೇವಾ - ಬ.ವ.ದೀ.202

ಕೆಲವು ಜನರು ದಾನ ಧರ್ಮ ಮಾಡಲು ಕೇಳಿದಾಗ ಹೇಳುವುದುಂಟು, ಮಂದಿಗೆ ಕೊಟ್ಟರೆ ಏನು ಬರುತ್ತೆ, ಮಕ್ಕಳು ಮರಿ ಮನೆಯವರೆಲ್ಲ ಚೆನ್ನಾಗಿ ಉಂಡು ತಿಂದು ಸುಖವಾಗಿರಬೇಕು ಎಂದು. ಇವರು ಸ್ವಹಿತಾಸಕ್ತರು. ತಾನು ಜೀವಿಸಲು ತನ್ನ ಸುತ್ತಲೂ ಇರುವ ಪ್ರಕೃತಿ, ಸಮಾಜ ಎಷ್ಟು ಕಾಣಿಕೆಯನ್ನು ನೀಡಿರುತ್ತದೆ ಎಂಬ ಅರಿವು ಪ್ರತಿಯೊಬ್ಬನಿಗೆ ಇರಬೇಕಷ್ಟೆ. ತಾನು ಉಂಡಿದ್ದು ತನಗೆ ಇರುತ್ತೆ ಎಂಬುದು ಎಷ್ಟು ಸರಿ? ಉಂಡಿದ್ದು ಬೆಳಗಿಗಾಗಲೇ ಅಪೇಯವಾದ ಮಲದ

ರೂಪ ತಾಳಿರುತ್ತದೆ. ಅದನ್ನು ತಿನ್ನಲು ಹಂದಿಗಳು ಕಚ್ಚಾಡುತ್ತಿರುತ್ತವೆ. ಅದೇ ರೀತಿ ಲೋಭಿಗಳು ಬೇರೆಯವರಿಗೆ ಶೋಷಣೆ ಮಾಡಿ, ವಂಚನೆ ಮಾಡಿ ತಿನ್ನುವುದೂ ಸಹ ಹಂದಿ ಮಲವನ್ನು ಭುಂಜಿಸಿದಂತೆ. ಇಂಥ ಸ್ವಾರ್ಥಿಗಳನ್ನು ಕಂಡು ಮನಸ್ಸು ಬಹಳ ನೋಯುತ್ತದೆ ಎಂದು ಧರ್ಮಪಿತರು ವಿಷಾದಿಸುತ್ತಾರೆ.

205. ಹೆರರಿಗಿಕ್ಕುವ ಹೆಗ್ಗುರಿ

ಆಯುಷ್ಯ ಉಂಟು, ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ;
ಆಯುಷ್ಯವು ತೀರಿ ಪ್ರಳಯ ಬಂದಡೆ ಅರ್ಥವನುಂಬವರಿಲ್ಲ,
ನೆಲನನಗೆದು ಮಡುಗದಿರಾ - ನೆಲ ನುಂಗಿವಡುಗುಳುವುದೆ?
ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ!
ನಿನ್ನ ಮಡದಿಗಿರಲೆಂದಡೆ, ಮಡದಿಯ ಕೃತಕ ಬೇರೆ;
ನಿನ್ನೊಡಲು ಕೆಡೆಯಲು ಮತ್ತೊಬ್ಬನಿಗಡಕದೆ ಮಾಣ್ಬಳೆ?
ಹೆರರಿಗಿಕ್ಕಿ, ಹೆಗ್ಗುರಿಯಾಗಿ ಕೆಡಬೇಡ
ಲಿಂಗದೇವನ ಶರಣರಿಗೆ ಒಡನೆಯೇ ಸವೆಸುವುದು. - ಬ.ವ.ದೀ.203

ಸಂಪತ್ತನ್ನು ಸಂಗ್ರಹಿಸುವ ಲೋಭಿಯು ತನಗೆ ತುಂಬಾ ದೀರ್ಘ ಆಯುಷ್ಯವಿದೆ, ಸಾವು ಬರುವುದಿಲ್ಲವೇನೋ ಎಂಬಷ್ಟು ನಂಬಿಕೆಯಿಂದ ಸಂಪತ್ತನ್ನು ಸಂಗ್ರಹಿಸುವನು. ಕೆಲವು ಲೋಭಿಗಳು ಎಂದೆಂದೂ ಪರರಿಗೆ ಕೊಡದವರಾದರೆ ಮತ್ತೆ ಕೆಲವರು ತಾವು ಹೊಟ್ಟೆ ತುಂಬ ಉಣ್ಣದೆ ಮನೆಯ ಮಂದಿಗೂ ಇಕ್ಕದೆ ಧನವನ್ನು ಕೂಡಿಹಾಕುವುದುಂಟು. ಜೀವನದ ನಿಯಮದಂತೆ ಆಯುಷ್ಯ ತೀರಿ ಸಾವು ಎರಗಿದಾಗ ಆ ಸಂಪತ್ತನ್ನು ಅನುಭವಿಸುವವರೇ ಇಲ್ಲವಾಗುವರು. ಮತ್ತೆ ಕೆಲವರು ಕಳ್ಳಕಾಕರಿಗಂಜಿ ಅಥವಾ ಇನ್ನಿತರರಿಗೆ ಗೊತ್ತಾಗಬಾರದು ಎಂದು ಮನೆಯಲ್ಲಿ ಒಂದು ತಗ್ಗುತೋಡಿ ಹಣವನ್ನು, ಆಭರಣಗಳನ್ನು ಬಚ್ಚಿಡುವರು. ಇದನ್ನು ಯಾರಿಗೂ ತಿಳಿಸದೆ ವ್ಯಕ್ತಿಯು ಸತ್ತುಹೋದರೆ ಆ ನೆಲವೇನಾದರೂ ಸಂಪತ್ತನ್ನು ಕಕ್ಕುವುದೆ? ಆ ಸಂಪತ್ತೆಲ್ಲ ಭೂಮಿಯಲ್ಲೇ ಹುದುಗಿ ಹೋಗಿರುವುದು.

"ಎಲೈ ಲೋಭಿಯೇ ನೀನೂ ಉಣ್ಣದೆ, ಪರರಿಗೂ ಇಕ್ಕದೆ ಸಂಪತ್ತನ್ನು ಸಂಗ್ರಹಿಸಿ ಅದನ್ನು ಪುನಃ ಪುನಃ ಕಣ್ಣಿನಲ್ಲಿ ನೋಡಿ, ಸಂಭ್ರಮಿಸುತ್ತ ಮಣ್ಣಿನಲ್ಲಿ ತಗ್ಗು ತೋಡಿ ಮುಚ್ಚಿಟ್ಟು ಜೀವಿತ ಕಾಲದಲ್ಲಿ ಉಣ್ಣದೆ ಹೋಗುತ್ತೀಯೆ. ನೀನು ಸತ್ತ ನಂತರ ನಿನ್ನ ಮಡದಿಯು ಉಂಡು ಸುಖವಾಗಿ ಇರಲೆಂದು ಆಶಿಸುತ್ತೀಯೆ. ಆದರೆ ಆಕೆಯ ಮನದಿಂಗಿತವೇ ಬೇರೆ. ನಿನ್ನ ಶರೀರ ಬೀಳಲು ಆಕೆ ಮತ್ತೊಬ್ಬನಿಗೆ ಒಲಿಯುವುದಿಲ್ಲವೆ? ಧನವನ್ನು ಸಂಗ್ರಹಿಸಿಕೊಟ್ಟ ನಿನ್ನನ್ನೇ ನೆನೆಯುತ್ತ ಕೂರುವಳೆ? ಆದ್ದರಿಂದ ನೀನು ದುಡಿದು ಗಳಿಸಿದ್ದು ಸಾರ್ಥಕವಾಗಬೇಕು ಎಂದಿದ್ದರೆ ಲಿಂಗದೇವನ ಕಾರ್ಯಕ್ಕೆ ಶರಣರಿಗಾಗಿ ವಿನಿಯೋಗಿಸು; ವ್ಯರ್ಥವಾಗಿ ಇತರರಿಗೆ ಕೊಟ್ಟು ಹೆಗ್ಗುರಿಯಾಗಿ ಹೋಗಬೇಡ" ಎಂದು ಧರ್ಮಪಿತರು ಬೋಧಿಸುವರು.

206.ಮಾತಿನ ಶೂರರು

ತನು ಮನ ಧನವ ಹಿಂದಿಕ್ಕಿಕೊಂಡು
ಮಾತಿನ ಬಣಬೆಯ, ಒಳಲೊಟ್ಟೆಯ ನುಡಿವವರು, ನೀವೆಲ್ಲ ಕೇಳಿರೆ
ತಲೆಯಿಲ್ಲದ ಕೋಲು ಹೊಳ್ಳು ಹಾರುವುದಲ್ಲದೆ
ಗುರಿಯ ತಾಗಬಲ್ಲುದೆ?
ಮಾಯಾಪಾಶ ಹಿಂಗಿ, ಮನದ ಗಂಟು ಬಿಡದನ್ನಕ್ಕ
ಲಿಂಗದೇವನೆಂತೊಲಿವನಯ್ಯಾ? - ಬ.ವ.ದೀ.204

ತನು ಮನ ಧನ - ಇವು ಮೂರು ಸಂಪತ್ತುಗಳು; ಪರಾರ್ಥಕ್ಕೆ ಬಳಸಲು ಸಹಾಯಕವಾಗುವಂಥವು. ಇವು ಮೂರನ್ನು ಯಾವ ರೀತಿಯಲ್ಲೂ ಬಳಸದೆ, ಸವೆಸದೆ ಬರೀ ಮಾತಿನ ಮಂಟಪ ಕಟ್ಟುತ್ತ ಹೋಗುವ ಭಕ್ತರಿಗೆ ಇಲ್ಲಿ ಉಪದೇಶವಿದೆ. ಮಾತಿನ ಬಣವೆ

ಕಟ್ಟುತ್ತ, ಪೊಳ್ಳು ಮಾತುಗಳನ್ನಾಡಿ ಇನ್ನೊಬ್ಬರನ್ನು ಮೆಚ್ಚಿಸುತ್ತ ಹೋಗುವವರು ನೀವು ಕೇಳಿರೆ ಎಂದು ಧರ್ಮಪಿತ ಬಸವಣ್ಣನವರು ಹೇಳುತ್ತಾರೆ. ಕೋಲು ನೇರವಾಗಿ ಸರಳವಾಗಿ ಇದ್ದರೆ ಎಸೆದರೆ ಗುರಿ ಮುಟ್ಟದು. ಬಾಣವಾದರೂ ಅಷ್ಟೆ ಒಂದು ಕಬ್ಬಿಣದ ಸರಳು ನೇರವಾಗಿ ಇರುತ್ತದೆ. ಅದನ್ನು ಎಸೆದರೆ ಅದು ಗುರಿ ತಾಗದು. ಅದರ ಹಿಂಬದಿಯಲ್ಲಿ ತುಸು ಭಾರವಾದ ಒಂದು ಗರಿಯನ್ನು, ಬಾಣದ ಮುಂಬದಿಗೆ ಚೂಪಾದ ಮೊನೆಯನ್ನು ಮಾಡಲಾಗುವುದು. ಅದೇ ರೀತಿ ಭಕ್ತಿಯು ಗುರಿ ತಾಗಿ ಲಿಂಗದೇವನನ್ನು ಮುಟ್ಟಬೇಕಾದರೆ ತನು ಮನ ಧನಗಳು ಸವೆದು ಮಾಯಾ ಪಾಶ ಹಿಂಗಬೇಕು, ಮನದಲ್ಲಿ ನಾನು ನನ್ನದು ನನ್ನಿಂದ ನನಗೆ ಎಂಬ ಗಂಟು ಬಿಚ್ಚಬೇಕು.

ಧನ ದಾಸೋಹ : ವ್ಯಕ್ತಿಯು ಗಳಿಸಿದ ಒಂದು ಭಾಗವನ್ನು ಸಮಷ್ಟಿಯ ಹಿತಕ್ಕಾಗಿ ಸವೆಸಬೇಕು.

ಮನ ದಾಸೋಹ : ಕೊಡಲು ಹಣವಿಲ್ಲದ್ದಿದ್ದರೇನಂತೆ ಉತ್ತಮ ಮಾತುಗಳಿಂದ ನೊಂದವರನ್ನು ಸಂತೈಸಬೇಕು. ತನ್ನಲ್ಲಿರುವ ವಿದ್ಯೆಯನ್ನು, ಜ್ಞಾನವನ್ನು ಇತರರಿಗೆ ಧಾರೆ ಎರೆಯಬೇಕು.

ತನು ದಾಸೋಹ : ಕೇವಲ ಹಣವನ್ನು ದಾನ ಮಾಡಿ ತನ್ನ ಪಾಡಿಗೆ ತಾನು ಇದ್ದರಾಗದು. ಧರ್ಮ ಪ್ರಚಾರದಲ್ಲಿ, ಗುರು ಲಿಂಗ ಜಂಗಮ ಸೇವೆಯಲ್ಲಿ ತನ್ನ ತನುವನ್ನು ತೊಡಗಿಸಬೇಕು.

207. ಮೂರು ಕತ್ತಿಗಳು

ತನು - ಮನ -ಧನವೆಂಬ ಮೂರು ಕತ್ತಿಯಿವೆ,
ಸಲೆ ಮೂಗಿನ ಮೇಲೆ ಅಯ್ಯಾ,
ಲಿಂಗ ಜಂಗಮಕ್ಕೆ ಮಾಡಿಹೆನೆಂಬವಂಗೆ !
ಇದು ಕಾರಣ, ಲಿಂಗದೇವರಿಗೆ ಅಂಜಲೇಬೇಕು - ಬ.ವ.ದೀ.205

.ದೇವರು ಕೊಟ್ಟ ಮೂರು ಸಂಪತ್ತು ತನು ಮನ ಧನ. ಇವೇ ಕತ್ತಿಯಾಗಿ ನೆತ್ತಿಯ ಮೇಲೆ ತೂಗಬಲ್ಲವು. ಏಕೆಂದರೆ ದೇವರು ಇವನ್ನು ಕೊಟ್ಟು ನಾವು ಇವನ್ನು ಹೇಗೆ ಬಳಸುತ್ತಿದ್ದೇವೆಂದು ಸದಾ ಪರೀಕ್ಷಿಸುತ್ತಿರುವನು. ಇವುಗಳ ದುರ್ಬಳಕೆಯು ಲಿಂಗದೇವನ ಕೋಪವನ್ನು ಆಹ್ವಾನಿಸಿದರೆ ನಿರ್ಬಳಕೆಯು ದೇವನ ಉದಾಸೀನತೆಗೆ ಕಾರಣವಾಗುತ್ತದೆ. ದೇವನು ಕೊಟ್ಟ ಈ ತ್ರಿವಿಧ ಸಂಪತ್ತನ್ನು ಪುನಃ ಅವನಿಗೆ ಸಮರ್ಪಿಸಬೇಕು.ಅದು ಸೇವೆಯ ಮೂಲಕ ಸಾಧ್ಯ. ಆದ್ದರಿಂದ ದೇವನಿಗೆ ಹೆದರಿಯಾದರೂ ನಾವು ತನು ಮನ ಧನಗಳನ್ನು ಸವೆಸಬೇಕು.

208.ಶರಣರಿಗೆ ಅಂಜಬೇಕು

ಸರ್ವಭೂತಾತ್ಮನೆಂಬ ಮಾತಿನ ಮಾಲೆಯಲ್ಲಿ ಹೋಗದು;
ತನು -ಮನ -ಧನವ ಗುರು ಲಿಂಗ ಜಂಗಮಕ್ಕೆ ಸವೆಸಲೇಬೇಕು.
ನಮ್ಮ ಲಿಂಗದೇವನ ಶರಣರಿಗೆ ಅಂಜಲೇಬೇಕು. - ಬ.ವ.ದೀ.206

ನಮ್ಮ ದೇಶದಲ್ಲಿ ತಿಪ್ಪೆಯ ಮೇಲೆ ಕುಳಿತು ಉಪ್ಪರಿಗೆಯ ಮಾತನಾಡುವ ಹವ್ಯಾಸ ಬಹಳ. ದೇವನು ಸರ್ವಭೂತಾತ್ಮನು; ಎಲ್ಲ ಜೀವಗಳಲ್ಲಿಯೂ ನೆಲೆಸಿದ್ದಾನೆ. ಎಲ್ಲವೂ ಬ್ರಹ್ಮಮಯ; ಇಂಥ ಆದರ್ಶ ಮಾತುಗಳನ್ನು ಬರಹದಲ್ಲಿ, ಭಾಷಣದಲ್ಲಿ ಎಲ್ಲರೂ ರಂಜನೀಯವಾಗಿ ಹೇಳುವರು. ಆದರೆ ಅದನ್ನು ಅನುಷ್ಠಾನ ಮಾಡುವವರು ಕಡಿಮೆ. ಎಲ್ಲ ಜೀವರುಗಳಲ್ಲಿ ದೇವನಿದ್ದಾನೆ ಎಂಬ ಉದಾತ್ತ ವಿಚಾರವನ್ನು ಮಾನವೀಯ ಕಾರ್ಯಗಳ ಮೂಲಕ ವ್ಯಕ್ತಪಡಿಸಬೇಕು. ಜೀವದಯೆಯನ್ನು ತೋರಿಸುವ ಮೂಲಕ ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮೂಲಕ ಹೃದಯ ವೈಶಾಲ್ಯವನ್ನು ಪ್ರದರ್ಶಿಸಬೇಕು. ಗಳಿಕೆಯು 1. ತನ್ನ ಸ್ವಂತ ಉಪಜೀವನಕ್ಕೆ ಬಳಕೆಯಾಗಬೇಕು. 2.ಮಾನವೀಯ ಕಾರ್ಯಕ್ಕೆ ವಿನಿಯೋಗಿಸಬೇಕು ಮತ್ತು 3. ತನ್ನ ಧರ್ಮದ ಏಳ್ಗೆಗೆ, ಪ್ರಚಾರಕ್ಕೆ ನೆರವಾಗಬೇಕು. ಉದಾತ್ತ ಆದರ್ಶಗಳನ್ನು ಕಲಿಸುವ ಶರಣರಿಗೆ ಭಕ್ತನು ಅಂಜಿ ಅವರ ಬೋಧೆ ಮಾರ್ಗದರ್ಶನದಂತೆ ನಡೆಯಬೇಕು.

209. ಆಡಂಬರದ ಭಕ್ತ

ಹಲವು ಮಣಿಯ ಕಟ್ಟಿ ಕುಣಿಕುಣಿದಾಡಿ,
ಹಲವು ಪರಿಯಲಿ ವಿಭೂತಿಯ ಪೂಸಿ
ಗಣಾಡಂಬರದ ನಡುವೆ ನಲಿನಲಿದಾಡಿ,
ಉಂಡು, ತಾಂಬೂಲವ ಕೊಂಡು ಹೋಹುದಲ್ಲ
ತನು -ಮನ -ಧನವ ಗುರು ಲಿಂಗ ಜಂಗಮಕ್ಕೆ ಸಮರ್ಪಿಸದವರ
ಲಿಂಗದೇವರೆಂತೊಲಿವರು. - ಬ.ವ.ದೀ.207

ರುದ್ರಾಕ್ಷಿ ಮಣಿಗಳನ್ನು ತಲೆಯಿಂದ ಕಾಲಿನವರೆಗೂ ವಿವಿಧ ಸ್ಥಳಗಳಲ್ಲಿ ಕಟ್ಟಿ, ಶರಣ ಸಮೂಹದೊಡನೆ ಆಡಿ, ಹಾಡಿ, ನರ್ತಿಸಿ, ಮೇಲಿನಿಂದ ಕೆಳಗಿನವರೆಗೆ ವಿಭೂತಿಯನ್ನು ಧರಿಸಿ ಸಮಾಜ ಬಂಧುಗಳು ಸೇರಿ ಉತ್ಸವಗಳನ್ನು ಮಾಡುವಲ್ಲಿ ನಲಿದಾಡಿ, ಊಟವನ್ನು ಮಾಡಿ ತಾಂಬೂಲವನ್ನು ಕೊಂಡು ದೊಡ್ಡ ಮನುಷ್ಯರಂತೆ ನಟಿಸಿ ಹೋಗುವುದು ದೊಡ್ಡ ಮಾತಲ್ಲ. ತಾವೂ ಸಹಿತ ಆಗಾಗ ಗುರು ಲಿಂಗ ಜಂಗಮ ಸೇವೆ, ಗಣಗೋಷ್ಠಿ, ಗಣ ದಾಸೋಹ ಇವುಗಳನ್ನು ಏರ್ಪಡಿಸಬೇಕು. ಅಂದರೆ ಮಾತ್ರ ಲಿಂಗದೇವನ ಒಲುಮೆ ಸಾಧ್ಯ.

210. ತ್ರಿವಿಧ ದಾಸೋಹ

ತನುವ ಕೊಟ್ಟು ಗುರುವನೊಲಿಸಬೇಕು
ಮನವ ಕೊಟ್ಟು ಲಿಂಗವನೊಲಿಸಬೇಕು
ಧನವ ಕೊಟ್ಟು ಜಂಗಮವನೊಲಿಸಬೇಕು
ಈ ತ್ರಿವಿಧವ ಹೊರಗು ಮಾಡಿ,
ಹರೆಯ ಹೊಯಿಸಿ ಕುರುಹ ಪೂಜಿಸುವವರ ಮೆಚ್ಚ
ಲಿಂಗದೇವ - ಬ.ವ.ದೀ.208

ಗುರು -ಅಂದರೆ ಧರ್ಮಗುರು ಎಂದು ಅರ್ಥ ಮಾಡಿದರೆ ಆಗ ತನುವ ಕೊಟ್ಟು ಗುರುವನೊಲಿಸಬೇಕು ಎಂಬುದರ ಮರ್ಮ ಪ್ರತಿಯೊಬ್ಬರೂ ತಮ್ಮನ್ನು ತಾವು ಧರ್ಮಪ್ರಚಾರದಲ್ಲಿ ತೊಡಗಿಸಿಕೊಳ್ಳಬೇಕು ಎಂಬುದು. ಉತ್ತಮ ತತ್ವಗಳನ್ನು ಸದಾ ಪ್ರಚಾರ ಮಾಡುತ್ತಿರಬೇಕು ಲಿಂಗದೇವನನ್ನು ಒಲಿಸಿಕೊಳ್ಳಲು ಕೇವಲ ಶರೀರ ದಂಡನೆಯಿಂದಾಗಲಿ, ಹಣವನ್ನು ವ್ಯಯಿಸುವುದರಿಂದಾಗಲಿ ಸಾಧ್ಯವಾಗದು; ಭಕ್ತನು ತನ ಮನಸ್ಸನ್ನು ದೇವನಿಗೆ ಸಮರ್ಪಿಸಬೇಕು. ಇನ್ನು ತ್ಯಾಗಿಗಳಿಗೆ, ಸಮಾಜಕ್ಕೆ ಕೇವಲ ತನು ಮನಗಳನ್ನು ಕೊಟ್ಟರೆ ಸಾಲದು ತನ್ನ ಆದಾಯದ ಒಂದು ಪಾಲನ್ನು ನಿರಂತರವಾಗಿ ಕೊಡುತ್ತಿರಬೇಕು. ಈ ತ್ರಿವಿಧ ಸಂಪತ್ತನ್ನು ಸ್ವಲ್ಪವೂ ವ್ಯಯಿಸದೆ ಹರೆಯ ಹೊಯಿಸಿ ಅಂದರೆ ನಗಾರಿ ಬಾರಿಸಿ ಸುದ್ದಿ ಮಾಡಿ, ಕೇವಲ ಯಾಂತ್ರಿಕವಾಗಿ ಇಷ್ಟಲಿಂಗ ಪೂಜೆ ಮಾಡಿದರೆ ಸಾಲದು, ಲಿಂಗದೇವನು ಮೆಚ್ಚಿಕೊಳ್ಳುವುದಿಲ್ಲ.

ಕೆಲವರು ದಾನಿಗಳು ಎಲ್ಲರ ಎದುರಿಗೆ ಠೀವಿಯಿಂದ ವಾಗ್ದಾನ ಮಾಡಿ ಸನ್ಮಾನ ಮಾಡಿಸಿಕೊಂಡು ಹೆಸರು ಪಡೆಯುವರು. ಎಂದೂ ಮಾತು ಕೊಟ್ಟಂತೆ ದೇಣಿಗೆ ಕೊಡುವುದಿಲ್ಲ. ಇಂಥವರನ್ನು ಕುರಿತೇ ಶರಣೆ. ಸತ್ಯಕ್ಕ ಹೇಳುತ್ತಾಳೆ, ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರದಂತೆ ಎಂದು.

211. ತ್ರಿವಿಧ ದಾಸೋಹ

ಆಡಿದಡೇನು, ಹಾಡಿದಡೇನು, ಓದಿದಡೇನು
ತ್ರಿವಿಧ ದಾಸೋಹವಿಲ್ಲದನ್ನಕ್ಕ?
ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ?
ಭಕ್ತಿಯಿಲ್ಲದವರನೊಲ್ಲ ಲಿಂಗದೇವ. - ಬ.ವ.ದೀ.209

ಅನೇಕ ನೃತ್ಯಪಟುಗಳು ಭಾವಪೂರ್ಣವಾಗಿ ನೃತ್ಯಾಭಿನಯ ಮಾಡುತ್ತ ಜನರನ್ನು ರಂಜಿಸುವರು. ಸಂಗೀತಗಾರರು ಭಾವ ತುಂಬಿ ಭಕ್ತಿಗೀತೆಗಳನ್ನು ಹಾಡುವರು. ಅನೇಕ

ಶಾಸ್ತ್ರಕೋವಿದರು ಧರ್ಮಶಾಸ್ತ್ರಗಳನ್ನು ಶಾಸ್ತ್ರೀಯವಾಗಿ ಓದುವರು. ಆದರೆ ಇವರಾರೂ ಭಕ್ತರಲ್ಲ, ಸಾಧಕರಲ್ಲ, ದಾರ್ಶನಿಕರೂ ಅಲ್ಲ. ಅದು ಅವರಿಗೆ ವೃತ್ತಿ ಮಾತ್ರ; ಯಾಂತ್ರಿಕವಾಗಿ ನವಿಲಿನಂತೆ ನರ್ತಿಸುವರು, ವಾದ್ಯಗಳ ತಂತಿಯಂತೆ ನಾದವನ್ನು ಹೊರಡಿಸುವರು, ಗಿಳಿಯಂತೆ ಶಾಸ್ತ್ರಗಳನ್ನು ಪಠಿಸುವರು. ನಿಜವಾದ ಸಾಧಕರು ತಾವು ಹಾಡುವ, ನುಡಿಯುವ ಮಾತನ್ನು ಸ್ವತಃ ಅನುಷ್ಠಾನ ಮಾಡುವರು. ತನು, ಮನ, ಧನಗಳ ದಾಸೋಹದ ಮೂಲಕ ತಮ್ಮನ್ನು ತಾವು ಗುರು ಲಿಂಗ ಜಂಗಮಕ್ಕೆ ಸಮರ್ಪಿಸಿಕೊಳ್ಳುವರು.

212. ದೇವನಿರುವುದು ತ್ರಿವಿಧ ದಾಸೋಹದಲ್ಲಿ

ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ!
ವೇದ ಘನವೆಂಬೆನೆ? ಪ್ರಾಣವಧೆಯ ಹೇಳುತ್ತಿದೆ!
ಶ್ರುತಿ ಘನವೆಂಬೆನೆ? ಮುಂದಿಟ್ಟರಸುತ್ತಿದೆ!
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ,
ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಲಿಂಗದೇವನ!

- ಬ.ವ.ದೀ.208

ಇಲ್ಲಿ ಶಾಸ್ತ್ರಗಳೆಂದರೆ ವೈದಿಕ ಶಾಸ್ತ್ರಗಳು. ಇವು ಭಕ್ತಿ, ಜ್ಞಾನಕ್ಕಿಂತಲೂ ಹೆಚ್ಚಾಗಿ ಕರ್ಮವನ್ನೇ ಬೋಧಿಸುತ್ತಿವೆ. ತೀರ್ಥಕ್ಷೇತ್ರ ಯಾತ್ರೆ, ಪ್ರಾಯಶ್ಚಿತ್ತ ಹೋಮ-ಹವನ, ಶ್ರಾದ್ಧ-ಪುಣ್ಯತಿಥಿ, ಪ್ರೇತಾತ್ಮ ಪೂಜೆ, ಪಿತೃಪಕ್ಷ ಆಚರಣೆ ಇತ್ಯಾದಿ ಇತ್ಯಾದಿ, ಕರ್ಮಾಚರಣೆಗಳಿಗೆ ಪ್ರಾಧಾನ್ಯತೆ ನೀಡುತ್ತಿವೆ. ವೇದಗಳೋ ಯಜ್ಞ-ಯಾಗಾದಿಗಳಲ್ಲಿ ಹೋತವನ್ನು, ಅಶ್ವವನ್ನು, ಆನೆಯನ್ನು ಬಲಿಕೊಡುವ ಪ್ರಾಣಿ ಹಿಂಸೆಯನ್ನು ಹೇಳುತ್ತದೆ. ವೈದಿಕ ಧರ್ಮದ ಕರ್ಮಕಾಂಡಕ್ಕೆ ಬೇಸತ್ತೇ ಬುದ್ಧ, ಮಹಾವೀರ, ಬಸವಣ್ಣ, ಗುರುನಾನಕರು ಹೊಸಧರ್ಮಗಳನ್ನು ಜನರ ವಿಮೋಚನೆಗಾಗಿ ಕೊಡಬೇಕಾಯಿತು.

ಶ್ರುತಿಗಳು ಶ್ರೇಷ್ಠ ಎನ್ನೋಣವೆ? ಅವು ಪರಮ ಸತ್ಯವಾದ ಪರಮಾತ್ಮನನ್ನು ಹುಡುಕುವ ಅನ್ವೇಷಣೆಯಲ್ಲಿವೆ. ವೇದ, ಶಾಸ್ತ್ರ ಶ್ರುತಿ, ಸ್ಮೃತಿಗಳಲ್ಲಿ ದೇವಾ ನೀನಿಲ್ಲ. ನೀನು ನೆಲೆಸಿರುವುದು ಸೇವಾ ಮನೋಭಾವದಲ್ಲಿ, ಸೇವಾ ಕಾರ್ಯದಲ್ಲಿ. ತನು ಮನ ಧನಗಳನ್ನು ಗುರು ಲಿಂಗ ಜಂಗಮಕ್ಕೆ ಸಮರ್ಪಿಸಿ ದುಡಿಯುವುದರಲ್ಲಿ ನೀನು ನೆಲೆಸಿರುವೆ ಲಿಂಗದೇವ.

213. ಆಟದ ಯುದ್ಧ-ದಿಟದ ಯುದ್ಧ

ವೇದದಂತುಟಲ್ಲ, ಶಾಸ್ತ್ರದಂತುಟಲ್ಲ, ಗೀತಮಾತಿನಂತುಟಲ್ಲ ಕೇಳಯ್ಯ
ಮಾತಿನ ಮಾತಿನ ಕವುಳುಗೋಲ ಶ್ರವದಲ್ಲಿ
ಸತ್ತವರೊಳರೆ ಅಯ್ಯಾ?
ದಿಟದಲಗಿನ ಕಾಳೆಗವಿತ್ತಲಿದ್ದುದೆ
ಲಿಂಗದೇವನ ಶರಣರು ಬಂದಲ್ಲಿ!

- ಬ.ವ.ದೀ.208

ಶಾಸ್ತ್ರಕೋವಿದರು ವೇದ, ಶಾಸ್ತ್ರ ಗೀತೆ ಇವುಗಳ ಅಧ್ಯಯನ ಮಾಡಿ, ತರ್ಕಬದ್ಧವಾಗಿ ವಾದ ಮಾಡುವುದುಂಟು. ಇವುಗಳಲ್ಲಿ ಉದಾತ್ತವಾದ ವಿಶ್ವ ಮಾನವ ಸಂದೇಶವಿದೆ, ಭ್ರಾತೃತ್ವವಿದೆ, ಸಮಾನತೆ ಇದೆ. ಎಂದೆಲ್ಲ ಹೊಗಳಿಕೊಳ್ಳುವುದುಂಟು. ಮಾತಿನ ಯುದ್ಧದಲ್ಲಿ ಯಾರೂ ಸಾಯುವುದಿಲ್ಲ, ನಿಜವಾದ ಯುದ್ಧವನ್ನು ಎದುರಿಸಬೇಕಾಗಿ ಬಂದಾಗ ಮಾತ್ರ ವ್ಯಕ್ತಿಯ ಶೂರತ್ವ ತಿಳಿಯುವುದು. ಹಾಗೆ, ಲಿಂಗದೇವನ ಶರಣರು ಬಂದು ಎದುರು ನಿಂತಾಗ ಈ ವ್ಯಕ್ತಿಯ ವರ್ತನೆ ಹೇಗಿರುತ್ತದೆ ಎಂಬುದು ದಿಟವಾದ ಅಲಗಿನ ಕಾಳಗ!

ಬಹಳ ಜನ ಭಾಷಣಕಾರರು ಗುರು ಬಸವಣ್ಣನವರ ಕ್ರಾಂತಿಕಾರಿ ವಿಚಾರಗಳನ್ನು ಹೇಳಿ ಚಪ್ಪಾಳೆ ಗಿಟ್ಟಿಸಿಕೊಳ್ಳುವರು; ಅನೇಕರು ಕೇಳಿ ಮೆಚ್ಚಿಕೊಂಡು ಸಂತೋಷಪಡುವರು. ತಾವು ಅದನ್ನು ಅನುಷ್ಠಾನ ಮಾಡುವ ಸಂದರ್ಭ ಒದಗಿದಾಗ ಸೋತು ಬಿಡುವರು. ಪೂಜ್ಯ ಗುರೂಜಿಯವರು ಇದ್ದಾಗ ನಡೆದ ಒಂದು ಪ್ರಸಂಗ; ಇಬ್ಬರು ಗಳಸ್ಯ - ಕಂಠಸ್ಯ ಮಿತ್ರರು ಆಗಾಗ ಬರುತ್ತಿದ್ದರು. ಅದರಲ್ಲಿ ಒಬ್ಬರು ನೊಳಂಬ ಲಿಂಗಾಯತರು, ಇನ್ನೊಬ್ಬರು ರೆಡ್ಡಿ ಲಿಂಗಾಯತರು. ಇಬ್ಬರಿಗೂ ಮದುವೆ

ಸಿದ್ಧರಾದ ಗಂಡು ಮಗ, ಹೆಣ್ಣು ಮಗಳು ಇದ್ದರು. ಒಂದು ದಿವಸ ಅವರುಗಳು ತಮ್ಮ ಮಕ್ಕಳಿಗೆ ಸೂಕ್ತ ವಧು-ವರರನ್ನು ನೋಡಲು ಹೇಳಿದರು. ಪೂಜ್ಯ ಅಪ್ಪಾಜಿ ಹೇಳಿದರು, "ಹೊರಗೆ ಏಕೆ ಹುಡುಕುವಿರಿ? ಅವರ ಮಗಳನ್ನು ನಿಮ್ಮ ಮಗನಿಗೆ ತಂದುಕೊಂಡರಾಯಿತು." ಆಗ ಅವರು ಕೊಟ್ಟ ಉತ್ತರ, "ಎಲ್ಲಾದರೂ ಉಂಟೆ? ನಾವು ನೊಳಂಬರು ಅವರು ರೆಡ್ಡೇರು?" ಪೂಜ್ಯ ಅಪ್ಪಾಜಿ ಕೇಳಿದರು, "ನಮ್ಮ ಧರ್ಮದ ಪ್ರಕಾರ ಇದನ್ನೆಲ್ಲ ನೋಡಬಾರದಲ್ಲವೆ? ನಮ್ಮ ಧರ್ಮ ಮತ್ತು ನಿಮ್ಮ ಮಿತ್ರತ್ವದ ಮುಂದೆ ಅದೆಲ್ಲ ಗೌಣವಾಗಬೇಕು."

"ನಾವು ಒಪ್ಪಿದರೂ ನಮ್ಮ ಮನೆ ಹೆಂಗಸರು ಒಪ್ಪುವುದಿಲ್ಲ." ಅವರ ಪ್ರತ್ಯುತ್ತರ.

ಈ ನುಡಿ ವೀರರು ಭಾಷಣ ಮಾಡಲಿಕ್ಕೇ ಸರಿ; ತಮ್ಮ ಮನೆಯ ಹೆಂಡತಿಯನ್ನು ಸಹ ಒಪ್ಪಿಸಲಾರದವರು. ತಮಗೇ ಮೊದಲು ತಾತ್ವಿಕ ದೃಢತೆ ಇಲ್ಲ ಇನ್ನು ಇತರರನ್ನು ಹೇಗೆ ಮನವೊಲಿಸಬಲ್ಲರು. ಹಾಗೆ, ಎಲ್ಲರೂ ಉಲ್ಲೇಖಿಸಿ ಭಾಷಣ ಮಾಡಬಹುದು, ಆದರೆ ಅನುಷ್ಠಾನ ಮಾಡುವಾಗ ಆ ವ್ಯಕ್ತಿಗಳ ನಿಷ್ಠೆಯು ಪರೀಕ್ಷೆಗೆ ಒಳಪಡುವುದು.

214. ಭಕ್ತಿ ಮಾತುಗಾರಿಕೆಯಲ್ಲಿಲ್ಲ

ಮಾತಿನ ಮಾತಿನಲ್ಲಿಪ್ಪುದೆ ಭಕ್ತಿ?
ಮಾಡಿ ತನು ಸವೆಯದನ್ನಕ್ಕ, ಮನ ಸವೆಯದನ್ನಕ್ಕ,
ಧನ ಸವೆಯದನ್ನಕ್ಕ, ಅಪ್ಪುದೆ ಭಕ್ತಿ?
ಲಿಂಗದೇವನೆಲುದೋರೆ ಸರಸವಾಡುವನು
ಸೈರಿಸದನ್ನಕ್ಕ, ಅಪ್ಪುದೆ ಭಕ್ತಿ?

- ಬ.ವ.ದೀ.212

ಭಕ್ತಿಯು ಪೂರ್ಣತೆಯನ್ನು ಪಡೆಯುವುದು ಅನುಷ್ಠಾನಗೊಂಡಾಗ ಮಾತ್ರ; ಬರೀ ಮಾತಿನಲ್ಲಲ್ಲ, ಭಾಷಣದಲ್ಲಲ್ಲ, ಭಜನೆಯಲ್ಲಲ್ಲ. ಶರಣರು ಭಕ್ತರು, ಗುರು ಜಂಗಮರು ಬಂದಾಗ ಮನೆಯೊಡೆಯ-ಒಡತಿಯರು ಅಡ್ಡ ಮುಸುಕಿಟ್ಟುಕೊಂಡು ಮಲಗದೆ ತನುವಿನಿಂದ ಸೇವೆ ಮಾಡಬೇಕು. ಆಗ ದೇಹಕ್ಕೆ ದಣಿವಾಗುವುದು ಸಹಜ. ಅತಿ ಶ್ರಮದಿಂದ ದೇಹವು ಕೃಶವೂ ಆಗಬಹುದು. ಆದರೆ ದಾಸೋಹಕ್ಕೆ ತನುವು ಆಲಸ್ಯ ತೋರಬಾರದು. ಮಾಡಿದಷ್ಟು ಮನಸ್ಸು ಹರ್ಷಿತವಾಗಬೇಕು. ನನಗೆ ಎಂಥಾ ಸೇವಾ ಭಾಗ್ಯ ಸಿಕ್ಕಿತು ಎಂದು ಧನ್ಯತಾ ಭಾವವನ್ನು ಹೊಂದಬೇಕು. ಹಾಗೆ ಗಳಿಸಿದ ಧನವು ದಾಸೋಹಕ್ಕೆ ಸವೆಯಬೇಕು. ಬೀಜಕ್ಕೆ 3 ಸ್ಥಿತಿಗಳುಂಟು. ಒಂದು - ಬಿತ್ತಿ ಬೆಳೆಯುವಿಕೆ, ಎರಡು - ತಿನ್ನುವಿಕೆ, ಮೂರನೆಯದು - ಕೊಳೆಸುವಿಕೆ. ಮೊದಲನೆಯದು ಸರ್ವ ಶ್ರೇಷ್ಠ, ಎರಡನೆಯದು ಮಧ್ಯಮ; ಮೂರನೆಯದು ಅಧಮ. ಹಾಗೆಯೇ ಧನಕ್ಕೂ ಮೂರು ಸ್ಥಿತಿಗಳುಂಟು. ಒಂದು ದಾಸೋಹ, ಪರಾರ್ಥಕ್ಕೆ ಸಲ್ಲುವುದು. ಇದು ಸರ್ವಶ್ರೇಷ್ಠ. ಸ್ವಂತ ಉಪಯೋಗಕ್ಕೆ ಬಳಸುವುದು - ಇದು ಮಧ್ಯಮ, ಮೂರನೆಯದು ಕೇವಲ ಸಂಗ್ರಹಣೆ - ಇದು ಕನಿಷ್ಠ. ಲಿಂಗದೇವನು ಭಕ್ತನೊಡನೆ ಯುದ್ಧಕ್ಕೆ ನಿಂತಿರುವನು, ಶತ್ರುವು ಎಲುವು ಕಾಣುವಂತೆ ತಿವಿಯುವಂತೆ ದೇವನು ಭಕ್ತನೊಡನೆ ಸರಸವಾಡಿ ಪರೀಕ್ಷಿಸುವನು. ಇದನ್ನು ತಾಳಿಕೊಳ್ಳದಿದ್ದರೆ ಭಕ್ತಿಯ ಪರೀಕ್ಷೆಯಲ್ಲಿ ಯಶ ಸಿಗದು.

215. ಭಕ್ತಿ ಮಾರ್ಗ ಕಠಕಷ್ಟ

ಹಾವಸೆಗಲ್ಲ ಮೆಟ್ಟಿ ಹರಿದು ಗೊತ್ತ ಮುಟ್ಟಬಾರದಯ್ಯಾ;
ನುಡಿದಂತೆ ನಡೆಯಲು ಬಾರದಯ್ಯಾ;
ಲಿಂಗದೇವನ ಭಕ್ತಿ, ಬಾಳ ಬಾಯಿಯಂತೆ - ಬ.ವ.ದೀ.213

ಹಾವಸೆಗಲ್ಲು ಎಂದರೆ ಪಾಚಿ ಕಟ್ಟಿದ ಕಲ್ಲು, ನೀರನಲ್ಲಿ ನಡೆದು ಹೋಗುವಾಗ ಪಾಚಿಕಟ್ಟಿದ ಕಲ್ಲಿನ ಮೇಲೆ ಕಾಲಿಟ್ಟರೆ ವ್ಯಕ್ತಿಯು ಜರ್ರನೆ ಜಾರಿ ಬಿದ್ದು ಬಿಡುವನು; ಹೀಗಾಗಿ ಗೊತ್ತನ್ನು ಅಂದರೆ ನಿರೀಕ್ಷಿಸಿದ ಗುರಿಯನ್ನು ಮುಟ್ಟಲು ಸಾಧ್ಯವಾಗದು. ಅದೇ ರೀತಿ ಭಕ್ತಿ ಎನ್ನುವುದು ಒಂದು ಹಾವಸೆಗಲ್ಲಿನಂತೆ! ವ್ಯಕ್ತಿಯ ಭಕ್ತಿ ಸಹಜ ಭಕ್ತಿಯಾಗಿರಬೇಕು. ಅಸಹಜವಾದ ಪ್ರತಿಜ್ಞೆಗಳನ್ನು ಮಾಡಬಾರದು. ಹೇಗೆ ಎಂದರೆ, ಶಿಬಿ, ಬಲಿ ಮುಂತಾದವರು ಯಾರು ಏನು ಕೇಳಿದರೂ ಕೊಟ್ಟು

ಬಿಡುತ್ತೇನೆ ಎಂದು ಪ್ರತಿಜ್ಞೆ ಕೈಗೊಂಡಿದ್ದರು. ಪರಿಣಾಮ ಏನಾಯಿತು? ಧೂರ್ತರು ಆ ಪ್ರತಿಜ್ಞೆಯ ದುರುಪಯೋಗ ಪಡೆದು ಶಿಬಿ ಚಕ್ರವರ್ತಿಯ ಮಾಂಸವನ್ನು ಪಡೆದರೆ ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ತುಳಿಯಲಾಯಿತು. ಭಕ್ತಿಯ ಸಾಧನೆಯು ಕತ್ತಿಯ ಚೂಪಾದ ಮೊನೆಯಂತೆ, ಬಹಳ ಎಚ್ಚರಿಕೆ ಹೊಂದಿರಬೇಕು.

216.ಭಕ್ತಿ ಕರಗಸದಂತೆ

ಭಕ್ತಿಯೆಂಬುದ ಮಾಡಬಾರದು
ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು
ಘಟಸರ್ಪನಲ್ಲಿ ಕೈ ದುಡುಕಿದಡೆ ಹಿಡಿವುದ ಮಾಣ್ಬುದೆ
ಲಿಂಗದೇವಾ ? - ಬ.ವ.ದೀ.214

ವ್ಯಕ್ತಿಯು ಸಮಯ ಸಾಧಕನಾಗಿ ಬಾಳುವುದು ಬಲು ಸುಲಭ, ಧ್ಯೇಯವಾದಿಯೂ ತತ್ವನಿಷ್ಠನೂ ಆಗಿ ಬಾಳುವುದು ಅತ್ಯಂತ ಕಷ್ಟಕರ. ಲಿಂಗದೇವನಲ್ಲಿ ಶ್ರದ್ಧೆ, ಶರಣಾಗತಿ ಹೊಂದಿ ಏಕನಿಷ್ಠೆಯಿಂದ ಸಾಗುತ್ತೇನೆ ಎನ್ನುವವನಿಗೆ ಸಾಕಷ್ಟು ತೊಂದರೆಗಳು. ಸಮಾಜದಲ್ಲಿ ರೂಢಿಗೊಂಡ ಮೂಢನಂಬಿಕೆ, ಅಂಧಶ್ರದ್ಧೆಗಳನ್ನು ನಿವಾರಿಸಿ ಉತ್ತಮ ಸಮಾಜ ನಿರ್ಮಾಣ ಮಾಡುತ್ತೇನೆ ಎನ್ನುವವರಿಗೆ ಹಲವಾರು ವಿರೋಧಗಳು, ಸಂಕಷ್ಟಗಳು. ಹೀಗೆ ಧ್ಯೇಯವಾದವು ಕರಗಸದಂತೆ ಹೋಗುತ್ತಾ, ಬರುತ್ತಾ ಕೊಯ್ಯುತ್ತದೆ. ಅದು ಘಟಸರ್ಪದ ಬಾಯಿಯಲ್ಲಿ ಕೈ ಇಡಹೋದಂತೆ! ಹೀಗಾಗಿ ಅನೇಕ ಜನ ಧ್ಯೇಯವಾದಿಗಳು ಸಂಪ್ರದಾಯವಾದಿಗಳ ವಿರೋಧಕಟ್ಟಿಕೊಂಡು ಹುತಾತ್ಮರು ಸಹ ಆಗಿದ್ದಾರೆ.

217.ಅಪಾತ್ರ ದಾನ ಸಲ್ಲದು

ಹಲವು ಕಾಲ ಧಾವತಿಗೊಂಡು ಒಟ್ಟಿದ ಹಿದಿರೆಯು
ಒಂದು ಮಿಡುಕುರಿಯಲ್ಲಿ ಬೇವಂತೆ
ಸಲೆ ನೆಲೆ ಸನ್ನಹಿತವಾಗಿಪ್ಪ ಶರಣನ ಭಕ್ತಿ
ಒಂದನಾಯತದಿಂದ ಕೆಡುವುದು
ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ
ಅಧರ್ಮದಲ್ಲಿ ಕೆಡಿಸುವ ಸುತನಂತೆ -
ಶಿವನ ಸೊಮ್ಮು ಶಿವಂಗೆ ಮಾಡದೆ ಅನ್ಯಕ್ಕೆ ಮಾಡಿದಡೆ
ತನ್ನ ಭಕ್ತಿ ತನ್ನನೆ ಕೆಡಿಸುವುದು ಲಿಂಗದೇವಾ - ಬ.ವ.ದೀ.212

ರೈತರು ಬೆಳೆ ಬೆಳೆದ ನಂತರ ತೆನೆಯನ್ನು ದಂಟಿನಿಂದ(ಹುಲ್ಲಿನಿಂದ) ಬೇರ್ಪಡಿಸಿದ ಬಳಿಕ ಸಪ್ಪೆ ದಂಟನ್ನು ಅಥವಾ ಹುಲ್ಲನ್ನು ಬಣವೆ ಒಟ್ಟಲು ಧಾವತಿಪಡುತ್ತಾರೆ. ಹುಲ್ಲು ಅಕಾಲಿಕ ಮಳೆಗೆ ಸಿಕ್ಕರೆ ಕೆಟ್ಟುಹೋಗುತ್ತದೆ, ಅದನ್ನು ದನಗಳು ಮೇಯವು. ಬಣವೆಯನ್ನು ಏರಿಸಿ ಮೇಲ್ಭಾಗದಲ್ಲಿ ಸಗಣಿಯಲ್ಲಿ ಸಾರಿಸಿ, ಮಳೆಯ ನೀರು ಇಳಿಯದಂತೆ ಮಾಡುತ್ತಾರೆ. ಬಿದ್ದ ನೀರು ಜಾರಿ ಹೋಗುವಂತೆ ಕಲಾತ್ಮಕವಾಗಿ ಬಣವೆ ಒಟ್ಟಿ ನಂತರ ಅಗತ್ಯವಿದ್ದಾಗ ಕೆಳಗಿನ ಭಾಗದಲ್ಲಿ ಹುಲ್ಲನ್ನು (ಅಥವಾ ಸಪ್ಪೆಯನ್ನು) ಹಿರಿದುಕೊಳ್ಳುತ್ತಾರೆ. ಬಣವೆ ಒಟ್ಟಲು ಸಾಕಷ್ಟು ಸಮಯವು ಹಿಡಿಯುತ್ತದೆ. ಆದರೆ ನಂತರ ಒಂದು ಚಿಕ್ಕ ಕಿಡಿ ತಗುಲಿದರೂ ಇಡೀ ಬಣವೆಯು ಸುಟ್ಟು ಬೂದಿಯಾಗುವುದು. ಹಾಗೆ ಒಬ್ಬ ನಿಷ್ಠಾವಂತ ಶರಣನ ಗಟ್ಟಿಗೊಂಡ ಭಕ್ತಿಯು ಯಾವುದಾದರೂ ಒಂದು ಅನಾಚರಣೆಯಿಂದ, ದುರಾಚಾರದಿಂದ ಕೆಟ್ಟು ಬಿಡಬಹುದು. ಉತ್ತಮವಾದ ಮಾರ್ಗದಿಂದ ತಂದೆಯು ಗಳಿಸಿಟ್ಟ ಸಂಪತ್ತನ್ನು ಮಗನೊಬ್ಬ ಅಧರ್ಮ ಮಾರ್ಗದಿಂದ ಹಾಳು ಮಾಡಿದರೆ ಹೇಗೋ ಹಾಗೆ, ಲಿಂಗಾಯತ ಧರ್ಮೀಯನ ಗಳಿಕೆ ತನ್ನ ಧರ್ಮಕ್ಕೆ ವಿರುದ್ಧವಾದ ಆಚರಣೆ ಮಾಡಿದಾಗ , ಅದೂ ಪಾಪಕ್ಕೆ ಕಾರಣವಾಗುವುದು. ಉದಾಹರಣೆಗೆ, ಶುದ್ಧ ಅಹಿಂಸಾತ್ಮಕ ಧರ್ಮವಾದ ಲಿಂಗಾಯತದ ಅನುಯಾಯಿ ಉಗ್ರದೇವತೆಗೆ ಪ್ರಾಣಬಲಿಯನ್ನು ಕೊಟ್ಟು ಹರಕೆ ತೀರಿಸಿದಾಗ ಆ ಭಕ್ತಿ ತನ್ನ ವಿನಾಶಕ್ಕೆ ಕಾರಣವಾಗುವುದು. ತನ್ನ ಧರ್ಮಕ್ಕೆ ವಿರುದ್ಧವಾದ ಹೋಮ -ಹವನಾದಿಗಳನ್ನು

ಮಾಡಿದಾಗ ಆ ಆಚರಣೆ ಅವನನ್ನು ಗುರುದ್ರೋಹಿ, ಲಿಂಗದ್ರೋಹಿ, ಜಂಗಮದ್ರೋಹಿಯನ್ನಾಗಿ ಮಾಡುವುದು.

218.ದೇವನು ಭಕ್ತಿಕಂಪಿತ

ನಚ್ಚಿದೆನೆಂದರೆ ಮೆಚ್ಚಿದೆನೆಂದರೆ ಸಲೆ ಮಾರುವೋದೆನೆಂದಡೆ
ತನುವನಲ್ಲಾಡಿಸಿ ನೋಡುವೆ ನೀನು
ಮನವನಲ್ಲಾಡಿಸಿ ನೋಡುವೆ ನೀನು
ಧನವನಲ್ಲಾಡಿಸಿ ನೋಡುವೆ ನೀನು
ಇವೆಲ್ಲಕ್ಕಂಜದಿದ್ದಡೆ ಭಕ್ತಿ ಕಂಪಿತ ನಮ್ಮ ಲಿಂಗದೇವ - ಬ.ವ.ದೀ.216

ಸೃಷ್ಟಿಕರ್ತನಾದ ಲಿಂಗದೇವನನ್ನು ನಂಬಿದರೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದೃಢ ಭಕ್ತಿಯಿಂದ ಮೆಚ್ಚಿಕೊಂಡರೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದೇವನಿಗೆ ಮಾರು ಹೋಗಿ ತನ್ನನ್ನೇ ಅರ್ಪಿಸಿಕೊಂಡರೆ, ದೇವನ ಪರೀಕ್ಷೆ ಕಠಿಣವಾಗುತ್ತದೆ. ಏಕೆಂದರೆ, ಜಗತ್ತಿನ ಬಹುಪಾಲು ಜನರು ನಂಬಿದರೂ ದೃಢವಾಗಿ ನಂಬುವುದಿಲ್ಲ. ತಮ್ಮನ್ನು ತಾವು ಅರ್ಪಿಸಿಕೊಳ್ಳುವುದಿಲ್ಲ. ನಿಜ ಭಕ್ತ ಮಾತ್ರ ತನ್ನನ್ನು ತಾನು ಸಮರ್ಪಿಸಿಕೊಳ್ಳುತ್ತಾನೆ.

ಆಗ ದೇವನು ಬಡತನ, ಆರ್ಥಿಕ ಕೊರತೆ, ಶರೀರಕ್ಕೆ ಕಾಯಿಲೆ ಮುಂತಾಗಿ ಕೊಟ್ಟು ತನುವನ್ನು ಅಲ್ಲಾಡಿಸಿ ಅರ್ಥಾತ್ ಸಂಕಷ್ಟಕ್ಕೆ ಗುರಿ ಮಾಡಿ ಪರೀಕ್ಷಿಸುತ್ತಾನೆ. ನಾಸ್ತಿಕರಿಂದ, ನಿಂದಕರಿಂದ, ಬಂಧು ಬಾಂಧವರಿಂದ ಕಡೆಗೆ ಹೆಂಡತಿ/ ಗಂಡ ಮಕ್ಕಳಿಂದ ನಿಂದಿಸಿ ಮನಃಸ್ಥೈರ್ಯವನ್ನು ಪರೀಕ್ಷಿಸುತ್ತಾನೆ. ಆರ್ಥಿಕ ಸಂಕಷ್ಟ ಒಡ್ಡಿ ಪರೀಕ್ಷಿಸುತ್ತಾನೆ. ಇವೆಲ್ಲಕ್ಕೆ ಅಂಜದೆ ದೃಢವಾಗಿದ್ದರೆ ಕಡೆಗೆ ದೇವನೇ ಸೋತು ಭಕ್ತನಿಗೆ ಶರಣಾಗುವನು.

219.ಸಮಯೋಚಿತ ದಾಸೋಹ

ಕವಳುಗೋಲ ಹಿಡಿದು ಶ್ರವವ ಮಾಡಬಹುದಲ್ಲದೆ
ಕಳನೇರಿ ಕಾದುವುದರಿದು ನೋಡಾ,
ಬಣ್ಣವಿಟ್ಟು ನುಡಿವಲ್ಲಿ ಫಲವೇನು?
ಚಿನ್ನಗೈಯ್ಯವನಾಡುವವನಂತೆ-
ಬಂದ ಸಮಯವನರಿತು ಇದ್ದುದ ವಂಚಿಸದಿದ್ದಡೆ
ಲಿಂಗದೇವನೊಲಿದು ಸಲಹುವನು. - ಬ.ವ.ದೀ.217

ಯುದ್ಧಾಭ್ಯಾಸಿಗಳು, ತರುಣರು ಮಲ್ಲವಿದ್ಯೆ, ಕತ್ತಿವರಸೆ, ಲಾಠಿ ಮುಂತಾಗಿ ಅಭ್ಯಾಸ ಮಾಡುವರು. ಕವಳುಗೋಲು ಹಿಡಿದು ಪರಸ್ಪರ ಅಭ್ಯಾಸ ಮಾಡುವರು. ಆದರೆ ಅದೇ ಕವಳುಗೋಲು ಹಿಡಿದುಕೊಂಡು ಯುದ್ಧಭೂಮಿ(ಕಳ)ಯಲ್ಲಿ ಕಾದುವುದು ಸಾಧ್ಯವಿಲ್ಲ. ಅಲ್ಲಿ ಕತ್ತಿ ಹಿಡಿದೇ ಕಾದಬೇಕು. ಚಿನ್ನಗೆಯ್ಯವನಾಡುವದೆಂದರೆ ಚಿನ್ನದ ಕೆಲಸ ಮಾಡುವ ಅಕ್ಕಸಾಲಿಗನು ಬಣ್ಣದ ಮಾತನಾಡುವನು. ತಾನು ಅಂಥ ಶ್ರೀಮಂತರಿಗೆ ಇಂಥ ಆಭರಣ ಮಾಡಿಕೊಟ್ಟುದಾಗಿ ಜಂಬಕೊಚ್ಚುವನು. ಅವನೇನು ಆ ಆಭರಣಗಳ ಒಡೆಯನಲ್ಲ. ಯಾರದೋ ಒಡವೆಗಳನ್ನು ತಾನು ಮಾಡಿಕೊಡುವನು. ಕೊಟ್ಟುದಕ್ಕೆ ಕೂಲಿ ಪಡೆಯುವನು. ಆದರೂ ತಾನು ಅವನ್ನು ಮಾಡಿದುದಾಗಿ ಹೊಗಳಿಕೊಳ್ಳುವನು.

ಅದೇ ರೀತಿ ಕೆಲವರು ಧನಿಕರು ತಾವು ಮಹಾದಾನಿಗಳೆಂಬಂತೆ, ಉದಾರಿಗಳೆಂಬಂತೆ ಜಂಬಕೊಚ್ಚಿಕೊಳ್ಳುವರು. ಆದರೆ ನಿಜವಾಗಿಯೂ ನೋಡಿದರೆ ಸಮಯ ಸಂದರ್ಭ ಒದಗಿದಾಗ ಏನೇನೂ ಸಹಾಯ ಮಾಡುವುದಿಲ್ಲ. ಹಸಿದವನಿಗೆ ನುಚ್ಚಂಬಲಿ ಕೊಟ್ಟರೂ ಅದು ಅಮೃತಾನ್ನ ; ಹೊಟ್ಟೆ ತುಂಬಿದಾಗ ಹೋಳಿಗೆ ಕೊಟ್ಟರೂ ಸೊಗಸದು. ದಾಸೋಹಿಯು ಸಮಯವು ಒದಗಿದಾಗ ವಂಚನೆ ಮಾಡದೆ ನೀಡಿದರೆ ಆಗ ಲಿಂಗದೇವನು ಒಲಿದು ಸಂರಕ್ಷಿಸುವನು.

ಒಂದು ಊರಿನಲ್ಲಿ ಪ್ರವಚನ ಮಾಡುತ್ತಿದ್ದೆ. ಆಗ ಕೆಲವು ಜನರು ಒಬ್ಬರ ಹೆಸರು ಹೇಳಿ ಅವರು ಮಹಾನ್‌ದಾನಿಗಳು ಅವರನ್ನು ಕೇಳಿರಿ ಎಂದು ಹೇಳಿದರು. ನಮ್ಮ ಕಾರ್ಯಕರ್ತರು ದೇಣಿಗೆ ಕೇಳಿದಾಗ

ನನ್ನಿಂದ ಎಷ್ಟು ನಿರೀಕ್ಷಿಸುವಿರಿ ಎಂದರಂತೆ. ಇವರಿಗೆ ಹಿಗ್ಗಾಗಿ ಒಂದು ವಿಶಿಷ್ಟ ಸಂಖ್ಯೆ ಹೇಳಿದ್ದಾರೆ. ಆಗ ಆ ವ್ಯಕ್ತಿ "ಇಷ್ಟೇನೆ? ನನ್ನ ಸ್ಥಾನಕ್ಕೆ ಇದು ಕಮ್ಮಿ. ನಾನು ಒಂದು ಲಕ್ಷದಷ್ಟಾದರೂ ಕೊಡಬೇಕು" ಎಂದಾಗ ಇವರೆಲ್ಲ ಹಿಗ್ಗಿ ಹೀರೇಕಾಯಿ ಆಗಿದ್ದಾರೆ. ಆಗ ಅವರು ನಾನು ಖಂಡಿತಾ ಕಳಿಸಿಕೊಡುತ್ತೇನೆ. ವಿಳಾಸ ಕೊಟ್ಟಿರಿ. ಎಂದರಂತೆ. ಪ್ರವಚನಲ್ಲಿ ಅವರ ದಾನದ ಬಗ್ಗೆ ಘೋಷಿಸಿದ್ದೂ ಆಯಿತು. ಜನರು ಕೇಳಿ ಸಂತೋಷಪಟ್ಟರು. ಆದರೆ ಅವರ ವಾಕ್-ದಾನದ ಹಣ ಬರಲೇ ಇಲ್ಲ. ಒಂದು ಸಂಸ್ಥೆಯ ಕಾರ್ಯಕ್ರಮಕ್ಕೆ ಹೋಗಿದ್ದೆ. ಅಲ್ಲಿಯ ಮುಖ್ಯಸ್ಥರು ಹೇಳಿದರು, "ನೀವೇ ಅದೃಷ್ಟವಂತರು. ಅವರಿಂದ ದೇಣಿಗೆ ಪಡೆದಿರಿ. ನಮ್ಮ ಸಂಸ್ಥೆಗೆ ಅವರು ವಾಗ್ದಾನ ಮಾಡಿ ಎರಡು ವರ್ಷಗಳಾದವು. ಇನ್ನೂ ಆ ಹಣ ಬರಲಿಲ್ಲ."ನಾನು ಬೆಪ್ಪಾದೆ. ಆ ವಾಕ್‌ದಾನಿಗಳಿಗೆ ಇದೊಂದು ಹವ್ಯಾಸವೇ ಆಗಿರುವಂತೆ ತೋರುತ್ತದೆ. ಬರೀ ವಾಕ್‌ದಾನ ಮಾಡಿ ಕೇಳಿದವರ ಮೂಗಿಗೆ ತುಪ್ಪ ಸವರಿ ಕಳಿಸಿ, ದೊಡ್ಡ ದಾನಿ ಎಂದು ಹೆಸರು ಪಡೆದಂತೆ ಕಾಣುತ್ತದೆ. ಇಂಥವರನ್ನು ಕಂಡೆ ಶರಣೆ ಸತ್ಯಕ್ಕ ಹೇಳಿರಬಹುದು. 'ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರದಂತೆ' ಎಂಬುದಾಗಿ.

220. ನಿಸ್ಸೀಮ ದಾಸೋಹಿ

ಧನಕ್ಕೆ ಮನವನೊಡ್ಡಿದಡೇನು? ಮನಕ್ಕೆ ಧನವನೊಡ್ಡಿದಡೇನು
ತನು, ಮನ, ಧನವ ಮೀರಿ ಮಾತಾಡಬಲ್ಲಡೆ,
ಆತ ನಿಸ್ಸೀಮನು; ಆತ ನಿಜೈಕ್ಯನು,
ತನು ಮನ ಧನವನುವಾದಡೆ,ಲಿಂಗದೇವನೊಲಿವ ! -ಬ.ವ.ದೀ.217

ಧನ ಎಂದರೆ ಸಂಪತ್ತು. ಇದರ ವ್ಯಾಪ್ತಿ ಬಹು ಹಿರಿದು. ಹೆಂಡತಿ, ಮಕ್ಕಳು, ಬಂಧು ಬಳಗ, ಹೊಲ-ಗದ್ದೆ, ಮನೆ -ಸಂಪತ್ತು, ಹಣ - ಆದಾಯ ಇದೆಲ್ಲವೂ ಧನವೆ! ಮನಸ್ಸನ್ನು ಇದೆಲ್ಲದರಲ್ಲಿ ತೊಡಗಿಸಿದರೂ ಅಷ್ಟೆ. ಅಥವಾ ಮನಕ್ಕೆ ಇವೆಲ್ಲವೂ ಆಮಿಷವಾಗಿ ಬಂದರೂ ಅಷ್ಟೆ. ಜೀವಾತ್ಮನಿಗೆ ಇವು ಬಂಧನಗಳು. ಜೀವಾತ್ಮನು ಬಂಧನದಿಂದ ಬಿಡುಗಡೆ ಹೊಂದಬೇಕಾದರೆ ತನು ಮನ ಧನಗಳು ದಾಸೋಹದ ಮೂಲಕ ಸವೆಯಬೇಕು. ಈ ಮೂರರ ಬಗ್ಗೆ ನಿರ್ಲಿಪ್ತತೆ ತಾಳಿ ಯಾವುದೇ ಸಮಯ -ಸಂದರ್ಭಧಲ್ಲಿ ಗುರು-ಲಿಂಗ ಜಂಗಮ ಸೇವೆಗೆ ತನು ಮನ ಧನಗಳು ಸವೆಯಲಿಕ್ಕೆ ಸಿದ್ಧವಿದ್ದರೆ ಆಗ ಆ ವ್ಯಕ್ತಿಯು ನಿಸ್ಸೀಮನು ಮತ್ತು ನಿಜೈಕ್ಯನಾಗುವನು.

221. ಸಮಯಾಚಾರ

ಅರ್ಥಪ್ರಾಣಾಭಿಮಾನದಲ್ಲಿ ವಂಚನೆಯಿಲ್ಲದ ಭಕ್ತಿ ಸಮಯಾಚಾರ
ಜಂಗಮವೆ ಲಿಂಗವೆಂಬುದಕ್ಕೆ ಏನು ಗುಣ
ಮನದ ಲಂಪಟತನ ಹಿಂಗದಾಗಿ?
ಒಡೆಯನ ಬರವಿಂಗೆ ಕುನ್ನಿ ಬಾಲವ ಬಡಿದಡೆ
ವೆಚ್ಚವೇನು ಹತ್ತುವುದು ಲಿಂಗದೇವಾ? - ಬ.ವ.ದೀ.219

ಸಮಯಾಚಾರ : ಇದು ಗುರು ಬಸವಣ್ಣನವರ ತತ್ವ - ಸಿದ್ಧಾಂತಗಳಲ್ಲಿ ಬರುವ ಬಹಳ ಮಹತ್ವಪೂರ್ಣವಾದ ಪದ. ಸಂಸ್ಕೃತ ಮೂಲದ "ಧರ್ಮ" ಪದಕ್ಕೆ ಸಮನಾದ ಅರ್ಥ ಕೊಡುವ ದ್ರವಿಡ ಭಾಷೆಯ ಪದ ಸಮಯಾಚಾರ. ತಮಿಳು ಭಾಷೆಯಲ್ಲಿ ಸಂಸ್ಕೃತ ಪದಗಳು ಹೆಚ್ಚು ಬಳಕೆಯಾಗುವುದಿಲ್ಲ. ಅಲ್ಲಿ ಧರ್ಮ ಪದಕ್ಕೆ ಸರಿಸಮವಾಗಿ ಸಮಯಾಚಾರ ಎಂಬ ಪದವನ್ನು ಅವರು ಬಳಸುವರು. ಧರ್ಮಪಿತರ ಮತ್ತೊಂದು ವಚನದಲ್ಲಿ ಸಮಯಾಚಾರಿ ಎಂಬ ಪದವಿದೆ.

ಎನ್ನಲ್ಲಿ ಭಕ್ತಿ ಸಾಸುವೆಯ ಷಡ್ಭಾಗದನಿತಿಲ್ಲ;
ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿಯೆಂಬರು!
ನಾನೇನು ಪಾಪವ ಮಾಡಿದೆನೋ?
ಬೆಳೆಯದ ಮುನ್ನವೆ ಕೊಯಿವರೆ? ಹೇಳಾ, ಅಯ್ಯಾ!
ಇರಿಯದ ವೀರ ! ಇಲ್ಲದ ಸೊಬಗುವ

ಎಲ್ಲಾ ಒಡೆಯರು ಏರಿಸಿ ನುಡಿವರು !
ಎನಗಿದು ವಿಧಿಯೆ ಲಿಂಗದೇವಾ! - ಬ.ವ.ದೀ 368

ನನ್ನಲ್ಲಿ ಭಕ್ತಿಯು ಸಾಸುವೆಯ ಕಾಳಿನ ಆರರಲ್ಲಿ ಒಂದು ಭಾಗದಷ್ಟಿಲ್ಲ; ಆದರೂ ನನ್ನನ್ನು ಭಕ್ತ ಎನ್ನುವರು, ಸಮಯಾಚಾರಿ ಎನ್ನುವರು. ನಾನೇನು ಪಾಪವನ್ನು ಮಾಡಿರುವೆನೊ. ಗಿಡವು ಬೆಳೆಯುವ ಮುನ್ನವೇ ಕೊಯ್ಯುವರೆ ದೇವಾ. ನಾನೋ ಇರಿಯಲು ಬಾರದ ವೀರ, ನನ್ನಲ್ಲಿ ಇಲ್ಲದೆ ಇರುವ ಗುಣಗಳನ್ನೆಲ್ಲ ಆರೋಪಿಸಿ ನನ್ನ ಒಡೆಯರಾದ ಶರಣರು ನುಡಿಯುತ್ತಿದ್ದಾರೆ, ಹೊಗಳುತ್ತಿದ್ದಾರೆ. ದೇವಾ! ಇದೇನು ನನ್ನ ವಿಧಿ?!

ತಮ್ಮನ್ನು ಹೊಗಳುತ್ತಿರುವುದಕ್ಕೆ ಗುರು ಬಸವಣ್ಣನವರು ಮುಜುಗರಪಟ್ಟು ವಿಷಾದಿಸಿದರೂ ಅವರನ್ನು ಭಕ್ತನೆಂದು, ಧರ್ಮ ಸಂಸ್ಥಾಪಕ ಸಮಯಚಾರಿ ಎಂದು ಶರಣರು ಕೊಂಡಾಡುತ್ತಿದ್ದರು ಎಂಬುದಕ್ಕೆ ಈ ವಚನ ಪುರಾವೆ ನೀಡುತ್ತದೆ.

1. ಹಣದಲ್ಲಿ ಅಂದರೆ ಸಂಪಾದನೆಯಲ್ಲಿ ವಂಚನೆ ಇರಬಾರದು. ಅತಿಯಾಗಿ ಸಂಗ್ರಹಿಸಿ ಸರ್ಕಾರವನ್ನು, ಸಮಾಜವನ್ನು ವಂಚಿಸಬಾರದು. ಇನ್ನು ದಾಸೋಹ ಮಾಡುವುದರಲ್ಲೂ ವಂಚನೆ ಇರಬಾರದು. ಅಂದರೆ ಪ್ರತಿಯೊಬ್ಬ ಭಕ್ತನೂ ತನ್ನ ಆದಾಯದ ಒಂದು ಪಾಲನ್ನು ಧರ್ಮದ ಏಳ್ಗೆಗಾಗಿ, ಸಮಾಜದ ಉನ್ನತಿಗಾಗಿ ಮೀಸಲಿಡಬೇಕು.

2. ಪ್ರಾಣವನ್ನು ತತ್ವದ ಉಳಿವಿಗಾಗಿ, ಧರ್ಮ ರಕ್ಷಣೆಗಾಗಿ ಕೊಡಲು ಸದಾ ಸಿದ್ಧನಿರಬೇಕು. ಜೀವಗಳ್ಳನಾಗಿ ಜೀವವನ್ನು ಉಳಿಸಿಕೊಳ್ಳಲು ಯತ್ನಿಸಿ ತತ್ವವನ್ನು, ಧರ್ಮನಿಷ್ಠೆಯನ್ನು ಬಲಿಗೊಡಬಾರದು. ಇದುವೇ ಗಣಾಚಾರ.

3. ತತ್ವದಲ್ಲಿ ನಂಬಿಕೆ ಮೊದಲನೆಯ ಹಂತ, ತತ್ವದಲ್ಲಿ ನಿಷ್ಠೆ ಎರಡನೆಯ ಹಂತ, ಅಚ್ಚಳಿಯದ ಅಭಿಮಾನ ಮೂರನೆಯ ಹಂತ. ಬಹುದೇವತೋಪಾಸನೆ ತತ್ವಾಭಿಮಾನ ರಾಹಿತ್ಯ ಮನೋಭಾವವನ್ನು ಬೆಳೆಸಿದರೆ ಏಕದೇವೋಪಾಸನೆ ತತ್ವಾಭಿಮಾನವನ್ನು ಗಟ್ಟಿಗೊಳಿಸುತ್ತದೆ. ಒಮ್ಮೆ ಒಂದು ತತ್ವ - ಸಿದ್ಧಾಂತಕ್ಕೆ ಬದ್ಧನಾದರೆ ಅದನ್ನು ಸಮರ್ಥಿಸಿಕೊಳ್ಳಲು, ಉಳಿಸಿಕೊಳ್ಳಲು ಯತ್ನಿಸಬೇಕು. ಮತ್ತೊಬ್ಬರಿಗೆ ಹೆದರಿ ತನ್ನ ಅಭಿಮಾನವನ್ನು ಬಲಿಕೊಡಬಾರದು.

"ಜಂಗಮವೇ ಲಿಂಗ" ಅಂದರೆ ನಿರಾಕಾರ ಲಿಂಗದೇವನ ಸಾಕಾರ ಮುಖವೇ ಸಮಾಜ, ಜಂಗಮ ಎಂಬುದೊಂದು ತತ್ವ. ಇದನ್ನು ಒಪ್ಪಿಕೊಂಡ ಮೇಲೆ ಮನಸ್ಸು ಮತ್ತೆ ವಿಚಲಿತವಾಗಬಾರದು. ಒಡೆಯನು ಬಂದಾಗ ನಾಯಿ ಕುನ್ನಿ ಬಾಲ ಮುರಿಯುವಂತೆ ಅಲ್ಲಾಡಿಸುತ್ತ, ಅವನ ಸುತ್ತ ಸುತ್ತುತ್ತದೆ. ಇದಕ್ಕೆ ಅದು ಏನೂ ಖರ್ಚು ಮಾಡಬೇಕಾಗಿಲ್ಲ, ಹಾಗೆ ಕೆಲವರು (ಶ್ರೀಮಂತರು)ಗುರುಗಳನ್ನು ಹೊಗಳಿ ಅಟ್ಟಕೇರಿಸುತ್ತಾರೆ, ಆದರೆ ಕೈ ಎತ್ತಿ ಒಂದು ಕಾಸನ್ನು ಸಹ ಅವರು ಮಾಡುವ ಕಾರ್ಯಕ್ಕೆ ಕೊಡುವುದಿಲ್ಲ. ಇವರ ಭಕ್ತಿ ಹೇಗೆಂದರೆ ಒಡೆಯನ ಬರವಿಂಗೆ ಕುನ್ನಿ ಬಾಲ ಅಲ್ಲಾಡಿಸಿದಂತೆ-ಬರಿಗೈ ಭಕ್ತಿ.

222. ಬಾಯುಪಚಾರ

ಹಸಿದು ಬಂದ ಗಂಡಂಗೆ ಉಣಲಿಕ್ಕದೆ,
ಬಡವಾದನೆಂದು ಮರುಗುವ ಸತಿಯ ಸ್ನೇಹದಂತೆ
ಬಂದುದನರಿಯಳು, ಇದ್ದುದ ಸವೆಸಳು-
ದುಃಖವಿಲ್ಲದ ಅಕ್ಕೆ ಹಗರಣಿಗನ ತೆರನಂತೆ
ಲಿಂಗದೇವಾ. - ಬ.ವ.ದೀ.219

ಗಂಡನು ದುಡಿದು, ದಣಿದು ಹಸಿದು ಬಂದಾಗ ಪ್ರೀತಿ, ಅಭಿಮಾನ, ಅನುಕಂಪದಿಂದ ಸತಿಯು ಪತಿಯ ಸೇವೆಯನ್ನು ಮಾಡಬೇಕು, ಉಣಲಿಕ್ಕಿ ಉಪಚರಿಸಬೇಕು. ಅದು ಬಿಟ್ಟು, "ಅಯ್ಯೋ, ಏಕೋ ಯಜಮಾನವರು ಸೊರಗಿ ಬಿಟ್ಟರು. ಪಾಪ, ಸಣ್ಣಗಾಗಿ ಬಿಟ್ಟರು" ಎಂದು ಬಾಯುಪಚಾರದ ಮಾತುಗಳನ್ನಾಡುತ್ತ ಓಡಾಡಿದರೆ ಹೇಗೆ? ಗಂಡನು ದಣಿದು ಬಂದಿರುವುದನ್ನು ಅರಿಯುವುದಿಲ್ಲ, ಅಡಿಗೆ ಮಾಡಿಟ್ಟು ಅದನ್ನು ಸವೆಸುವುದಿಲ್ಲ, ಅಂತರಂಗದಲ್ಲಿ ದುಃಖ, ಅನುಕಂಪವಿಲ್ಲದೆ

ತೋರ್ಪಡಿಸುವ ಶೋಕ ಒಂದು ರೀತಿಯ ಹಗರಣ ಎನ್ನಿಸುತ್ತದೆ, ಬೂಟಾಟಿಕೆಯ ವರ್ತನೆ ಎನ್ನಿಸುತ್ತದೆ.

ಇಲ್ಲಿ ಧರ್ಮಪಿತರು ನಿರ್ಣಾಯಕವಾಗಿ ಏನನ್ನೂ ಹೇಳಿಲ್ಲ. ಆದರೆ ಅವರ ಸಂದೇಶ ಹೀಗಿದೆ ಎಂದೂ ಊಹಿಸಬಹುದು. "ಅಮ್ಮಾವರು ಬಹಳ ದೊಡ್ಡ ಕೆಲಸ ಕೈಗೊಂಡಿದ್ದಾರೆ. ಎಷ್ಟು ಹೊಗಳಿದರೂ ಸಾಲದು." ಅವರು ಕೈಗೊಂಡ ಕಾರ್ಯಕ್ಕೆ ಎಷ್ಟು ಕಾಣಿಕೆ ಕೊಟ್ಟರೂ ಸಾಲದು. ಎಂದು ಕೆಲವು ಶ್ರೀಮಂತರು ಹೊಗಳುವುದುಂಟು."ಅದು ಸರಿ, ನೀವು ಧನವಂತರು, ಅವರ ಕಾರ್ಯವನ್ನು ಮೆಚ್ಚಿಕೊಂಡಿದ್ದೀರಿ. ಮತ್ತೆ ನೀವೂ ಕೈಲಾದ ಸಹಾಯ ಮಾಡಬೇಕಲ್ಲವೆ?" ಎಂದರೆ ಆಗ ಮೌನವೇ ಉತ್ತರ. ಇಂಥವರ ಭಕ್ತಿಯನ್ನು ಧರ್ಮಪಿತ ಬಸವಣ್ಣನವರು ಹಸಿದು ಬಂದ ಗಂಡನಿಗೆ ಉಣಲಿಕ್ಕದೆ ಮರುಗುವ ಸತಿಯ ಸ್ನೇಹಕ್ಕೆ ಹೋಲಿಸಿದ್ದಾರೆ. ಹಸುವನ್ನು ಹೊಗಳಿ, ಪೂಜಿಸಿ, ಸ್ತೋತ್ರ ಮಾಡಿದರೆ ಸಾಲದು ಅದಕ್ಕೆ ಮೇವು, ನೀರು ಕೊಡಬೇಕಲ್ಲವೆ? ಹಾಗೆ ಕ್ರಿಯಾಶೀಲನಾದ ಜಂಗಮನನ್ನು ಕೇವಲ ಹೊಗಳಿದರೆ ಸಾಲದು. ತನು ಮನ ಧನ ಸವೆಸಿ ಅವನಿಗೆ ನೆರವು ನೀಡಬೇಕು.

(ಮುಂದುವರಿಯುವುದು)

ಬಸವಾತ್ಮಜೆಗೆ ನುಡಿ - ವಂದನೆ

ಹೇಗೆ ಬಣ್ಣಿಸಲಿ ಮಾತಾಜಿಯ ಮನದ ಆಲೋಚನೆ
ಅರಿವುರಹಿತ ಅಜ್ಞಾನಿಗಳೇ ಬೊಬ್ಬಿಡದಿರಿ ಸುಮ್ಮನೆ
ಬಸವ ಧರ್ಮ ಪೀಠವು ಕರೆಯುತಿಹುದು ನಿಮ್ಮನೆ
ಸಲ್ಲಿಸ ಬನ್ನಿ ಹೃದಯ ತುಂಬಿ ಬಸವಾತ್ಮಜೆಗೆ ನುಡಿ - ವಂದನೆ

ಲಿಂಗಾಯತ ಧರ್ಮದ್ಹೂದೋಟಕೆ ಬನ್ನಿ ಬೇಗನೆ
ಷಡಾಚಾರ ಷಟಸ್ಥಲಗಳೆಂಬ ಹೂ ಚೆಲ್ಲಿವೆ ಸುವಾಸನೆ
ಶರಣ ಮೇಳ, ಕಲ್ಯಾಣ ಪರ್ವಕ್ಕೆ ಬನ್ನಿ ನೀವು ಮೆಲ್ಲನೆ
ಸಲ್ಲಿಸ ಬನ್ನಿ ಭಾವ ತುಂಬಿ ಬಸವಾತ್ಮಜೆಗೆ ನುಡಿ -ವಂದನೆ

ಲಿಂಗದೇವನ ಲೀಲಾವಿಶೇಷವನ್ನು ನೀವು ತಿಳಿಯದಲೆ
ಮಹಾದೇವಿಯಕ್ಕ ಪ್ರಿಯ ಲಿಂಗದೇವನ ಅರಿಯದಲೆ
ತೊರೆದು ನಿಂತು ರಾಗದ್ವೇಷ ಕ್ರೋಧವೆಂಬ ವರ್ತನೆ
ಸಲ್ಲಿಸ ಬನ್ನಿ ಒಂದು ಸಾರಿ ಬಸವಾತ್ಮಜೆಗೆ ನುಡಿ - ವಂದನೆ

ಗುರು ಬಸವರ ಇಷ್ಟಲಿಂಗ ಹೊಳೆಯುತಿಹುದು ಕೊರಳಲ್ಲಿ
ವಚನಸಾಹಿತ್ಯವೆಂಬ ಜ್ಯೋತಿ ಬೆಳಗುತಿಹುದು ಜಗದಲ್ಲಿ
ಬಸವ ವಚನ ದೀಪ್ತಿ ಪಠಿಸಿ ಬಸವ ಪಥದಿ ಸಾಗಲು
ಸಲ್ಲಿಸ ಬನ್ನಿ ಮನತುಂಬಿ ಬಸವಾತ್ಮಜೆಗೆ ನುಡಿ - ವಂದನೆ

ತತ್ವಗಳನ್ನು ತೂರಬೇಡಿ ನಿಂತು ನೀವು ಗಾಳಿಗೆ
ಶಕ್ತಿಯಾಗಿ ಬನ್ನಿ ಒಮ್ಮೆ ಲಿಂಗಾಯತದ ಏಳ್ಗೆಗೆ
ನಿಮ್ಮ ಶಕ್ತಿಯು ತಾನೇ ಬಸವ ದಳಕೆ ಪ್ರೇರಣೆ
ಸಲ್ಲಿಸ ಬನ್ನಿ ಅಭಿಮಾನದಿ ಬಸವಾತ್ಮಜೆಗೆ ನುಡಿ - ವಂದನೆ

- ಮಹಾರುದ್ರ ಡಾಕುಳಗಿ

ಕಲ್ಯಾಣ ಕಿರಣಕ್ಕೆ ಸಂಬಂಧಿಸಿದ ಯಾವುದೇ ದೂರು, ವಿಳಾಸ ಬದಲಾವಣೆ ಇತ್ಯಾದಿ ತಿಳಿಸುವುದಿದ್ದರೆ 9620058492/9620057562 ಈ ಸಂಖ್ಯೆಗಳಿಗೆ ದೂರವಾಣಿಯ ಮೂಲಕ ಸಂಪರ್ಕಿಸಿರಿ

ಬಾಳೊಂದು ವರ ಬದುಕೊಂದು ಕಲೆ

- ಮಾತಾಜಿ

ಸತ್ಯವೇ ಸುಭಾಷೆ ಸೇವೆಯೇ ಆಚಾರ

ಕರ್ತನೊಬ್ಬನೇ ದೇವ, ಸತ್ಯವೆ ಸುಭಾಷೆ
ಭೃತ್ಯಾಚಾರವೆ ಆಚಾರವಯ್ಯ
ಮತ್ತೆ ದೇವರಿಲ್ಲ ಮತ್ತೆ ಆಚಾರವಿಲ್ಲ
ಮತ್ತೆ ಸುಭಾಷೆ ಎಂಬುದಿಲ್ಲ
ಮಹಂತ ಸಕಲೇಶ್ವರ ದೇವರನೊಲಿಸಿದ ಪುರಾತರ ಪಥವಿದು
ಅವಿಶ್ವಾಸವಿಲ್ಲದೆ ನಂಬುವುದು.

ಸಕಲೇಶ ಮಾದರಸರ ಅಮೂಲ್ಯವಾದ ವಚನವಿದು. ಜೀವನದಲ್ಲಿ ನಂಬಿಕೆ ಬಹಳ ಮುಖ್ಯ. ಗಂಡ ಹೆಂಡತಿಯಲ್ಲಿ, ಹೆಂಡತಿ ಗಂಡನಲ್ಲಿ ಪರಸ್ಪರ ವಿಶ್ವಾಸವಿಡಬೇಕಾಗುತ್ತದೆ. ಅದೇ ರೀತಿ ಸ್ನೇಹಿತರಲ್ಲಿ ವಿಶ್ವಾಸವಿಡಬೇಕಾಗುತ್ತದೆ. ಇವೆಲ್ಲ ಲೌಕಿಕ. ಆದರೆ ಜೀವನದಲ್ಲಿ ಯಶಸ್ವಿಯಾಗಿ ಬದುಕಲು ಬೇಕಾದ ನಂಬಿಕೆ ಜಗತ್ಕರ್ತನಲ್ಲಿ ವಿಶ್ವಾಸ. ಏಕೆಂದರೆ ಲೌಕಿಕ ಸಂಬಂಧಗಳು ಕೆಲವೊಮ್ಮೆ ಹಳಸಬಹುದು. ಸಂಕಷ್ಟದ ಸಮಯದಲ್ಲಿ ಬಂಧು ಬಳಗ ಯಾರೂ ನಿಲ್ಲರು. ದೇವನೊಬ್ಬನೇ ನಿಜ ಬಂಧು. ಅಂಥ ದೇವನಲ್ಲಿ ವಿಶ್ವಾಸವನ್ನು ಇಟ್ಟುದೇ ಆದರೆ ಎಂಥ ಕಠಿಣ ಪರಿಸ್ಥಿತಿಯಲ್ಲಿಯೂ ವ್ಯಕ್ತಿಯು ಹತಾಶನಾಗನು.

ಒಬ್ಬ ದೇವನಲ್ಲಿ ವಿಶ್ವಾಸ ಎಂದಿಲ್ಲಿ ಅರ್ಥೈಸಬಾರದು. ಇರುವ ಒಬ್ಬನೇ ದೇವನಲ್ಲಿ ವಿಶ್ವಾಸವಿಡಬೇಕು. ಆಕಾರ ಉಳ್ಳವರೆಲ್ಲರೂ ಮಹಾತ್ಮರೇ ವಿನಾ ದೇವರಲ್ಲ. ಸೃಷ್ಟಿಕರ್ತನಾದ ಲಿಂಗದೇವನಿಗೆ ಆಕಾರವಿಲ್ಲ, ಅವನೇ ಪರಮೋನ್ನತ ಶಕ್ತಿ ಎಂದು ನಂಬಬೇಕು.

ಇನ್ನು ಸುಭಾಷೆ ಯಾವುದು? ಶಾಸ್ತ್ರೀಯವಾಗಿ ಮಾತನಾಡುವುದು, ಅನೇಕ ಉಕ್ತಿಗಳನ್ನು ಉಲ್ಲೇಖಿಸಿ ಚರ್ಚಿಸುವುದು, ಮೃದುವಾಗಿ ಸಾಹಿತ್ಯಿಕ ವೈಭವದಿಂದ ಮಾತನಾಡುವುದು ಸುಭಾಷೆಯೆ? ಇಲ್ಲ, ಶರಣರ ಪ್ರಕಾರ ಸತ್ಯವನ್ನು ನುಡಿಯುವುದೇ ಸುಭಾಷೆ. ಮೃದುವಾಗಿ ಸುಳ್ಳನ್ನು ಹೇಳುವುದು ಸುಭಾಷೆಯಲ್ಲ, ಕಠೋರವಾಗಿದ್ದರೂ ಸತ್ಯವನ್ನು ನುಡಿಯುವುದೇ ಉತ್ತಮ ಭಾಷೆ.

ಇನ್ನು ನಿಜವಾದ ಆಚಾರ ಯಾವುದು? ಸ್ನಾನ ಮಾಡುವುದು, ಯಾರನ್ನೂ ಮುಟ್ಟಿಸಿ ಕೊಳ್ಳದೆ ಮಡಿಯಿಂದ ಇರುವುದು, ನಿತ್ಯ ಲಿಂಗಾರ್ಚನೆ - ಇದೇ ಆಚಾರವೆ? ಆಚಾರಗಳಲ್ಲೆಲ್ಲ ಶ್ರೇಷ್ಠ ಭೃತ್ಯಾಚಾರ ಅಂದರೆ ಸೇವೆ! ದೇವನೊಬ್ಬನೆ ಒಡೆಯ ನಾವೆಲ್ಲರೂ ಭೃತ್ಯರು; ಸಮಷ್ಟಿಯೇ ಹಿರಿದು ವ್ಯಕ್ತಿಯೇ ಕಿರಿದು ಎಂದು ಭಾವಿಸಿ ವ್ಯಕ್ತಿಯು ಸಮುದಾಯದ ಸೇವೆ ಮಾಡಬೇಕು. ಸಮಷ್ಟಿಯ ಹಿತಕ್ಕಾಗಿ ಬದುಕಬೇಕು. ತನ್ನ ಹಿತಕ್ಕೆ ಸಮುದಾಯವನ್ನು, ಸಮಷ್ಟಿಯನ್ನು ಬಲಿ ಕೊಡಬಾರದು. ಸಮಷ್ಟಿಯ ಹಿತಕ್ಕಾಗಿ ತಾನು ಸಮರ್ಪಿತನಾಗಲು ಸಿದ್ಧನಾಗಬೇಕು. ಭೃತ್ಯಾಚಾರದಲ್ಲಿ ತನು ದಾಸೋಹ, ಮನ ದಾಸೋಹ, ಧನ ದಾಸೋಹ ಎಂದು 3 ಬಗೆ. ಮೂರರಿಂದಲೂ ಸೇವೆ ಸಲ್ಲಿಸುವವನು ಧನ್ಯ. ಧನವನ್ನು ಸಮಾಜದ ಹಿತಕ್ಕೆ ನೀಡಬೇಕು. ತನ್ನ ಬಳಿ ಹಣವಿಲ್ಲದಿದ್ದರೆ ಮನಸ್ಸಿನಿಂದಲಾದರೂ ಒಳ್ಳೆಯದನ್ನು ಬಯಸಬೇಕು; ಶರೀರವನ್ನು ತೊಡಗಿಸಿ ಸೇವಾ ಕಾರ್ಯ ಮಾಡಬೇಕು. ಅದು ತನು ದಾಸೋಹ. ಹೀಗೆ ತನು ಮನ ಧನಗಳಿಂದ ಮಾಡುವ ಸೇವೆಯೇ ಭೃತ್ಯಾಚಾರ, ಇದೇ ಶ್ರೇಷ್ಠ ಆಚಾರ, ಇದುವೇ ಶರಣರು ನಡೆದ ಪಥ. ಇದರಲ್ಲಿ ಅವಿಶ್ವಾಸ ಮಾಡದೆ ಮುನ್ನಡೆಯಬೇಕು - ಸೃಷ್ಟಿಕರ್ತ ಲಿಂಗದೇವನನ್ನು ಒಲಿಸಲು.

ಆಸೆಯಿಂದ ಬಿಟ್ಟು ಕಿರಿಯರಿಲ್ಲ ನಿರಾಸೆಯಿಂದ ಬಿಟ್ಟು ಹಿರಿಯರಿಲ್ಲ
ದಯದಿಂದ ಬಿಟ್ಟು ಧರ್ಮವಿಲ್ಲ ವಿಚಾರದಿಂದ ಬಿಟ್ಟು ಸಹಾಯಿಗಳಿಲ್ಲ

ಸಾಧನೆಯ ಹಾದಿ........

- ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ

ಮನುಷ್ಯ ಯಾವತ್ತೂ ಸುಖಕ್ಕಾಗಿ ಹಂಬಲಿಸುತ್ತಾನೆ. ಅದಕ್ಕಾಗಿಯೇ ಶ್ರಮಿಸುತ್ತಿರುತ್ತಾನೆ. ಕಷ್ಟ, ನೋವು ಅಥವಾ ವೇದನೆ ಅನುಭವಿಸಬೇಕೆಂದು ಯಾರಾದರೂ ಪ್ರಯತ್ನಿಸುವುದುಂಟೇ? ಎಲ್ಲರೂ ಹೋರಾಡುವುದು ಸುಖಕ್ಕಾಗಿ! ಸುಖ-ದುಃಖಗಳು ನಮ್ಮ ಪುಣ್ಯ-ಪಾಪಗಳಿಗನುಗುಣವಾಗಿ ಬರುತ್ತವೆ. ಕಷ್ಟಗಳು ನಮಗೆ ಬೇಡವಾದರೂ ಅನುಭವಿಸಲೇಬೇಕಾದ್ದು ಅನಿವಾರ್ಯ. ಕಾರಣ ಈಗ ನಾವು ಅನುಭವಿಸುತ್ತಿರುವ ಸುಖ-ದುಃಖಗಳಿಗೆ ನಾವೇ ಕಾರಣರಾಗಿದ್ದೇವೆ. ತಿಳಿದೋ, ತಿಳಿಯದೆಯೋ ಹಿಂದಿನ ಜನ್ಮ ಅಥವಾ ಇದೇ ಜನ್ಮದಲ್ಲಿ ನಾವೇ ಮಾಡಿರುವ ಪಾಪ-ಪುಣ್ಯಗಳಿಗೆ ಅನುಗುಣವಾಗಿ ದುಃಖ ಅಥವಾ ಸುಖ ಬಂದಿರುತ್ತದೆ. ಇದು ಕರ್ಮಸಿದ್ಧಾಂತ. ಜಗತ್ತಿನ ಬಹುತೇಕ ವಿದ್ವಾಂಸರು, ದಾರ್ಶನಿಕರು, ಮಹಾತ್ಮರು ಮತ್ತು ಪ್ರವಾದಿಗಳು ಕರ್ಮಸಿದ್ಧಾಂತವನ್ನು ಒಪ್ಪಿದ್ದಾರೆ. ಇದು ಒಂದು ಸಾರ್ವತ್ರಿಕ ಸತ್ಯ. (Universal Truth) ದೇವರೇ ನಿರ್ಮಿಸಿರುವ ಒಂದು ನಿಯಮ. ವಿಶ್ವಗುರು ಬಸವಣ್ಣನವರು, ಜಗನ್ಮಾತಾ ಅಕ್ಕಮಹಾದೇವಿಯವರು ಮತ್ತು ಎಲ್ಲ ಶರಣರು ಇದನ್ನು ಒಪ್ಪಿದ್ದಾರೆಂಬುದು ಅವರ ವಚನಗಳ ಮೂಲಕ ವೇದ್ಯವಾಗುತ್ತದೆ.

ಧರ್ಮಪಿತ ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ:

ಸುಖ ಬಂದರೆ ಪುಣ್ಯದ ಫಲವೆಂಬೆನು
ದುಃಖ ಬಂದರೆ ಪಾಪದ ಫಲವೆಂಬೆನು
ನೀ ಮಾಡಿದಡಾಯಿತ್ತೆಂದೆನ್ನೆನು
ಕರ್ಮಕ್ಕೆ ಕರ್ತೃವೆ ಕಡೆ ಎಂದೆಂಬೆನು
ಉದಾಸೀನವಿಡಿದು ಶರಣೆನ್ನೆನು
ಲಿಂಗದೇವಾ, ನೀ ಮಾಡಿದುಪದೇಶವು ಎನಗೀ ಪರಿಯಲಿ!
ಸಂಸಾರವ ಸವೆಯೆ ಬಳಸುವೆನು. - ಧರ್ಮಗುರು ಬಸವಣ್ಣನವರು

ಬಹುತೇಕ ಜನರು ಸುಖ ಬಂದಾಗ ನಾ ಮಾಡಿದೆ, ನಾ ದುಡಿದೆ ನಾ ದುಡಿಯದೆ ಇದ್ದರೆ ಇದೇನೂ ಸಾಧ್ಯವಿರಲಿಲ್ಲ ಎಂದು ತನ್ನ ಬಗ್ಗೆ ತಾ ಕೊಚ್ಚಿಕೊಳ್ಳುವರು. ದುಃಖ ಅಥವಾ ಕಷ್ಟಗಳು ಬಂದಾಗ ಮತ್ತು ಏನಾದರೂ ಕೆಡಕಾದಾಗ ಇತರರನ್ನು ದೂರುತ್ತಾರೆ. ಇದು ಮಾನವನ ಸಹಜಗುಣ. ತಾನು ಅನುಭವಿಸುತ್ತಿರುವ ದುಃಖಕ್ಕೆ ತನ್ನ ಕರ್ಮ ಅಥವಾ ದೌರ್ಬಲ್ಯವೆ ಕಾರಣ ಎಂಬುದು ಬಹುತೇಕ ಜನರಿಗೆ ಗೊತ್ತಿರುತ್ತದೆ. ಅವರ ಅಂತರಾತ್ಮ ಹೇಳುತ್ತಲೇ ಇರುತ್ತದೆ. ಆದರೂ ಸಹ ಮನಸ್ಸು ಅಂತಃಸಾಕ್ಷಿಗೆ ವಿರುದ್ಧವಾಗಿ ನಡೆಯಲು ಪ್ರೇರೇಪಿಸುತ್ತ ಬೇರೊಬ್ಬರ ಮೇಲೆ ದೋಷಾರೋಪ ಹೊರಿಸಲು ಯತ್ನಿಸುತ್ತದೆ. ತನ್ನ ಆಂತರಿಕ ದೌರ್ಬಲ್ಯವನ್ನು ಮುಚ್ಚಿಕೊಳ್ಳಲು ಮತ್ತೊಬ್ಬ ನಿರಪರಾಧಿಯ ಮೇಲೆ ಆರೋಪ ಹೊರಿಸಿ ಅವರ ಜೀವನವನ್ನು ಹಾಳು ಮಾಡಲು ದುರ್ಬಲ ವ್ಯಕ್ತಿಯು ಯತ್ನಿಸುತ್ತಾನೆ. ತಾತ್ಕಾಲಿಕವಾಗಿ ಕೆಲವು ಸಂದರ್ಭಗಳಲ್ಲೂ ಎಲ್ಲರನ್ನೂ ಮೋಸಗೊಳಿಸಲು ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ಕೆಲವರನ್ನು ಮಾತ್ರ ಮೋಸಗೊಳಿಸಬಹುದು. ಒಂದು ತಪ್ಪನ್ನು ಮುಚ್ಚಿಕೊಳ್ಳುವುದಕ್ಕಾಗಿ ಸಾವಿರ ಸುಳ್ಳು ಹೇಳಬೇಕಾಗುವುದು. ದಿನ ನಿತ್ಯ ಸುಪ್ರಭಾತ ಸಮಯದಿಂದ ರಾತ್ರಿ ಮಲಗುವವರೆಗೆ ತಪ್ಪುಗಳನ್ನೆ ಅಥವಾ ಕೆಟ್ಟದ್ದನ್ನೇ ಮಾಡುವವರು ಅದೆಷ್ಟು ಸಾವಿರ ಸುಳ್ಳುಗಳನ್ನು ಹೇಳಬೇಕಾದೀತು! ನೀವೇ ಯೋಚಿಸಿ. ಸತ್ಯ ಹೇಳುವವರು ಯಾವತ್ತೂ ಹೆದರುವ ಪ್ರಶ್ನೆಯೇ ಇಲ್ಲ. ಕಾರಣ ಎಲ್ಲ ಕಾಲಕ್ಕೂ, ಎಲ್ಲರ ಮುಂದೆಯೂ ಸತ್ಯವನ್ನೇ ಹೇಳುತ್ತಾರೆ. ಸುಳ್ಳು ಹೇಳುವವರು ಬೇರೆ ಬೇರೆ ರೀತಿಯಲ್ಲಿ ಹೇಳುತ್ತಾರೆ. ಹೀಗಾಗಿ ಯಾರ ಮುಂದೆ ಏನು ಹೇಳಿದ್ದೇನೆ ಎಂಬುದನ್ನು ಅವರು ಮರೆತಿರುತ್ತಾರೆ. ಆದ್ದರಿಂದ ಮಾತಾಡುವಾಗ ತಪ್ಪಿನಲ್ಲಿ ಸಿಕ್ಕುತ್ತಾರೆ.

ಸುಳ್ಳು, ಮೋಸ, ವಂಚನೆ ಇವು ಸಾಧಕರಿಗೆ ಮಾಯೆಯಾಗಿ ಕಾಡುತ್ತವೆ. ಹಿಂದಿನ ಅದೆಷ್ಟೋ ಜನ್ಮದ ಪಾಪದ ಫಲವಾಗಿ ಈ ಜನ್ಮದಲ್ಲಿ ಮಾನಸಿಕ ಹಿಂಸೆ ಅನುಭವಿಸುತ್ತಿದ್ದರೂ ಸಹ ದುರ್ಬಲವಾದ ಮನಸ್ಸು ಮತ್ತೂ ಪಾಪಕೃತ್ಯವನ್ನು ಮಾಡಿಸುತ್ತಲೇ ಇರುತ್ತದೆ.

ತೋಟದಲ್ಲಿ ಕಬ್ಬು ಚೆನ್ನಾಗಿ ಬೆಳೆದು ನಿಂತಾಗ ರೈತನು ಇದೆಲ್ಲ ನನ್ನ ತೋಟ, ನಾನೇ ಬೆಳೆದಿರುವ ಕಬ್ಬು ಎಂದು ಹೆಮ್ಮೆಯಿಂದ ಹೇಳುವನು. ಮಳೆಯಿಲ್ಲದೆ, ನೀರಿಲ್ಲದೆ ಕಬ್ಬು ಒಣಗಿ ಹೋದಾಗ "ಇದೆಲ್ಲ ದೇವರ ಆಟ" ಎನ್ನುವನು. ಕ್ರಮವಾಗಿ ನಾಲ್ಕು ಜನ ಗಂಡು ಮಕ್ಕಳೇ ಹುಟ್ಟಿದಾಗ ತಂದೆ-ತಾಯಿಗಳು ನಾವು ನಾಲ್ಕು ಜನ ಗಂಡು ಮಕ್ಕಳನ್ನು ಹೆತ್ತಿದ್ದೇವೆ. ಎಂದು ಎದೆ ತಟ್ಟಿ ಹೇಳಿಕೊಳ್ಳುತ್ತಾರೆ. ಆದರೆ ಹೆಣ್ಣು ಮಗು ಜನಿಸಿದರೆ ಇದೆಲ್ಲ ದೇವರ ಆಟ ಎಂದು ಗೊಣಗುವರು. ಇದು ಮಾನವನ ದೌರ್ಬಲ್ಯವೆಂದೇ ಹೇಳಬೇಕು. ಕೆಲವರು ಕೇವಲ ವಿಧಿಯನ್ನೇ ನಂಬಿ ನಿರಾಶರಾಗಿ ಪ್ರಯತ್ನ ಮಾಡದೆ ಕೈ ಚೆಲ್ಲಿ ಕುಳಿತಿರುತ್ತಾರೆ. ಮತ್ತೆ ಕೆಲವರು ತಾವು ಪ್ರಯತ್ನದಿಂದಲೇ ಎಲ್ಲವನ್ನೂ ಸಾಧಿಸಿದ್ದೇವೆ ಎಂದು ದುರಹಂಕಾರಿಗಳಾಗಿರುತ್ತಾರೆ. ಜಗತ್ತನ್ನು ನಿರ್ಮಾಣ ಮಾಡಿದ ಕರ್ತನೊಬ್ಬನಿದ್ದಾನೆ ಅವನ ಅನುಗ್ರಹ ಹೊಂದಿ ಮಾಡುವ ಎಲ್ಲ ಪ್ರಯತ್ನಗಳೂ ಯಶಸ್ವಿಯಾಗುತ್ತವೆ ಎಂಬುದನ್ನು ಬಸವಾದಿ ಶರಣರು ನಮಗೆ ಕಲಿಸಿಕೊಟ್ಟಿದ್ದಾರೆ. ವಿಧಿವಾದ ಮತ್ತು ಪ್ರಯತ್ನವಾದಗಳಿಗಿಂತಲೂ ಗುರು ಬಸವಣ್ಣನವರು ಕೊಟ್ಟಿರುವ ದೇವ ಕಾರುಣ್ಯವಾದವು ಸರ್ವಶ್ರೇಷ್ಠವಾದುದು.

ಗುರು ಬಸವಣ್ಣನವರು ಹೇಳುವಂತೆ ಪಾಮ-ಕ್ಷೇಮ, ಹಾನಿ-ವೃದ್ಧಿ ಮತ್ತು ಮಾನ-ಅಪಮಾನ ಎಲ್ಲದಕ್ಕೂ ಕರ್ಮಸಿದ್ಧಾಂತವೇ ಕಾರಣವಾಗಿರುತ್ತದೆ. ಸುಖ ಬಂದಾಗ ತಾವೇ ಮಾಡಿದ ಪುಣ್ಯದ ಫಲವೆಂದು ತಿಳಿಯಬೇಕು. ದುಃಖ ಬಂದಾಗಲೂ ಇದಕ್ಕೆ ಬೇರೆ ಯಾರೂ ಕಾರಣರಲ್ಲ. ಅದಕ್ಕೂ ಸಹ ತಾನೇ ಮಾಡಿದ ಪಾಪದ ಪ್ರತಿಫಲವೆಂದು ನಂಬಬೇಕು. ಕರ್ಮಕ್ಕೆ ಕರ್ತೃವೇ ಕಡೆ ಎಂದರೆ ತಾನು ಮಾಡಿದ ಕರ್ಮವನ್ನು ಜೀವಾತ್ಮ ತಾನೇ ತೀರಿಸಬೇಕು. ಪಾಪ-ಪುಣ್ಯಗಳ Balance Nil ಆಗುವವರೆಗೆ ಭವ ಚಕ್ರದಿಂದ ಬಿಡುಗಡೆಯಾಗದು, ಪರಮಸುಖದೋರದು. ದೇವನ ಅನುಗ್ರಹ ಲಭಿಸದು.

ಜೀವನದಲ್ಲಿ ನಿರಾಶೆಯಾಗಿದೆ ಎಂದು ದೇವನಿಗೆ ಅಥವಾ ಧರ್ಮಕ್ಕೆ ಶರಣಾಗಬಾರದು. ಆಶಾವಾದಿಯಾಗಿ ಜೀವನ ಸಾರ್ಥಕಗೊಳಿಸಿಕೊಳ್ಳುವುದಕ್ಕಾಗಿ ಸಾಧನಾ ಪಥಕ್ಕೆ ಬರಬೇಕು. ವೈರಾಗ್ಯ ಜೀವನ ಸ್ವೀಕರಿಸಬೇಕು. ಶ್ರೀ ಗುರು ಬಸವಣ್ಣನವರು ತಮ್ಮ ಮನದಲ್ಲಿ ಹೊಳೆಯುವ ಪ್ರತಿಯೊಂದು ವಿಚಾರ ಅಥವಾ ಸ್ಫುರಣವನ್ನು ಸಹ ಲಿಂಗದೇವನ ಉಪದೇಶ ಅಥವಾ ಆದೇಶವೆಂದು ಭಾವಿಸುವ ಪರಿಪೂರ್ಣ ಆತ್ಮರಾಗಿದ್ದರು. ಅಂತೆಯೇ ಈ ಎಲ್ಲ ವಿಚಾರವು ದೇವನ ಉಪದೇಶವೆಂದು ಭಾವಿಸಿದ್ದರಲ್ಲದೆ ಒಂದು ಭರವಸೆಯನ್ನು ದೇವನಿಗೆ ನೀಡಿದ್ದಾರೆ. ಅದೆಂದರೆ "ಸಂಸಾರವ ಸವೆಯೆ ಬಳಸುವೆನು" ಆಯುಷ್ಯ ಇರುವವರೆಗೆ ಸಮಾಜ ಮತ್ತು ಧರ್ಮಕ್ಕಾಗಿ ನಮ್ಮ ಬಾಳನ್ನು ಸವೆಸಬೇಕು ಮತ್ತು ಸೇವೆಗಾಗಿ ಪ್ರಸಾದ ಕಾಯವನ್ನು ಪೂರ್ಣವಾಗಿ ಬಳಸಬೇಕು ಎಂಬುದು ಇದರ ಅರ್ಥ.

ಸೇವೆಗಾಗಿಯೇ ಬದುಕನ್ನು ಮೀಸಲಿಡಬೇಕೆಂಬ ತ್ಯಾಗ ಮನೋಭಾವ ಬರುವುದು ಸುಲಭದ ಮಾತಲ್ಲ; ಅದು ಎಲ್ಲರಿಂದಲೂ ಸಾಧ್ಯವಿಲ್ಲ. ವಿಚಾರವೆಂಬ ಹೂವು, ಆಚಾರವೆಂಬ ಕಾಯಿ ಮತ್ತು ನಿಷ್ಪತ್ತಿ (ಪರಿಪೂರ್ಣತೆ) ಯೆಂಬ ಹಣ್ಣನ್ನು ಪಡೆಯಬೇಕಾದರೆ ಭಕ್ತಿ ಎಂಬ ಪೃಥ್ವಿ (ಭೂಮಿ) ಬಹಳ ಮುಖ್ಯ. ಮುಮುಕ್ಷುವಿನ ಭಕ್ತಿ ತುಂಬಿದ ಹೃದಯವೆಂಬ ಹಸನಾದ ಭೂಮಿಯಲ್ಲಿ ಗುರುವು ತತ್ವ ವಿಚಾರದ ಬೀಜಗಳನ್ನು ಬಿತ್ತಿ, ಇಷ್ಟಲಿಂಗದೀಕ್ಷೆಯನ್ನು ನೀಡಿದಾಗ, ಸ್ವತಂತ್ರ ವಿಚಾರವೆಂಬ ಹೂವು ಸದಾಚಾರವೆಂಬ ಗಟ್ಟಿ ಕಾಯಿಯಾಗಿ ರೂಪುಗೊಂಡು ಸತತವಾದ ಸಾಧನೆಯಿಂದ, ಗುರು-ಲಿಂಗ-ಜಂಗಮ ಸೇವೆಯಿಂದ ಸಾಧಕನ ಹೃದಯವು ಪರಿಪಕ್ವವಾದ ಹಣ್ಣಾಗುತ್ತದೆ. ಆತನ ಕಾಯವೆಲ್ಲ ಲಿಂಗ ಕಾಯವಾಗುತ್ತದೆ. ಪ್ರತಿಯೊಂದು ಇಂದ್ರಿಯಗಳು ಲಿಂಗ (Divine) ಸ್ವರೂಪವಾಗುತ್ತವೆ.

ಸಾಧನೆಯ ಹಾದಿಯಲ್ಲಿ ನಾನಾ ತರಹದ ಎಡರು-ತೊಡರುಗಳು, ಟೀಕೆ-ಟಿಪ್ಪಣಿಗಳು, ಕಷ್ಟ-ನಿಂದೆಗಳು ಎದುರಾಗುತ್ತವೆ. ಜೊತೆಗೆ ಹೊಗಳಿಕೆ ಮಾನ-ಸನ್ಮಾನಗಳೂ ಇರುತ್ತವೆ. ತಮ್ಮ ಪ್ರವಚನ ತುಂಬ ಚೆನ್ನಾಗಿತ್ತು ಎಂದು ಸಾವಿರಾರು ಭಕ್ತರು ಹೊಗಳುವರು. ಯಾರೋ ಒಬ್ಬಿಬ್ಬರು ಮತ್ಸರ ಭಾವನೆಯಿಂದ ತೆಗಳುವವರೂ ಇದ್ದೇ ಇರುತ್ತಾರೆ; ಇರಲೇ ಬೇಕು.

ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ ಸಮಚಿತ್ತತೆ ಕಾಪಾಡಿಕೊಳ್ಳುವುದು ನಿಜವಾದ

ಸಾಧಕನ ಲಕ್ಷಣ. ಸ್ತುತಿ - ನಿಂದೆ, ಕಷ್ಟ -ಸುಖ ಇವನ್ನು ಸಮಚಿತ್ತತೆಯಿಂದ ಸಮಾನವಾಗಿ ದೇವನ ಪ್ರಸಾದವೆಂದು ಭಾವಿಸಿ ಸ್ವೀಕರಿಸುವವನೇ ಪ್ರಸಾದಿ.

ಮಾನವ ಜನ್ಮವೆಂಬ ಬೆಟ್ಟದ ಮೇಲೆ ಕ್ರೂರ ಮೃಗಗಳಿವೆ. ಭವ ಸಾಗರದ ದಂಡೆಯ ಮೇಲೆ ಮನೆ ಮಾಡಿಕೊಂಡಿರುವಾಗ ಸುಖ -ದುಃಖಗಳ ತೆರೆಗಳು ಅಪ್ಪಳಿಸುವುದು ಸಹಜ. ಐಹಿಕ ಜೀವನದ ಸಂತೆಯಲ್ಲಿ ಹಲವು ರೀತಿಯ ಮಾತುಗಳು, ಶಬ್ದಗಳು ಕೇಳುವುದುಂಟು. ಅಂತೆಯೇ ವೈರಾಗ್ಯನಿಧಿ ಅಕ್ಕಮಹಾದೇವಿ ತಾಯಿಯವರು ಹೇಳುತ್ತಾರೆ.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗೆ ಅಂಜಿದಡೆ ಎಂತಯ್ಯ!
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ -ತೆರೆಗಳಿಗೆ ಅಂಜಿದಡೆ ಎಂತಯ್ಯ!
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆ ಎಂತಯ್ಯ!
ಚನ್ನಮಲ್ಲಿಕಾರ್ಜುನದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ -ನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

- ಜಗನ್ಮಾತಾ ಅಕ್ಕಮಹಾದೇವಿ

ದುಷ್ಟ ಜನತೆಯ ಕಷ್ಟ -ಕಿರುಕುಳ ಮತ್ತು ಸುಖ -ದುಃಖಗಳ ಅಲೆಗಳಿಗೆ ಹೆದರದೆ ನಿಂದಕರಾಡುವ ಟೀಕೆ -ಟಿಪ್ಪಣಿಗಳಿಗೆ ಕಿವಿಗೊಡದೆ ಸ್ತುತಿ - ನಿಂದೆ ಏನೇ ಬಂದರೂ ಸಮಾಧಾನಿಯಾಗಿರಬೇಕು. ನಿರ್ಲಿಪ್ತವಾಗಿ ಬದುಕಲು ಕಲಿತಾಗ ಮಾತ್ರ ನಾವು ಗುರಿ ಮುಟ್ಟಲು ಸಾಧ್ಯ. ನಿರ್ಲಿಪ್ತತೆ ಎಂದರೆ ಬೇಜವಾಬ್ದಾರಿಗಳಾಗುವುದಲ್ಲ, ಜವಾಬ್ದಾರಿಯನ್ನು ನಿರ್ವಹಿಸುತ್ತಲೇ ಸಂಪೂರ್ಣ ಶರಣಾಗತಿಯಿಂದ ದೇವನನ್ನು ನೆರೆನಂಬಬೇಕು.

ಮಾಡುವಂತಿರಬೇಕು, ಮಾಡದಂತಿರಬೇಕು
ಮಾಡುವ ಮಾಟದಲ್ಲಿ ತಾನಿಲ್ಲದಂತಿರಬೇಕು.

ಧರ್ಮಗುರು ಬಸವಣ್ಣನವರು ಆದೇಶಿಸಿದಂತೆ ನಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಬೇಕು. ಎಂಥ ತೊಂದರೆ ಬಂದರೂ ಆದರ್ಶವನ್ನು ಬಿಡದೆ ಛಲದಿಂದ ಮುನ್ನುಗ್ಗುವ ಸಾಹಸ ಪ್ರವೃತ್ತಿ ಬೆಳೆಸಿಕೊಳ್ಳುವುದು ಅತ್ಯಗತ್ಯವಾಗಿದೆ. ಹತ್ತಾರು ವರ್ಷಗಳಿಂದ ಸಮಾಜಕ್ಕಾಗಿ, ಧರ್ಮಕ್ಕಾಗಿ ದುಡಿದು ಆದರ್ಶವನ್ನು ಬೆಳೆಸಿಕೊಂಡ ಸಾಧಕನು ತನ್ನ ಮೇಲೆ ಯಾವುದೋ ಸುಳ್ಳು ಆರೋಪ ಬಂದಾಗ ಹೆದರಿಕೊಂಡು ಆದರ್ಶದಿಂದ ಹಿಂದೆ ಸರಿದಾಗ ಸಮಾಜದ ದೃಷ್ಟಿಯಲ್ಲಿ ಆತ ಅಪರಾಧಿಯಾಗುತ್ತಾನೆ. ತನ್ನ ನಿಷ್ಠೆಯನ್ನು ಪರೀಕ್ಷಿಸುವುದಕ್ಕಾಗಿ ದೇವರು ಈ ರೀತಿಯ ಲೀಲೆಯಾಡುತ್ತಿದ್ದಾನೆಂದು ನಂಬಿ ಅದನ್ನೇ ಸವಾಲನ್ನಾಗಿ ಸ್ವೀಕರಿಸಿ, ಧೈರ್ಯದಿಂದ ಮುಂದಡಿ ಇಡಬೇಕು. ಗುರು ಬಸವಣ್ಣನವರು ಹೇಳಿಲ್ಲವೇ..?

ಕೊಲುವೆನೆಂಬ ಭಾಷೆ ದೇವನದಾದರೆ
ಗೆಲ್ಲುವೆನೆಂಬ ಭಾಷೆ ಭಕ್ತನದು
ಸತ್ಯವೆಂಬ ಕೂರಲಗನೆ ತಳೆದು
ಸದ್ಭಕ್ತರು ಗೆದ್ದರು ಕಾಣಾ ಲಿಂಗದೇವಾ.

ನಾವು ಹೆದರುವ ಕಾರಣವಿಲ್ಲ, ಯಾಕೆಂದರೆ ದೇವರು ನಿರಾಯುಧನಾಗಿದ್ದಾನೆ. ಅವನ ಮೇಲೆ ಸುಲಭವಾಗಿ ಜಯ ಸಾಧಿಸಬಹುದೆಂದು ವಿಶ್ವಗುರು ಬಸವಣ್ಣನವರು ಹೇಳುತ್ತಾರೆ. ಇತಿಹಾಸದ ಪುಟಗಳನ್ನು ನೋಡಿದಾಗ ಎಂದೆಂದೂ ಭಕ್ತರೇ ಗೆಲವು ಸಾಧಿಸಿದ್ದಾರೆಂಬುದು ಗೋಚರಿಸುತ್ತದೆ. ಕಾರಣ ಸೃಷ್ಟಿಕರ್ತ ಲಿಂಗದೇವನು ಮಮತಾಮಯಿ, ಕಾರುಣ್ಯನಿಧಿ,

ಭಕ್ತವತ್ಸಲನಾಗಿದ್ದಾನೆ. ಭಕ್ತನು ಒಂದು ಹೆಜ್ಜೆಯಿಟ್ಟು ಮುಂದೆ ಬಂದರೆ ದೇವನು ನಮ್ಮನ್ನು ಅನುಗ್ರಹಿಸುವುದಕ್ಕಾಗಿ ಒಂಬತ್ತು ಹೆಜ್ಜೆ ಮುಂದಕ್ಕೆ ಬರುತ್ತಾನೆ. ಈ ಜಗತ್ತನ್ನು ನಿರ್ಮಾಣ ಮಾಡಿದ ಒಬ್ಬ ಪರಮಾತ್ಮನಿದ್ದಾನೆ. ಅವನು ಒಬ್ಬನೆ ಮತ್ತು ಪರಮೋನ್ನತ ಶಕ್ತಿಯೆಂದು ನಂಬಿ ಅವನಿಗೆ ಶರಣಾಗತನಾದ ಸಾಧಕನು ಮಾತ್ರ ತನ್ನ ಆದರ್ಶದೆಡೆಗೆ ಸಾಗಬಲ್ಲ; ಗುರಿ ಮುಟ್ಟಬಲ್ಲ.

ನಾವು ಸರಿಯಾದ ಮಾರ್ಗದಲ್ಲಿ ಅಂದರೆ ನಮ್ಮ ಸೈಡಲ್ಲೆ ವಾಹನ ಓಡಿಸುತ್ತಿದ್ದರೂ ಸಹ ಕೆಲವೊಂದು ಸಾರಿ ಬೇರೊಬ್ಬರು ವಿರುದ್ಧ ಮಾರ್ಗದಲ್ಲಿ ಬಂದು ನಮ್ಮ ಮೇಲೆ ಎರಗುವುದುಂಟು. ನಮ್ಮದೇನೂ ತಪ್ಪಿಲ್ಲವಾದರೂ ನಮಗೆ ಜಾಸ್ತಿ ಹಾನಿಯಾಗಿರುತ್ತದೆ. ಅವನು ಮಾತ್ರ ಸುರಕ್ಷಿತವಾಗಿರುತ್ತಾನೆ. ಈ ದುರ್ಘಟನೆ, ಅವಗಡ ನಡೆಯಲಿಕ್ಕೂ ಒಂದು ಕಾರಣ ಇದ್ದೇ ಇರುತ್ತದೆ. ಸಾಧಕರ ಜೀವನದಲ್ಲಿ ಕೆಲವೊಂದು ಸಲ ಈ ರೀತಿಯ ದುರ್ಘಟನೆಗಳು ನಡೆಯುತ್ತವೆ.

ಬಾರದು ಬಪ್ಪದು, ಬಪ್ಪುದು ತಪ್ಪದು, ಬರಬೇಕಾದುದನ್ನು ತಪ್ಪಿಸಲು ಸಾಧ್ಯವೇ ಇಲ್ಲ. ಆ ಸಂದರ್ಭದಲ್ಲಿ ಮನಸ್ಸು ಹೊಯ್ದಾಡಿದಾಗ ಅಥವಾ ತಪ್ಪು ನಿರ್ಧಾರ ತೆಗೆದುಕೊಂಡಾಗ ಸಾಧಕನ ಜೀವನ ವ್ಯರ್ಥವಾಗುತ್ತದೆ.

ಕೆಲವೊಂದು ಸಲ ನಮ್ಮಲ್ಲಿರುವ ಪ್ರತಿಭೆಯೇ ನಮ್ಮ ಶತ್ರುವೇನೋ ಎನಿಸುತ್ತದೆ. ನಮ್ಮ ಪ್ರತಿಭೆಯನ್ನು ಕಂಡು ಕೆಲವರು ಅತಿಯಾಗಿ ಪ್ರೀತಿ - ಅಭಿಮಾನ, ಭಕ್ತಿ ಮಾಡುವರು ಕೊಂಡಾಡುವರು. ಪ್ರೀತಿಸುವವರನ್ನು ಕಂಡು ಕೆಲವರು ಮತ್ಸರದಿಂದ ದ್ವೇಷಿಸುವರು. ಪ್ರೀತಿಸುವವರ ಮತ್ತು ದ್ವೇಷಿಸುವವರ ನಡುವಿನ ವೈಯಕ್ತಿಕ ಸಂಘರ್ಷ ಸಹ ನಿರ್ದೋಷಿಯಾದ ಪ್ರತಿಭಾನ್ವಿತ ಸಾಧಕನ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಲ್ಲುದು.

ಸ್ತುತಿಸುವವನೊಬ್ಬ ನಿಂದಿಸುವವನೊಬ್ಬ
ನಮ್ಮ ಶಿವಯೋಗಿಯ ಪರಮಬಂಧುಗಳಯ್ಯಾ
ಪುಣ್ಯವನೊಬ್ಬ ಕೊಂಬ, ಪಾಪವನೊಬ್ಬ ಕೊಂಬ
ನಮ್ಮ ಲಿಂಗದೇವನ ಶರಣನು ನಿತ್ಯಮುಕ್ತನು.

ಪಾಪವೂ ಇಲ್ಲದ, ಪುಣ್ಯವೂ ಇಲ್ಲದ ನಿತ್ಯಮುಕ್ತಿತ್ವ ಪಡೆಯುವುದು ನಮ್ಮ ಗುರಿಯಾಗಬೇಕು.

ಸತ್ತ ನಂತರ ಅಥವಾ ಲಿಂಗೈಕ್ಯವಾದ ಬಳಿಕ ಮುಕ್ತಿ ಪಡೆಯುವುದಕ್ಕಿಂತ ಜೀವಿತಾವಧಿಯಲ್ಲಿಯೇ ಚೈತನ್ಯ ಸಮಾಧಿ ಹೊಂದುವುದು ಸರ್ವಶ್ರೇಷ್ಠ. ಅದನ್ನು ನಾವು ಎನ್ನ ಪರಮಗುರು ಮಹಾಜಗದ್ಗುರು ಮಾತಾಜಿಯವರಿಂದ ಕಲಿಯಬೇಕು. Adopt and Adjustment ಗುಣವನ್ನು ಮತ್ತು ತ್ಯಾಗ ಮನೋಭಾವನೆಯನ್ನು ಧರ್ಮಕ್ಕಾಗಿ, ಸಮಾಜಕ್ಕಾಗಿ ತಾಳಬೇಕಾಗುತ್ತದೆ.

ಪೌರಾಣಿಕ ಶಿವನ ಕುರಿತು ಒಂದು ಕಥೆಯಿದೆ. ಒಂದು ಸಲ ಶಿವನು ಪಾರ್ವತಿಯನ್ನು ಉದ್ದೇಶಿಸಿ ಹೇಳುತ್ತಾನೆ. 'ಪಾರ್ವತಿ ನನ್ನ ತೊಡೆ (ಕಾಲು) ನೋವಾಗಿದೆ; ಸ್ವಲ್ಪ ಕೆಳಗೆ ಇಳಿದರೆ ಒಳಿತು."

ಪಾರ್ವತಿ: 'ಏನೂ ನಾನು ಕುಳಿತಿದ್ದಕ್ಕೆ ನಿಮಗೆ ಕಾಲು ನೋವಾಯಿತೆ ? ತಲೆಯ ಮೇಲೆ ಆಕೆ ಗಂಗಾ ಕುಳಿತಿದ್ದಾಳಲ್ಲ ಅವಳನ್ನು ಮೊದಲು ಕೆಳಗಿಳಿಸಿ. ಆಗ ಶಿವನು ಗಂಗೆಯನ್ನು ಕೇಳಿಕೊಂಡ- "ಗಂಗಾ ನೀನಾದರೂ ಸ್ವಲ್ಪ ಕೆಳಗಿಳಿ, ಎಷ್ಟೋ ವರ್ಷಗಳಿಂದ ನನ್ನ ತಲೆಯ ಮೇಲೆ ಕುಳಿತಿದ್ದೀಯಾ. ತಲೆ ನೋವಾಗಿದೆ"ಅಂದಾಗ ಗಂಗಾ ಹೇಳ್ತಾಳೆ - 'ಮೊದಲು ಪಾರ್ವತಿಯನ್ನು ಕೆಳಗಿಳಿಸು; ಆ ಮೇಲೆ ನಾನು ವಿಚಾರ ಮಾಡ್ತೀನಿ.' ಅವಳೂ ಇಳಿಯಲಿಲ್ಲ, ಇವಳೂ ಇಳಿಯಲಿಲ್ಲ. ಆಗ ಶಿವ ಹೇಳಿದ - 'ಗಂಗಾ ನೀನು ಅಲ್ಲೇ ಇರು, ಪಾರ್ವತಿ ನೀನೂ ಇಲ್ಲೇ ಇರು, ನನ್ನೊಳಗೆ ನಾನು ಇರ್ತೀನಿ' ಅಂತ ಶಿವನು ಕಣ್ಣುಮುಚ್ಚಿ ಅಂತರ್ಮುಖಿಯಾಗುತ್ತಾನೆ.

ಇದೊಂದು ಸುಂದರವಾದ ಕಲ್ಪನೆ. ಸಮಾಜ ಸಂಘಟನೆ ಮಾಡಬೇಕಾದರೆ ಸಾಧಕ - ಶಿಷ್ಯರಲ್ಲಿರುವ ಅವಗುಣ ಅಥವಾ ದೌರ್ಬಲ್ಯಗಳನ್ನು ಎಣಿಸದೆ, ಅವರನ್ನು ಪ್ರೀತಿಯಿಂದಲೇ ತಿದ್ದುತ್ತ, ಅವರಲ್ಲಿರುವ ಪ್ರತಿಭೆ, ಶಕ್ತಿಯನ್ನು ಸಮಾಜದ ಉನ್ನತಿಗಾಗಿ, ಲೋಕಕಲ್ಯಾಣಕ್ಕಾಗಿ ಸದುಪಯೋಗ ಮಾಡಿಕೊಳ್ಳುವ ಗುಣ ಮುತ್ಸದ್ದಿ ನಾಯಕರಲ್ಲಿರುತ್ತದೆ. ಅದ್ಭುತವಾದ ಗುಣಗ್ರಾಹಕತ್ವ ಮಂತ್ರಪುರುಷ

ಬಸವಣ್ಣನವರಲ್ಲಿತ್ತು. ಅದು ಪರಮಪೂಜ್ಯ ಮಾತಾಜಿಯವರಲ್ಲಿದೆ. ಪೂಜ್ಯ ಮಾತಾಜಿಯವರು ಸಮಾಜಕ್ಕಾಗಿ, ಧರ್ಮ ಮತ್ತು ಸತ್ಯ ಪ್ರತಿಷ್ಠಾಪನೆಗಾಗಿ ಹೋರಾಡುತ್ತಿದ್ದಾರೆ. ಅದೆಷ್ಟೋ ತೊಂದರೆಗಳು, ನಿಂದೆಗಳು, ಮಾನಸಿಕ ಹಿಂಸೆ ಏನೆಲ್ಲ ಬಂದರೂ ನಿರ್ಲಿಪ್ತವಾಗಿ ವಚನಗಳನ್ನು ಹಾಡುತ್ತ ಸಂತೋಷದಿಂದ ಎಲ್ಲವನ್ನೂ ಎದುರಿಸುತ್ತಾರೆ. ಇದೇ ಜೀವನ್ಮುಕ್ತ ಸ್ಥಿತಿ.

ಲಿಂಗಾಯತ ಗಣ ಮೇಳದ ಪ್ರಚಾರಕ್ಕಾಗಿ ಮಹಾರಾಷ್ಟ್ರದಲ್ಲಿ ಇದ್ದಾಗ ಒಬ್ಬ ಶರಣರು ನಮ್ಮ ಹತ್ತಿರ ಬಂದು ಒಂದು ಪ್ರಶ್ನೆ ಕೇಳಿದರು. ಅದೇನೆಂದರೆ ಅಕ್ಕಮಹಾದೇವಿಯವರ ಭಾವಚಿತ್ರದಲ್ಲಿ ಒಂದು ಕಡೆ ಜಿಂಕೆ, ಮೊಲ ಇನ್ನೊಂದು ಕಡೆ ಹುಲಿ ಮತ್ತು ಹಾವು ಎಲ್ಲ ಪ್ರಾಣಿಗಳಿವೆಯಲ್ಲ; ಇದು ಯಾವುದರ ಸಂಕೇತ?

ಅಧ್ಯಾತ್ಮಿಕವಾಗಿ ವಿವೇಚನೆ ಮಾಡುವುದಾದರೆ, ಮನುಷ್ಯನಲ್ಲಿರುವ ಸಾತ್ವಿಕ, ರಜೋ ಮತ್ತು ತಮೋಗುಣದ ಸಂಕೇತವೆಂದು ಹೇಳಬಹುದು. ಇನ್ನೊಂದು ರೀತಿಯಿಂದ ನೋಡಿದರೆ, ಸಮಾಜ ಸುಧಾರಕರು ಸಮಾಜವನ್ನು ತಿದ್ದುವಾಗ ಎಲ್ಲ ರೀತಿಯ ಸ್ವಭಾವದ ಜನಗಳು ಗಂಟು ಬೀಳುತ್ತಾರೆ. ಅವರೆಲ್ಲರನ್ನೂ ತನ್ನೊಂದಿಗೆ ಇರಿಸಿಕೊಂಡು ಎಲ್ಲರನ್ನೂ ಸಮಾನವಾಗಿ ಕಾಣುತ್ತ ಸೇವೆ ಮಾಡಿಸಿಕೊಳ್ಳುವರು ಎಂಬುದನ್ನು ಸೂಚಿಸುತ್ತದೆ. ಕ್ರೂರ ಪ್ರಾಣಿಯಾದ ಹುಲಿಯಂತಹ ಸ್ವಭಾವದ ವ್ಯಕ್ತಿಗಳನ್ನು ಸಹ ಮಹಾತ್ಮರು ತಮ್ಮ ದೈವೀ ಶಕ್ತಿಯಿಂದ ಸಾಧುಗೊಳಿಸಿ, ವಿಷಪೂರಿತ ಹಾವಿನಂಥವರನ್ನು ಸಹ ತಮ್ಮ ದಿವ್ಯಾನುಗ್ರಹದ ಗಾರುಡಿ ವಿದ್ಯೆಯಿಂದ ನಿಯಂತ್ರಿಸಿ ಅವರಿಂದಲೂ ಸಮಾಜಸೇವೆ ಮಾಡಿಸುವರು. ಮೃದು ಸ್ವಭಾವದ ಸಾಧಕರೆಂದರೆ ಮೊಲ ಮತ್ತು ಜಿಂಕೆಗಳಿದ್ದಂತೆ. ಕ್ರೂರ ಪ್ರಾಣಿಗಳಾದ ಹುಲಿ, ಸಿಂಹ ಮತ್ತು ಸಾತ್ವಿಕ ಪ್ರಾಣಿಗಳಾದ ಮೊಲ ಹಾಗೂ ಜಿಂಕೆಗಳನ್ನು ಒಂದೇ ಕಡೆ ಹಿಡಿದಿಡುವ ಮತ್ತು ನಿಯಂತ್ರಣದಲ್ಲಿಡುವ ಶಕ್ತಿಯು ಸಮರ್ಥ ಗುರುಗಳಲ್ಲಿರುತ್ತದೆ. ಅದು ಪರಮ ಪೂಜ್ಯ ಮಾತಾಜಿಯವರಲ್ಲಿದೆ.

ಉಣ್ಣೆ ಕೆಚ್ಚಲೊಳಿದ್ದೂ ಹಾಲಿನ ಸವಿ ಅರಿಯದು. ಅದು ಕೇವಲ ಆಕಳ ರಕ್ತವನ್ನು ಮಾತ್ರ ಕುಡಿಯುತ್ತದೆ. ಹಾಗೆ ನಾವು ಮಾಡದೆ ಮಹಾನ್ ಗುರುವಿನ ಸನ್ನಿಧಿಯಲ್ಲಿರುವ ಸಾಧಕರು ಗುರುವಿನ ಜ್ಞಾನದ ಹಾಲನ್ನು ಕುಡಿದು ದಿವ್ಯಾನುಗ್ರಹದ ಅಮೃತವನ್ನೀಂಟಬೇಕು. ಬಸವಾತ್ಮಜೆ ಮಾತೆಯ ಸನ್ನಿಧಿಯಲ್ಲಿರುವ ನಾವೇ ಧನ್ಯರು. ಬಸವ ಮತ್ತು ಮಾತಾಜಿ ಎಂಬ ಆರಕ್ಷರದ ಹಡಗನ್ನೇರಿ ಭವ ಸಾಗರವ ದಾಂಟೋಣ ಬನ್ನಿ, ಗಣ ಪದವಿಯನ್ನು ಪಡೆಯೋಣ ಬನ್ನಿ. ★

ಲಿಂಗಾಯತಕ್ಕೆ ಹಾನಿಕಾರಕ ತಿರುವು ನೀಡಿದ ಸಂಗತಿಗಳು

(ಪುಟ 32ರಿಂದ ಮುಂದುವರಿದ ಭಾಗ)

ಆದುದರಿಂದ ಈ ಕಾರ್ಯದಲ್ಲಿ ಮುಂದಾಳತ್ವ ವಹಿಸಬೇಕೆನ್ನುವವರು, ಭಾಗಿಗಳಾಗ ಬೇಕೆನ್ನುವವರು ಮತ್ತು ಇದರ ಬಗ್ಗೆ ಗಮನ ಹರಿಸಿ ಮಾರ್ಗದರ್ಶನ ಮಾಡುತ್ತೇವೆ ಎನ್ನುವವರು ನನ್ನ ಇ-ಮೇಲ್ chandrasekhar37.m.s.@gmail.com ವಿಳಾಸಕ್ಕೆ ತಿಳಿಸಬೇಕಾಗಿ ಕೋರುತ್ತೇನೆ.

ಈ ಲೇಖನಕ್ಕೆ ನಾನು ಬಳಸಿಕೊಂಡ ಆಧಾರಗಳು :-

1) ಶರಣ ಚರಿತಾಮೃತ - ಸಿದ್ದಯ್ಯ ಪುರಾಣಿಕ. 2) ಬಸವಣ್ಣನವರು ಲಿಂಗಾಯತ ಧರ್ಮ ಸಂಸ್ಥಾಪಕರು - ಗುರು ಲಿಂಗಪ್ಪ ಮಲ್ಲಪ್ಪ ಪಾಟೀಲ. 3) ವೀರಶೈವ (ಲಿಂಗಾಯತ) ಮಠ/ಪೀಠಗಳ ಮೂಲಾಧಾರ - ಸಿದ್ದರಾಮ ಸೋ. ಪೂಜಾರಿ (ಗುಡ್ಡಾಪುರ). 4) ಬಸವ - ಬೆಳಗು ತ್ರೈಮಾಸಿಕ, July - Sept. 1998 - ನೀಲಗಂಗಯ್ಯಾ ಪೂಜಾರ ಅವರ ಲೇಖನ: ಹನ್ನೆರಡನೇ ಶತಮಾನದಲ್ಲಿ ಉದಿಸಿ ಬಂದ ಲಿಂಗಾಯತ ಧರ್ಮ. 5) Mysore Gazetteer - compiled for Govt. of Mysore by B. Lewis Rice, Volume - 1, Mysore in General, Year 1876, pages 476 - 477.

ಲಿಂಗಾಯತಕ್ಕೆ ಹಾನಿಕಾರಕ ತಿರುವು ನೀಡಿದ ಸಂಗತಿಗಳು

- ಎಂ. ಎಸ್. ಚಂದ್ರಶೇಖರಯ್ಯ

ಸುಮಾರು ಇಪತ್ತು ವರ್ಷಗಳಿಂದ ವೀರಶೈವ / ಲಿಂಗಾಯತ ಧರ್ಮದ ನನ್ನ ಅಧ್ಯಯನ ಮತ್ತು ವಿಶ್ಲೇಷಣೆಗಳಿಂದ ಬಸವ ಧರ್ಮಕ್ಕೆ ಹಾನಿಕಾರಕ ತಿರುವು ನೀಡಿದ ಸಂಗತಿಗಳ ಬಗ್ಗೆ ಹೇಳುವುದಾದರೆ - ಇದುವರೆಗೂ ಯಾರೂ ಈ ಹಾನಿಕಾರಕ ಸಂಗತಿಗಳನ್ನು ಸಮಗ್ರವಾಗಿ ಗುರುತಿಸದೇ ಇದ್ದದ್ದು ಮತ್ತು ಅವುಗಳನ್ನು ಕಿತ್ತೆಸೆಯುವ ಕಾರ್ಯವನ್ನು ಮಾಡದೇ ಇದ್ದದ್ದು ಒಂದು ದೊಡ್ಡ ದುರಂತವಾಯಿತು. ಈ ಹಾನಿಕಾರಕ ಸಂಗತಿಗಳು ಸಾಮಾನ್ಯವಾಗಿ ಯಾರ ಗಮನಕ್ಕೂ ಬಾರದೇ ಇರುವಂತಹವುಗಳು. ಗಮನಕ್ಕೆ ಬಂದರೂ ಸರಿಯಾದ ಪರಿಹಾರವನ್ನು ಕಂಡುಹಿಡಿಯುವುದು ಅಸಾಧ್ಯವೇ ಸರಿ. ಇದುವರೆವಿಗೂ ಪರಿಹಾರದತ್ತ ಆದ ಪ್ರಯತ್ನಗಳು ವಿರುದ್ಧ ಫಲವನ್ನೇ - ಹಾನಿಕಾರಕವಾದ ಪರಿಣಾಮವನ್ನೇ - ನೀಡಿವೆ.

ಹಾನಿಕಾರಕ ತಿರುವು ನೀಡಿದ ಸಂಗತಿಗಳು

1) ಧರ್ಮಗುರು ಬಸವಣ್ಣನವರ ಕಾಲದಿಂದ ಅವರು ರೂಪಿಸಿದ ಹೊಸ ಸಮಾಜದಲ್ಲಿ ಪೂರ್ವಾಚರಣೆಗಳನ್ನೊಳಗೊಂಡಂತೆ ಹಿಂಬಾಗಿಲಿನಿಂದ ಸೇರಿಕೊಂಡ ಜಾತಿ, ವರ್ಗ, ವರ್ಣ ಅಂತಸ್ತುಗಳ ಭೇದವನ್ನು ಅಳಿಸಿ ಹಾಕುವ ಒಂದು ಕೇಂದ್ರೀಯ ನಿಯಂತ್ರಣ ವ್ಯವಸ್ಥೆಯು ಇಂದಿನವರೆವಿಗೂ ಆಗದೇ ಹೋದದ್ದು ಮತ್ತು ಇಂದಿನವರೆವಿಗೂ ಅನುಷ್ಠಾನ ಯೋಗ್ಯವಾದ ಒಂದು ಯೋಜನೆಯನ್ನು ರೂಪಿಸದೇ ಹೋದದ್ದು. 2) ಬಸವಣ್ಣನವರ ಶುದ್ಧ ತತ್ವಗಳನ್ನು ಅರಿತು, ಅವುಗಳ ಶುದ್ಧತೆಯನ್ನು ಕಾಪಾಡಿಕೊಂಡು ಅನುಷ್ಠಾನಕ್ಕೆ ತರಲಾಗದೇ ಹೋದದ್ದು. 3) ಬಸವಣ್ಣನವರ ತದನಂತರದಿಂದ ಇಂದಿನವರೆವಿಗೂ ವಚನ ವಾಙ್ಮಯವನ್ನೇ ಮೂಲೆಗುಂಪಾಗಿ ಮಾಡಿದ ಮತ್ತು ಅಂತಿಮವಾಗಿ ವೀರಶೈವದಲ್ಲಿ ಪರ್ಯಾವಸಾನಗೊಳಿಸಿದ ಬಹುತೇಕ ಎಲ್ಲಾ ಗ್ರಂಥ ರಚನೆಗಳು ಭಾಷ್ಯಗಳು, ಟೀಕೆ - ಟಿಪ್ಪಣಿಗಳು. 4) ವಚನ ವಾಙ್ಮಯವನ್ನು ಆಧಾರವಾಗಿ ಇಟ್ಟುಕೊಳ್ಳದೆ ತದನಂತರದ ರಚನೆಗಳಾದ ಗ್ರಂಥಗಳನ್ನ, ಭಾಷ್ಯಗಳನ್ನ, ಟೀಕೆ - ಟಿಪ್ಪಣಿಗಳನ್ನ ಆಧಾರವಾಗಿ ಇಟ್ಟುಕೊಂಡು ಸಮಾಜದಲ್ಲಿ ಗೊಂದಲವೆಬ್ಬಿಸುತ್ತಿರುವ ಬುದ್ಧಿಜೀವಿಗಳು, ವಿದ್ವಾಂಸರುಗಳು, ಹಲವು ಸಮಾಜ ಮುಖಂಡರುಗಳು. ನಮ್ಮ ಸಮಾಜದಲ್ಲಿ ಪ್ರಸ್ತುತ ಇರುವ ಸಂಘರ್ಷವು ಇದೇ ಮೂಲದ್ದು. 5) ಬಸವ ಧರ್ಮಕ್ಕೆ ಅನೇಕ ಬಾರಿ ಸಂಭವಿಸಿದ ಸಂದಿಗ್ಧತೆಯ ಕಾಲಗಳಲ್ಲಿ ಆದ ಆಂದೋಳನಗಳು ಬಸವ ಧರ್ಮದ ದಿಕ್ಕನ್ನೇ ಬದಲಿಸಿ ವೀರಶೈವದಲ್ಲಿ ಪರ್ಯಾವಸಾನವಾದದ್ದು. ತದನಂತರದ ಕಾಲದಲ್ಲಿ ಈ ವೀರಶೈವವನ್ನೇ ವಾಹಕವನ್ನಾಗಿ ಮಾಡಿಕೊಂಡು ಪಂಚಾಚಾರ್ಯರು ಮತ್ತು ಸಿದ್ಧಾಂತ ಶಿಖಾಮಣಿಗಳು ಲಿಂಗಾಯತ ವಾಹಿನಿಗೆ ಬಂದು ಸೇರಿಕೊಂಡು ಗೊಂದಲ ಸೃಷ್ಟಿಯಾದದ್ದು. 6) ಅಂದು ಕಲ್ಯಾಣದಲ್ಲಿ ಅಹಿತಕರ ಘಟನೆಗಳಿಗೆ ಕಾರಣವಾದ ಶಕ್ತಿಗಳ ಕೈವಾಡ ಇಂದಿಗೂ ಜೀವಂತವಾಗಿರುವುದು. 7) ಬಸವಣ್ಣನವರ ಸಾಮಾಜಿಕ ಸಮಾನತೆಯ, ಕಾಯಕ - ದಾಸೋಹಗಳ ಧ್ಯೇಯಗಳನ್ನು ಗೌಣ ಮಾಡಿ ಅಧ್ಯಾತ್ಮಿಕತೆಯನ್ನೇ ಪ್ರಧಾನಮಾಡಿಕೊಂಡಿರುವುದು. ವಿದ್ಯಾದಾನ, ದಾಸೋಹ ಅಥವಾ ಬಸವ ಧರ್ಮದ ಒಂದೆರಡು ಅಂಶಗಳಲ್ಲಿ ತೊಡಗಿಸಿಕೊಂಡು ತಮ್ಮ ಪೂರ್ಣಧಾರ್ಮಿಕ ಕರ್ತವ್ಯವನ್ನು ಮಾಡುತ್ತಿದ್ದೇವೆ ಎಂದುಕೊಳ್ಳುವುದು. 8) ಸಮಗ್ರವಾಗಿ ಬಸವ ತತ್ವಗಳನ್ನು ಅರಿತು, ಸಮಗ್ರವಾಗಿ ಅನುಷ್ಠಾನಗೊಳಿಸಬೇಕು ಎಂಬ ಬಹಳಷ್ಟು ಜನರಲ್ಲಿ ಇರುವ ಅರಿವಿನ ಮತ್ತು ಉತ್ಸುಕತೆಯ ಕೊರತೆ. ಹಲವು ಮಠಾಧೀಶರು ಮತ್ತು ಸಮಾಜ ಚಿಂತಕರುಗಳಲ್ಲಿ ಈ ಅರಿವು ಮತ್ತು ಉತ್ಸುಕತೆ ಇದ್ದರೂ ಅನುಷ್ಠಾನಗೊಳಿಸುವ ಮಾರ್ಗ ತಿಳಿಯದೆ ಕಂಗಾಲು ಪರಿಸ್ಥಿತಿಯಲ್ಲಿರುವುದು.

ಕೆಲವು ವಿವರಣೆಗಳು

ಬಸವಣ್ಣನವರ ಕಾಲದಲ್ಲಿ ಅವರ ಹೊಸ ಸಮಾಜಕ್ಕೆ ಸೇರಿಕೊಂಡವರಲ್ಲಿ ಒಂದು ಕಡೆ ಅನುಭವ ಮಂಟಪದ ಶರಣ - ಶರಣೆಯರು ಮತ್ತು ದೀನದಲಿತರು ಸೇರಿದಂತೆ ಅದುವರೆವಿಗೂ ಧರ್ಮ ದೀಕ್ಷೆಯಿಂದ ವಂಚಿತರಾದವರು. ಇವರುಗಳು ಬಸವಣ್ಣನವರ ತತ್ವಗಳನ್ನು ಪೂರ್ಣವಾಗಿ

ಅಳವಡಿಸಿಕೊಂಡು, ಅವುಗಳಿಗೆ ನಿಷ್ಠೆಯನ್ನು ತೋರಿಸುತ್ತಾ, ಕಾಯಕ ದಾಸೋಹ ನಿರತರಾಗಿ - 'ಕೃತಾರ್ಥರಾದೆವು' - ಎಂದು ಕೊಂಡವರು.

ಆದರೆ ಹೊಸ ಸಮಾಜಕ್ಕೆ ಸೇರಿಕೊಂಡವರಲ್ಲಿ ಶೈವ ಬ್ರಾಹ್ಮಣರಾದಿಯಾಗಿ ಇನ್ನಿತರೇ ಮೇಲ್ವರ್ಗದ ಜನರೂ ಇದ್ದರು. ಇವರಲ್ಲಿ ಬಹಳಷ್ಟು ಜನರು ನಿಷ್ಠೆಯಿಂದ ಹೊಸ ಧರ್ಮವನ್ನು ಪೂರ್ಣವಾಗಿ ಅಳವಡಿಸಿಕೊಳ್ಳದೆ ಕೇವಲ ಜನಿವಾರದ ಬದಲು ಶಿವದಾರವನ್ನು ಹಾಕಿಕೊಂಡು ಮಿಕ್ಕನಾದಂತೆ ತಮ್ಮ ಪೂರ್ವಾಶ್ರಯದ ಆಚರಣೆಗಳು, ವಿಚಾರಗಳನ್ನೇ ಮುಂದುವರಿಸಿದರು. ಇಂತಹ ಜನರಿಂದಾಗಿಯೇ ಬಸವಣ್ಣನವರು - 'ಬಡ ಹಾರುವನೇಸು ಭಕ್ತನಾದಡೆಯೂ ನೇಣಿನ ಹಂಗ ಬಿಡ, ಮಾಲೆಗಾರನೇಸು ಭಕ್ತನಾದಡೆಯೂ ಭಾವಿಯ ಬೊಮ್ಮನ ಹಂಗ ಬಿಡ.....' ಎಂದಿರುವುದು.

ಕಲ್ಯಾಣದಲ್ಲಿ ಆದ ತ್ವರಿತ ಘಟನಾವಳಿಗಳಿಂದ ಸಮಯದ ಅಭಾವದಿಂದಾಗಿ ಹೊಸ ಸಮಾಜಕ್ಕೆ ಸೇರ್ಪಡೆಯಾದವರು, ನಿಷ್ಠೆಯಿಂದ ಸಮಗ್ರವಾಗಿ ಬಸವತತ್ವಗಳನ್ನು ಅಳವಡಿಸಿಕೊಳ್ಳಲು ಅನುವು ಮಾಡಿಕೊಡುವ ವ್ಯವಸ್ಥೆಯೊಂದು ಆಗದೇ ಹೋಯಿತು.

ಬಸವಣ್ಣನವರ ಕಾಲದಲ್ಲಿ ಮತ್ತು ತದನಂತರ, ಬಸವತತ್ವಗಳನ್ನು ಮತ್ತು ಬಸವಣ್ಣನವರ ವ್ಯಕ್ತಿತ್ವವನ್ನು ಎತ್ತಿ ಹಿಡಿದು, ತಾವೇ ಸ್ವತಃ ಮಾದರಿಯಾಗಿ ಧರ್ಮ ಪ್ರಚಾರ ಮಾಡಿದವರು - ಅಕ್ಕ ನಾಗಲಾಂಬಿಕೆ, ಸಿದ್ಧರಾಮೇಶ್ವರರು, ಅಲ್ಲಮ ಪ್ರಭುಗಳು ಮತ್ತು ಆಗ ಚದುರಿಹೋದ ಅನುಭವ ಮಂಟಪದ ಶರಣ - ಶರಣೆಯರು. ಇವರಿಂದಾಗಿಯೇ ಬಸವಣ್ಣನವರ ನಂತರ ಸುಮಾರು ಅರವತ್ತು ವರ್ಷಗಳಲ್ಲಿಯೇ ಬಸವ ಧರ್ಮವು ಉಳಿವಿಯಿಂದ ಸೊಲ್ಲಾಪುರದವರೆಗೆ ಮತ್ತು ಬಾಳೇ ಹೊನ್ನೂರಿನಿಂದ ಶಿವಗಂಗೆಯವರೆಗೆ ವ್ಯಾಪಕವಾಗಿ ಹಬ್ಬಿಬಿಟ್ಟಿತು.

ತದನಂತರವೂ ಬಸವಣ್ಣನ ಕಾಯಕದಯ್ಯಗಳು ಕಾವೀಧಾರಿಗಳಾಗಿ ಪಶ್ಚಿಮದ ಉಳಿವಿಯಿಂದ ಪೂರ್ವದ ಶ್ರೀ ಶೈಲದವರೆವಿಗೂ 'ಪಾಹಿಮಾಂ ಶರಣ ಬಸವ, ಪಾಹಿಮಾಂ ಶರಣ ಬಸವ, ಬಸವಾ ಪಾಹಿಮಾಂ' ಎಂದೋ 'ಬಸವಾ ಬಸವಾ ಬಸವಪ್ಪ ಶರಣು, ಬಸವನೆಂಬ ನಾಮವ ನೆನೆದು, ಬಸವಾ ಪಾಹಿಮಾಂ' ಎಂದೋ ಉಗ್ಘಡಿಸುತ್ತಾ, ಭಿಕ್ಷಾಟನೆಗೈಯುತ್ತಾ ಬಸವ ಧರ್ಮವನ್ನು ಕೆಳಮಟ್ಟದಲ್ಲಿ ರಕ್ಷಣೆ ಮಾಡಿಕೊಂಡು ಬಂದರು. ಆದರೆ ಕಾಲಕ್ರಮೇಣ ಇದರ ಪ್ರಭಾವವು ಕ್ಷೀಣಿಸಿತು.

ತಳಮಟ್ಟದಲ್ಲಿ (Ground Level) ಈ ರೀತಿಯಾದರೆ ಮೇಲ್ಮಟ್ಟದಲ್ಲಿ ಲಿಂಗಾಯತವನ್ನು ಅಪ್ಪಿಕೊಂಡರೂ ಬಸವ ಧರ್ಮವನ್ನು ಪಾಲಿಸದೆ ತಮ್ಮ ಹಿಂದಿನ ಆಚಾರ - ವಿಚಾರಗಳನ್ನೇ, ಸಂಪ್ರದಾಯಗಳನ್ನೇ ಮುಂದುವರಿಸುತ್ತಾ, ಅವುಗಳೇ ನಿತ್ಯ - ಸತ್ಯವೆಂದು ಬಿಂಬಿಸಲಾರಂಭಿಸಿದ ಶೈವ ಬ್ರಾಹ್ಮಣ ವರ್ಗದವರು. ಇವರುಗಳ ಧಾರ್ಮಿಕ ಮನೋಧರ್ಮವೇ ಬದಲಾಗಲಿಲ್ಲ. ಇದೇ ಮುಂದೆ ಹೆಮ್ಮರವಾಗಿ ಬೆಳೆದು ಬಸವಧರ್ಮವನ್ನು ಮರೆಮಾಚಿತು.

ಇನ್ನೊಂದು ಕಡೆ ಬಸವಣ್ಣನವರ ನಂತರ ಅನತಿಕಾಲದಲ್ಲಿಯೇ ಆಂಧ್ರಮೂಲದ ಪಾಲ್ಕುರಿಕೆ ಸೋಮನಾಥನಿಂದ ತೆಲುಗಿನಲ್ಲಿ ರಚಿತವಾದ ಪ್ರಪ್ರಥಮ 'ಬಸವ ಪುರಾಣ' ದಿಂದ ಪ್ರಾರಂಭವಾಗಿ ಬಸವ ಧರ್ಮವು ಹಾನಿಕಾರಕ ತಿರುವು ಪಡೆಯಲಾರಂಭಿಸಿತು. ತದನಂತರ ಬಂದ ಹರಿಹರ ಕವಿ, ರಾಘವಾಂಕ, ಭೀಮಕವಿ, ಚಾಮರಸ ಮುಂತಾದವರಿಂದ ಕೇವಲ ಬಸವಣ್ಣನವರನ್ನು ಎತ್ತಿ ಹಿಡಿಯುವ ಅವರ ಭಕ್ತಿ ನಿಷ್ಠೆಗಳು, ಧರ್ಮವನ್ನು, ಪೌರಾಣಿಕತೆ, ವಿಡಂಬನೆ, ವೈಭವೀಕರಣ, ಶೃಂಗಾರ, ಕೇವಲ ಅಧ್ಯಾತ್ಮಿಕತೆಯಿಂದ ತುಂಬಿಸಿ ಮತ್ತೆ ಧರ್ಮವನ್ನು ಪಾಷಂಡಿ ಭೂಮಿಯನ್ನಾಗಿಯೇ - ಇಂದು ನಾವು ನೋಡುತ್ತಿರುವಂತೆ - ಮಾಡಿದುವು. ಈ ವಿದ್ವಾಂಸರುಗಳಿಗೆ ಬಸವತತ್ವಗಳನ್ನು ನಿಜಸ್ವರೂಪದಲ್ಲಿ ಎತ್ತಿ ಹಿಡಿಯಬೇಕೆಂಬ ಭಾವನೆಯೇ ಇರಲಿಲ್ಲ. ಇವರಿಗೆ ಕೇವಲ ಬಸವ ಭಕ್ತಿಯುಳ್ಳ, ತಮ್ಮ ವಿದ್ವತ್ತಿನ, ಗ್ರಂಥರಚನಾ ಸಾಮರ್ಥ್ಯದ ವಿವಿಧ ಮುಖಗಳನ್ನು ಪ್ರಸುತ್ತ ಪಡಿಸುವುದೇ ಮುಖ್ಯವಾಯಿತು.

ಪ್ರೌಢದೇವರಾಯನ ಕಾಲದ ಮಗ್ಗೆಯ ಮಾಯಿದೇವ, ಲಕ್ಕಣ್ಣ ದಂಡೇಶ ಮುಂತಾದವರಿಂದ ಮತ್ತೊಂದು ಹಾನಿಕಾರಕ - 'ವೀರಶೈವ' - ವೆಂಬ ಲಹರಿ ಪ್ರಾರಂಭವಾಗಿ

ಆಗಮಗಳಿಂದ ಬಸವ ಪೂರ್ವಾಚರಣೆಗಳನ್ನು ಮತ್ತೆ ತಂದು ತುಂಬಿತು. ಇಂತಹವುಗಳಿಂದಾಗಿಯೇ ಸಿದ್ಧರಾಮೇಶ್ವರರ ಸೊಲ್ಲಾಪುರ, ಸಿದ್ಧಲಿಂಗೇಶ್ವರರ ಯಡೆಯೂರು ಮುಂತಾದೆಡೆಗಳಲ್ಲಿ ಇಂದಿಗೂ ಬಸವ ಪೂರ್ವದ ಸಂಪ್ರದಾಯಗಳೇ ನಡೆದುಕೊಂಡು ಬಂದುವು.

ಕಾಲಘಟ್ಟದಲ್ಲಿ ವಿಜಯನಗರದ ಪ್ರೌಢದೇವರಾಯನ ಕಾಲಕ್ಕೆ - 15ನೇ ಶತಮಾನಕ್ಕೆ - ಬರುವಷ್ಟರಲ್ಲಿ - 'ನಮ್ಮ ಮಠಗಳು ಬಸವಣ್ಣನ ಕಾಲಕ್ಕೂ ಮುಂಚಿನಿಂದ ಇದ್ದವುಗಳು, ನಮ್ಮ ಪರಂಪರೆ ಬಸವಣ್ಣನ ಕಾಲಕ್ಕೂ ಹಿಂದಿನದು' - ಎಂದು ಇಂದು 'ವೀರಶೈವರು' - ಎಂದು ಹೇಳಿಕೊಳ್ಳುತ್ತಿರುವ ಕಾಳಾಮುಖ, ಲಾಕುಳೀಶ, ಪಾಶುಪತ ಮುಂತಾದ ಶೈವ ಸಂಪ್ರದಾಯದ ಮಠಗಳು, ಗುರುಗಳು, ಶಿವಯೋಗಿ ಶಿವಾಚಾರ್ಯರುಗಳು, ಮಹಾಂತರು, ಹಿರೇಮಠರು, ಆರಾಧ್ಯರುಗಳು (ಆಂಧ್ರದಲ್ಲಿ ಇಂದಿಗೂ ಶೈವ ಸಂಪ್ರದಾಯದ ಪೆದ್ದ ಮಠಂವಾರು, ಆರಾಧ್ಯುಲುವಾರು, ಉದಾಹರಣೆಗೆ ಪ್ರಸಿದ್ಧ ಹಿನ್ನೆಲೆ ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಪೂರ್ಣಹೆಸರು ಶ್ರೀಪತಿ ಪಂಡಿತಾರಾಧ್ಯುಲ ಬಾಲಸುಬ್ರಹ್ಮಣ್ಯಂ) ಮುಂತಾದವರು, ಆ ಕಾಲದ ಅನೇಕ ವಿಧದ ಒತ್ತಡಗಳಿಗೆ - ಮುಖ್ಯವಾಗಿ ಜೈನ, ಬೌದ್ಧ, ವೀರವೈಷ್ಣವಗಳ ಮತ್ತು ಹಬ್ಬಿದ ರಾಜಾಶ್ರಯಗಳು, ಮಾನ್ಯತೆಗಳು - ಒಳಗಾಗಿ ಬೇರೆ ದಾರಿಯಿಲ್ಲದೆ ಬಸವ ಧರ್ಮದಲ್ಲಿ ವಿಲೀನಗೊಂಡವರೇ. ಇದರ ಜೊತೆಗೆ ಸಮಾಜದ ಇನ್ನೂ ಅನೇಕ ಮೇಲ್ವರ್ಗದ ಜನರೂ ಹೊಸ ಸಮಾಜಕ್ಕೆ ಸೇರಿದರು. ದುರಂತವೆಂದರೆ ಸಾಮಾನ್ಯವಾಗಿ ಇವರುಗಳೆಲ್ಲರೂ ನಿಷ್ಠೆಯಿಂದ ಬಸವಧರ್ಮವನ್ನು ಅಳವಡಿಸಿಕೊಳ್ಳಲೇ ಇಲ್ಲ. ಇವರು ತಮ್ಮ ಪೂರ್ವಾಚರಣೆಗಳನ್ನು, ಸಂಪ್ರದಾಯಗಳನ್ನು, ನಡೆ - ನುಡಿಗಳನ್ನು ಬಿಡದೇ ಅವುಗಳನ್ನೇ ಮುಂದುವರಿಸಿದರು. ಈ ರೀತಿ ಮುಂದುವರಿಸಿಕೊಂಡು ಬಂದದ್ದೇ ಮುಂದೆ ಬಸವ ಧರ್ಮದಲ್ಲಿ ಆದ ದುರಂತಗಳಿಗೆ ಕಾರಣವಾಯಿತು.

ಒಂದು ಸಮಾಧಾನಕರವಾದ ಸಂಗತಿಯೆಂದರೆ - ಇವರುಗಳು ಜನಿವಾರ ತ್ಯಜಿಸಿ ಇಷ್ಟಲಿಂಗಧಾರಿಗಳಾಗಿ ; ಶಿವ ಲಿಂಗಪೂಜೆ ಎಂದು ಹೇಳುತ್ತಾ ಎಲ್ಲರೂ - ವೀರಶೈವರು ಎಂದು ಹೇಳಿಕೊಳ್ಳುತ್ತಿದ್ದವರನ್ನು ಒಳಗೊಂಡು - ಬಸವಣ್ಣನವರನ್ನೇ ಲಿಂಗಾಯತದ ಸ್ಥಾಪಕರು ಎಂದು ಗುರುತಿಸಿಕೊಂಡಿದ್ದರು. ಆದರೆ ಇವರು ತಮ್ಮ ಪೂರ್ವಾಚರಣೆಗಳನ್ನು ಸುತರಾಂ ಬದಲಾಯಿಸಿಕೊಂಡಿರಲಿಲ್ಲ. ಇದು 19ನೇ ಶತಮಾನದ ಕೊನೆಯವರೆವಿಗೂ ಪ್ರಚಲಿತವಿದ್ದಿತು. ಇಂದಿಗೆ ಅವರಲ್ಲಿ ಕೆಲವರು ಬಸವಧರ್ಮದೊಡನೆ ಗುರುತಿಸಿಕೊಂಡಿದ್ದಾರೆ. ಮಿಕ್ಕವರು 1876ರ ಕಾಲ ಘಟ್ಟದ ನಂತರ ಗುರುವರ್ಗದವರೆಂದು ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. 1876ರ ಕಾಲಘಟ್ಟದವರೆಗೆ ಬಾಳೇ ಹೊನ್ನೂರು ಮಠವು (ಚಿತ್ರದುರ್ಗದ ಮುರುಘಾ ಮಠವೂ ಸೇರಿದಂತೆ) ಬಸವ ಪರಂಪರೆಯ ಲಿಂಗಾಯತ ಮಠವೆಂದೇ ಗುರುತಿಸಲ್ಪಟ್ಟಿತ್ತು.

1876ರ ಕಾಲಘಟ್ಟದಲ್ಲಿ 'ವೀರಶೈವರು' ಎಂದರೆ ಲಿಂಗಾಯತದಲ್ಲಿಯೇ ಇದ್ದು ಲಿಂಗಾಯತದ ತೀವ್ರವಾದೀ ಧೋರಣೆಗಳನ್ನು ಹೊಂದಿದ ವೀರಶೈವ - ತೀವ್ರಗಾಮಿ ಅಥವಾ ಶೈವ ಪಂಥದ ವೀರ ಅನುಯಾಯಿಗಳು ತಾವು ಎಂದು ಹೇಳಿಕೊಳ್ಳುತ್ತಿದ್ದವರು. ಅಂದು ಅವರಿಗೆ ಆ ವೀರಶೈವ ನಾಮಧೇಯವು ಅವರ ತೀವ್ರಗಾಮಿತನ, ದ್ವಂದ್ವಗಳನ್ನು, ವಿವಾದಗಳನ್ನು ಸೃಷ್ಟಿಸಿ ಹೋರಾಟ ನಡೆಸುವುದರಲ್ಲಿ ಅವರಿಗೆ ಇದ್ದ ಆಸಕ್ತಿಯದ್ಯೋತಕವಾಗಿದ್ದಿತು. ತದನಂತರದ ಕಾಲದಲ್ಲಿ ಅಂದರೆ ಸುಮಾರು 1920ರ ನಂತರ ವೀರಶೈವದ ಪರಂಪರೆಯು ಬದಲಾವಣೆ ಹೊಂದಿ ಪಂಚಾಚಾರ್ಯ ಪರಂಪರೆಯದಾಯಿತು.

1876ರ ಗೆಝೆಟೀಯರ್ ಬಗ್ಗೆ ಕೆಲವು ಅಂಶಗಳನ್ನು ಉಲ್ಲೇಖಿಸುವುದಾದರೆ, ಗೆಝೆಟೀಯರ್‌ನ ಮುನ್ನುಡಿಯಲ್ಲಿಯೇ ಹೇಳಿರುವಂತೆ ಗೆಝೆಟೀಯರನ್ನು ಅಂದಿನ ಮೈಸೂರು ಸರ್ಕಾರವು ತನ್ನ ಆಡಳಿತಕ್ಕೆ ನೆರವಾಗಲು, ಸಂಸ್ಥಾನದ ಅಂದಿನ ನೈಜ ಪರಿಸ್ಥಿತಿಯನ್ನು ಸಂಗ್ರಹಿಸಿ ವಿಶ್ವಾಸಾರ್ಹ ಮಾಹಿತಿಯನ್ನಾಗಿ ಉಪಯೋಗಿಸಿಕೊಳ್ಳಲು ರೂಪಿಸಿಕೊಂಡಿತ್ತು. ಇದರಲ್ಲಿನ ಮಾಹಿತಿಗಳು ನ್ಯಾಯಾಲಯಗಳಲ್ಲೂ ಆದ್ಯತೆಯಲ್ಲಿ ಮಾನ್ಯತೆ ಹೊಂದುವ ಅಧಿಕೃತ ದಾಖಲೆಯಾಗಿರುತ್ತವೆ. ಇದು ಯಾವುದೇ ಶಿಲಾಶಾಸನ, ತಾಮ್ರ ಶಾಸನಗಳಿಗೂ ಮೀರಿದ

ದಾಖಲೆಯಾಗಿರುತ್ತದೆ. 1) ಅಂದಿಗೆ ಲಿಂಗಾಯತರಲ್ಲಿ ಆ ಧರ್ಮವನ್ನು ಅರಿತ ಯಾರು ಬೇಕಾದರೂ, ಸ್ತ್ರೀ - ಪುರುಷ ಭೇದವಿಲ್ಲದೆ ಗುರುಗಳಾಗ ಬಹುದಿತ್ತು. 2) ಬಸವಣ್ಣನವರ ಅನುಯಾಯಿಗಳು 'ಲಿಂಗವಂತರು' ಎಂಬ ಪ್ರತ್ಯೇಕ ಹೆಸರಿನಿಂದ ಕರೆಯಲ್ಪಡುತ್ತಿದ್ದರು. ತಮ್ಮ- ತಮ್ಮಲ್ಲಿ ಉಪಯೋಗಿಸದೇ ಇದ್ದರೂ 'ಲಿಂಗಾಯತರು' ಎಂಬ ಹೆಸರು ಪ್ರಖ್ಯಾತವಾಗಿತ್ತು. 'ಶಿವ - ಭಕ್ತರು' - 'ಶಿವಾಚಾರದವರು' - ಎಂದೂ ತಮ್ಮನ್ನು ಹೆಸರಿಸಿಕೊಳ್ಳುತ್ತಿದ್ದರು. (ಇವರು ಎಂದೂ ತಾವು 'ವೀರಶೈವರು' - ಎಂದು ಗುರುತಿಸಿ ಕೊಂಡಿಲ್ಲದಿರುವುದನ್ನು ಗಮನಿಸಬಹುದು.)

ಪ್ರೌಢದೇವರಾಯನ ಕಾಲದಲ್ಲಿ ಪ್ರಾರಂಭವಾದ 'ವೀರಶೈವ'- ಲಹರಿಯು ಕಾಲಾನಂತರದಲ್ಲಿ ಅನೇಕ ವಿಚ್ಛಿದ್ರಕಾರಕ ಪರಿಕಲ್ಪನೆಗಳನ್ನು ಮೈಗೂಡಿಸಿಕೊಂಡು ಪ್ರವಹಿಸಲಾರಂಭಿಸಿತು.

ಇನ್ನೊಂದು ಕಾಲಘಟ್ಟವೆಂದರೆ ಮೈಸೂರಿನಲ್ಲಿ ಯಜಮಾನ್ ವೀರಸಂಗಪ್ಪನವರ ನೇತೃತ್ವದಲ್ಲಿ ವೀರಶೈವವನ್ನು ಪುಷ್ಟೀಕರಿಸಿಕೊಂಡು ಅದರ ಪುರಾತನತೆಯನ್ನು ದೃಢೀಕರಿಸಲು ವ್ಯಾಕರಣದ ಮಲ್ಲಪ್ಪ, ಬಸಪ್ಪ ಶಾಸ್ತ್ರಿಗಳು, ಪಿ.ಆರ್. ಕರಿಬಸವ ಶಾಸ್ತ್ರಿಗಳು ಮುಂತಾದವರಿಂದ ಆದ ಗ್ರಂಥ ರಚನೆಗಳು. ಇದೇ ಸುಮಾರಿಗೆ ಸೊಲ್ಲಾಪುರದ ವಾರದ ಮಲ್ಲಪ್ಪನವರ ಮುಂದಾಳತ್ವದಲ್ಲಿ ಅನೇಕ ಪ್ರಕ್ಷಿಪ್ತ ಗಂಥಗಳು ರಚನೆಯಾದುವು.

ಹಾಗೆ ನೋಡಿದರೆ 'ವೀರಶೈವದ' ಪರಿಕಲ್ಪನೆಯನ್ನು ಬೆಂಬಲಿಸಿ ಆದ ಗ್ರಂಥ ರಚನೆಗಳೆಲ್ಲವೂ ಆಗಮಗಳಲ್ಲಿನ 'ಶೈವ' ಶಬ್ದಕ್ಕೆ 'ವೀರ' ಎಂಬುದನ್ನು ಸೇರಿಸಿಕೊಂಡು ಮಾಡಿಕೊಂಡ ಪ್ರಕ್ಷಿಪ್ತತೆಯ ಶಬ್ದ 'ವೀರಶೈವ'ವನ್ನೇ ಆಧಾರವಾಗಿ ಇಟ್ಟುಕೊಂಡುವು. ಈ ಪ್ರಕ್ರಿಯೆನ್ನು ಇಂದಿಗೂ ನಾವು ಗಮನಿಸಬಹುದು.

ಪಾಲ್ಕುರಿಕೆ ಸೋಮನಾಥನಿಂದ ಪ್ರಾರಂಭವಾಗಿ ಹರಿಹರಕವಿ, ರಾಘವಾಂಕ, ಭೀಮಕವಿ, ಚಾಮರಸ, ಮಗ್ಗೆಯ ಮಾಯಿದೇವ, ವಿರೂಪಾಕ್ಷ ಪಂಡಿತ ಮುಂತಾದವರಿಂದ ಆದ ಗ್ರಂಥ ರಚನೆಗಳು, ಟಿಪ್ಪಣಿಗಳು, ಭಾಷ್ಯಗಳು ಮತ್ತು ಬೇರೆ ಬೇರೆ ಕಾಲಗಳಲ್ಲಿ ರಚಿತವಾದ 'ಶೂನ್ಯ - ಸಂಪಾದನೆ' ಗ್ರಂಥಗಳು - ಎಲ್ಲವೂ ಸಂಘಟನೆಯ ದೃಷ್ಟಿಯಿಂದ ಹಾನಿಕಾರಕವೇ ಆದುವು. ಏಕೆಂದರೆ ಇವುಗಳು ಬಸವಣ್ಣನವರ ವಾಸ್ತವಿಕತೆಯ ಅಸಲು ವಚನ - ಸಾಹಿತ್ಯವನ್ನೇ ಮರೆಮಾಚಿ - ಕಲ್ಪನೆಗಳು, ಪೌರಾಣಿಕತೆ, ವೈಭವೀಕರಣ, ಶೃಂಗಾರ, ಕೇವಲ ಅಧ್ಯಾತ್ಮಿಕತೆಯನ್ನು ಎತ್ತಿ ಹಿಡಿಯುತ್ತವೆ. ಇಂತಹ ಸಾಹಿತ್ಯವನ್ನು ನೋಡಿಯೇ. ಬಿ.ಎಲ್. ರೈಸರವರು ಗೆಝೆಟೀಯರ್‌ನಲ್ಲಿ ಹೀಗೆ ಹೇಳಿದ್ದಾರೆ - The Sacred Books of the Sect are the Basavapurana and Channa basavapurana, written in Hale Kannada but not of the oldest form. They consist of tales and miraculous stories regarding their Gurus and saints and of this nature is all their literature, whose character is more popular than learned - (ತೀರ ಪುರಾತನವಲ್ಲದ ಹಳಗನ್ನಡದಲ್ಲಿ ಬರೆದಿರುವ ಬಸವಪುರಾಣ ಮತ್ತು ಚೆನ್ನಬಸವಪುರಾಣ ಗ್ರಂಥಗಳು ಈ ಪಂಗಡದ ಪವಿತ್ರ ಗ್ರಂಥಗಳು. ಅವುಗಳು ಅವರ ಗುರುಗಳ ಮತ್ತು ಸಂತರ ವ್ಯಾಖ್ಯಾನ ಮತ್ತು ಅಲೌಕಿಕ ಕಥೆಗಳನ್ನು ಹೊಂದಿವೆ. ಸಾಮಾನ್ಯವಾಗಿ ಇವರ ಎಲ್ಲಾ ಸಾಹಿತ್ಯವು ತತ್ವ, ಸಿದ್ಧಾಂತ ಮುಂತಾದ ಮನನ ಯೋಗ್ಯವಾದ ವಿಷಯಗಳಿಗಿಂತ ಹೆಚ್ಚಾಗಿ ಅವಾಸ್ತವಿಕತೆ, ವಿಡಂಬನೆ ಮತ್ತು ವೈಭವೀಕರಣದ ಮಾರ್ಗದಲ್ಲಿ ಸಾಗುತ್ತವೆ.)

1920ರ ನಂತರ ಬಸವಣ್ಣನವರು, ವಚನ ಸಾಹಿತ್ಯ, ಲಿಂಗಾಯತಗಳನ್ನು ಪಕ್ಕಕ್ಕೆ ಜರುಗಿಸಿ, ಲಿಂಗಾಯತದ ಒಂದು ಭಾಗವೇ ಆಗಿದ್ದ - warrior followers of saiva system - ಎಂಬ ಪರಂಪರೆಯಿದ್ದ ವೀರಶೈವಕ್ಕೆ ತೆಕ್ಕೆಬಿದ್ದು, ಲಿಂಗಾಯತವೇ ಅಲ್ಲ, ಅದು ಕೇವಲ ವೀರಶೈವವು, ಬಸವಣ್ಣನವರು ಧರ್ಮಗುರುವೇ ಅಲ್ಲ, ವಚನ ಸಾಹಿತ್ಯವು ಧರ್ಮ ಗ್ರಂಥವಲ್ಲ, ಇದು ಪಂಚಾಚಾರ್ಯ ಪರಂಪರೆಯದ್ದು, ಸಿದ್ಧಾಂತ ಶಿಖಾಮಣಿಯೇ ಧರ್ಮಗ್ರಂಥ - ಎಂಬ ವೀರಶೈವವಾದವನ್ನು ಲಿಂಗಾಯತದಲ್ಲಿ ತೇಲಿಬಿಡಲಾಯಿತು. ಈ ಪರಿಕಲ್ಪನೆಗೆ ಮತ್ತು ಪ್ರಚಾರಕ್ಕೆ

ಒತ್ತಾಸೆಯಾಗಿ ನಿಂತವರು ಬಹಳವಾಗಿ - ಮೈಸೂರಿನ ಪಂಡಿತ ಕಾಶೀನಾಥ ಶಾಸ್ತ್ರಿಗಳು ಮತ್ತು ಆಂಧ್ರ ಮೂಲದ ಪಂಡಿತ ವೆ. ನಾಗಭೂಷಣ ಶಾಸ್ತ್ರಿಗಳನ್ನೊಳಗೊಂಡು - ಗುರು - ಜಂಗಮ ವರ್ಗದವರೇ. ಏಕೆಂದರೆ ಈ ಹೊಸ ವೀರಶೈವದ ಆಚಾರ ವಿಚಾರಗಳು ಮತ್ತು ಈ ವೀರಶೈವಕ್ಕೆ ಒತ್ತಾಸೆಯಾಗಿ ನಿಂತವರ ಧಾರ್ಮಿಕ ಆಚಾರ - ವಿಚಾರಗಳು ಒಂದೇ - ಬಸವ ಪೂರ್ವದ ಶೈವ ಸಂಪ್ರದಾಯದ ಆಚಾರ ವಿಚಾರಗಳೇ - ಆಗಿದ್ದುವು. ಈ ವೀರಶೈವರಿಗೆ ತಾವು ಬಸವಣ್ಣನವರ ತದನಂತರದ ಕಾಲದಲ್ಲಿ ಆಗಿನ ಜೈನ, ಬೌದ್ಧ, ವೈಷ್ಣವ ಧರ್ಮಗಳ ಒತ್ತಡದಿಂದಾಗಿ ತಮ್ಮ ಅಸ್ತಿತ್ವವನ್ನೇ ಕಳೆದು ಕೊಂಡಂತಾದಾಗ, ಕಾಯಕ ಪ್ರಧಾನವಾದ, ಸಾಮಾಜಿಕ ಸಮಾನತೆಯ ಬಸವಧರ್ಮಕ್ಕೆ ಪರಿವರ್ತನೆ ಹೊಂದಿ, ಅದನ್ನ ನಿಷ್ಠೆಯಿಂದ ಅಳವಡಿಸಿಕೊಳ್ಳದೆ, ತಮ್ಮ ಹಳೆಯ ಸಂಪ್ರದಾಯಗಳನ್ನೇ ಮುಂದುವರಿಸುತ್ತಾ, ಅಂದರೆ ಲಿಂಗಾಯತ ಸಮಾಜವನ್ನು ಮತ್ತೆ ವರ್ಗೀಕೃತ ಮಾಡುತ್ತಾ, ಇಂದು ದೈತ್ಯಾಕಾರದಲ್ಲಿ ಬೆಳೆದಿರುವ ಅಸಂಘಟನೆಯ ಸಮಸ್ಯೆಗೆ ಒಂದು ಕೆಟ್ಟ ಕೊಡುಗೆಯನ್ನು ಕೊಡುತ್ತಿದ್ದೇವೆ ಎಂಬುದರ ಅರಿವೇ ಆಗಿರುವುದಿಲ್ಲ. ಇಂದಿಗೂ ಬಸವಣ್ಣನವರನ್ನು ಮಾನ್ಯ ಮಾಡುವವರಲ್ಲಿಯೂ, ಅನೇಕರು ಆಚರಿಸುತ್ತಿರುವುದು ಬಹುತೇಕ ಬಸವ ಪೂರ್ವಾಚರಣೆಗಳೇ ಎಂದು ಅವರ ಗಮನಕ್ಕೂ ಬಾರದಷ್ಟು ಅವು ಹಾಸು - ಹೊಕ್ಕಾಗಿವೆ.

ಬಸವಣ್ಣನವರನ್ನು ಇವರು ಮರೆಮಾಚಿದರೂ ಅಲ್ಲಲ್ಲಿ ಬಸವ ನಿಷ್ಠ ಮಠಾಧೀಶರು, ಸಮಾಜ ಚಿಂತಕರುಗಳು, ನಿಜಶರಣರು ಇಲ್ಲದೇ ಹೋಗಲಿಲ್ಲ. ಈ ತೆರನಾದ ಬಹಳಷ್ಟು ಜನರೂ ಇದ್ದರು ಎಂಬುದು ನನ್ನ ಒಂದು ಅಂದಾಜು.

ಬಸವಣ್ಣನವರ ವಚನಗಳೆಂದರೆ 'ಷಟ್‌ಸ್ಥಲದ ವಚನಗಳು' ಎಂಬ ಅಸಮಂಜಸ ಪರಿಕಲ್ಪನೆಗೆ ಒಳಪಡಿಸಿ ಷಟ್‌ಸ್ಥಲ ಸೂತ್ರಗಳಿಗೆ ಅಳವಡಿಸಿದವರು ಪ್ರೌಢದೇವರಾಯನ ಕಾಲದ ಮಹಾಲಿಂಗದೇವ, ಕುಮಾರ ಬಂಕನಾಥ, ಜಕ್ಕಣಾರ್ಯ ಮೊದಲಾದ ವಿದ್ವಾಂಸರುಗಳು. ಬೃಹತ್ ಶಕ್ತಿಯುಳ್ಳ ಬಸವಣ್ಣನವರ ಸಮಾಜ ಸುಧಾರಣೆಯ ವಚನಗಳನ್ನು ಕೇವಲ ಷಟ್‌ಸ್ಥಲ ಸೂತ್ರವೆಂಬ ಅಧ್ಯಾತ್ಮಿಕತೆಗೆ ಒಳಪಡಿಸಿರುವುದು ಸರಿಯೇ ಅಲ್ಲ, ಏಕೋತ್ತರ ಶತಸ್ಥಲ ಮತ್ತು ಷಟ್‌ಸ್ಥಲಗಳ ಪರಿಕಲ್ಪನೆ ಮತ್ತು ವಚನ ಸಾಹಿತ್ಯಕ್ಕೆ ಅದರ ಅಳವಡಿಕೆಯಾದದ್ದು ಮೇಲ್ಕಂಡ ವಿದ್ವಾಂಸ ಸಮುದಾಯದಿಂದಲೇ.

ಷಣ್ಮುಖ ಶಿವಯೋಗಿಗಳು, ಮುಪ್ಪಿನ ಷಡಕ್ಷರಿಯವರು, ನಿಜಗುಣ ಶಿವಯೋಗಿಗಳು ಮುಂತಾದವರೂ ಸಹ ಹೆಚ್ಚಾಗಿ ಕೇವಲ ಅಧ್ಯಾತ್ಮಿಕತೆಯನ್ನೇ ಪ್ರತಿಪಾದಿಸಿದ್ದಾರೆ.

ಬಸವಣ್ಣನವರ ವಿಚಾರಧಾರೆಯ ದಾರಿ ತಪ್ಪಿಸಿದ ಇನ್ನೊಂದು ಪ್ರಮುಖ ಗ್ರಂಥವೆಂದರೆ ಪೌರಾಣಿಕತೆ, ವೈಭವೀಕರಣ, ಕೇವಲ ಆಧ್ಯಾತ್ಮಿಕತೆ ಮುಂತಾದವುಗಳನ್ನೊಳಗೊಂಡ, ಬೇರೆ - ಬೇರೆ ಕಾಲಗಳಲ್ಲಿ, ಬೇರೆ - ಬೇರೆ ಗ್ರಂಥಕರ್ತರಿಂದ ರಚಿತವಾದ 'ಶೂನ್ಯ ಸಂಪಾದನೆ' ಗ್ರಂಥಗಳು.

ಲಿಂ|| ಫ.ಗು. ಹಳಕಟ್ಟಿಯವರು ಮತ್ತು ಪೂಜ್ಯ ಲಿಂ|| ಲಿಂಗಾನಂದ ಸ್ವಾಮೀಜಿಯವರಿಂದ ಪ್ರಾರಂಭವಾದ ವಚನ ಸಾಹಿತ್ಯದ ಪುನರುತ್ಥಾನದಿಂದಾಗಿ 'ಬಸವಣ್ಣನವರೇ ಲಿಂಗಾಯತ ಧರ್ಮಸಂಸ್ಥಾಪಕರು' ಎಂಬ 19ನೇ ಶತಮಾನದ ಕೊನೆಯವರೆವಿಗೂ ಅಸ್ತಿತ್ವದಲ್ಲಿ ಇದ್ದ ವಿಚಾರಧಾರೆಗಳು ಮತ್ತೆ ಸ್ಥಾಪಿತವಾಗುತ್ತಿವೆ.

ಒಟ್ಟಾರೆ ಹೇಳುವುದಾದರೆ, 15ನೇ ಶತಮಾನದಲ್ಲಿ ಲಿಂಗಾಯತದಲ್ಲಿ 'ವೀರಶೈವ' ಎಂಬುದರ ಪ್ರಯೋಗವಾಯಿತು. ವಚನ ಸಾಹಿತ್ಯವನ್ನು ಏಕೋತ್ತರ ಶತಸ್ಥಲಗಳಿಗೆ ಸೀಮಿತವಾಗಿ, ಮಿಕ್ಕೆಲ್ಲಕ್ಕೂ ಬಸವಪೂರ್ವದ ಆಗಮೋಕ್ತ ಆಚರಣೆಗಳನ್ನೇ ಅನುಸರಿಸಿದರು. ಆದರೂ 19ನೇ ಶತಮಾನದ ಕೊನೆಯವರೆವಿಗೂ ಬಸವಣ್ಣನವರೇ ಲಿಂಗಾಯತ ಧರ್ಮ ಸಂಸ್ಥಾಪಕರೆಂಬ ವಿಚಾರವೇ ಪ್ರಚಲಿತವಿದ್ದತು. ಬಸವ ಪುರಾಣ, ಚನ್ನ ಬಸವ ಪುರಾಣಗಳೇ - ಅಂದಿನ ವೀರಶೈವರನ್ನೊಳಗೊಂಡು - ಎಲ್ಲರ ಧರ್ಮಗ್ರಂಥಗಳಾಗಿದ್ದುವು. 20ನೇ ಶತಮಾನದ ಆದಿಯಲ್ಲಿ ಹಾನಗಲ್ ಕುಮಾರ ಸ್ವಾಮಿಗಳು ತಮ್ಮ ಸುಧಾರಣಾ ಕಾರ್ಯಗಳಲ್ಲಿ ಬಸವಣ್ಣನವರನ್ನು ಪರಿಗಣಿಸಿರುವುದು ಕಂಡು ಬರುವುದಿಲ್ಲ. ಅವರು ಸಮಾಜವನ್ನು ವರ್ಗೀಕರಣದ ಸ್ಥಿರೀಕರಣದತ್ತ ಕೊಂಡೊಯ್ದರು.

ಇದರಿಂದಾಗಿ ಅನೇಕ ಜಂಗಮರುಗಳು ವಾರಣಾಸಿಗೆ ಹೋಗಿ, ಅಲ್ಲಿನ ಶೈವ ವಿದ್ವಾಂಸರುಗಳ ಅಧೀನದಲ್ಲಿ ತಮ್ಮ ಹೆಸರುಗಳ ಕೊನೆಯಲ್ಲಿ ಶರ್ಮ, ಶಾಸ್ತ್ರಿ ಎಂದು ಸೇರಿಸಿಕೊಂಡು, ತಮ್ಮ ಶಿವದಾರಗಳನ್ನು ಜನಿವಾರಗಳಂತೆ ಬಿಂಬಿಸಿ, ಆಗಮೋಕ್ತ ವಿಚಾರಗಳನ್ನೇ ಅಧ್ಯಯನ ಮಾಡಿ, ಅವುಗಳನ್ನೇ ಸರಿಯೆಂದು ನಂಬಿ ಬಂದು, ಇಲ್ಲಿ ಕರ್ನಾಟಕದಲ್ಲಿ ಮಠಾಧಿಪತಿಗಳಾಗಿ, ಸಾಮಾಜಿಕ ಸಮಾನತೆಯ, ಕಾಯಕ - ದಾಸೋಹದ ವಚನ ಸಾಹಿತ್ಯವನ್ನು ಅವರು ನಂಬಿದ ವಿಚಾರಗಳಿಗೆ ವಿರೋಧವೆಂದು ತೀರ್ಮಾನಿಸಿ ವಿರೋಧವಾಗಿಯೇ ನಡೆದು ಕೊಂಡರು. ನಂತರದ ಕಾಲದಲ್ಲಿ ಲಿಂಗಾಯತವು ಅಲ್ಲವೇ ಅಲ್ಲ, ಇದು ಕೇವಲ ವೀರಶೈವವು, ಧರ್ಮಸಂಸ್ಥಾಪಕರು ನಾಲ್ಕೂ ಯುಗಗಳಲ್ಲಿ ಆಗಿಹೋದ ಪಂಚಾಚಾರ್ಯರು, ಧರ್ಮಗ್ರಂಥ ವಚನ ಸಾಹಿತ್ಯವಲ್ಲ - ಸಿದ್ಧಾಂತ ಶಿಖಾಮಣಿ ಎಂದು - warrior followers of saiva system - ಎಂಬ ಪರಂಪರೆಯಿದ್ದ ವೀರಶೈವಕ್ಕೆ ಪಂಚಾಚಾರ್ಯ ಪರಂಪರೆಯನ್ನು ಕೊಡಲಾಯಿತು. ಇಂದಿನ ಅಸಂಘಟನೆಯ ಸಮಸ್ಯೆಗಳು ಅವರಿಗೂ ಸಡ್ಡು ಹೊಡೆದು ನಿಂತಿವೆ. ಉದಾಹರಣೆಗೆ ಪಂಚಮಸಾಲಿ ಸಮುದಾಯಕ್ಕೆಂದು ಒಂದು ಧರ್ಮಪೀಠ ಸ್ಥಾಪಿಸಲು ಹೋದರೆ ಅವು ಮೂರಾಗಿ ನಿಂತದ್ದು.

ಹೀಗೆ ಬಸವ ಪ್ರಣೀತ ಲಿಂಗಾಯತ ಧರ್ಮವು ಅದರ ಇತಿಹಾಸದುದ್ದಕ್ಕೂ ಅನೇಕ ಪರಿವರ್ತನೆಗಳನ್ನು ಹೊಂದಿತು. ಇಂತಹ ಹಿನ್ನೆಲೆಯಿಂದಾಗಿಯೇ ನಮ್ಮ ಸಮಾಜವು ಅಸಂಘಟನೆಯೆಂಬ ದೊಡ್ಡ ಸಮಸ್ಯೆಗೆ ತುತ್ತಾಗಿದೆ.

ಪರಿಹಾರವೇನು?

ಆದದ್ದು ಆಗಿ ಹೋಯಿತು. ಯಾರೂ ಯಾರ ಕಡೆಗೂ ಬೊಟ್ಟು ಮಾಡುವ ಅಗತ್ಯವಿಲ್ಲ. ಎಲ್ಲರೂ ಒಂದೇ ಉದ್ದೇಶಕ್ಕಾಗಿ - ಸಂಘಟನೆಗಾಗಿ - ಈಗ ಕೈ ಜೋಡಿಸುವ ಅಗತ್ಯವಿದೆ. ಎಲ್ಲರೂ ಆಗಿನ ಕಾಲದ ಪರಿಸ್ಥಿತಿಗೆ ತಕ್ಕಂತೆ, ತಮ್ಮ ಶಕ್ತಿ - ಸಾಮರ್ಥ್ಯಗಳಿಗೆ ಅನುಗುಣವಾಗಿ, ತಮ್ಮ ಅರಿವಿಗೆ ಬಂದ ಅಗತ್ಯಕ್ಕೆ ತಕ್ಕಂತೆ ಸ್ಪಂದಿಸಿರುತ್ತಾರೆ. ಇದುವರೆವಿಗೂ ಸಂಘಟನೆಯ ಉದ್ದೇಶವಿಟ್ಟುಕೊಂಡು, ಸಂಘಟನೆಯ ಸೂತ್ರಗಳಿಗನುಸಾರವಾಗಿ ಸ್ಪಂದಿಸಿಲ್ಲ. ಈಗ ಅದು ಆಗ ಬೇಕು. ಆಗ ಆಗದೇ ಹೋದರೆ ಮುಂದೆ ಎಂದೂ ಆಗುವುದಿಲ್ಲ. ಸಮಾಜದ ಎಲ್ಲರಿಗೂ ಇದೊಂದೇ ಉದ್ದೇಶವಾಗಬೇಕು.

ಈವರೆವಿಗೂ ತಿಳಿಸಿರುವಂತೆ ವೀರಶೈವ/ಲಿಂಗಾಯತ ಸಮಾಜದ ಪ್ರಮುಖ ದೌರ್ಬಲ್ಯವೆಂದರೆ ಅಸಂಘಟನೆ. ಇದುವರೆವಿಗೂ ತಿಳಿಸಿದ ಹಿನ್ನೆಲೆಯಿಂದಾಗಿ ನಾವು ಇಂದು ನಮ್ಮ ಧಾರ್ಮಿಕ, ಸಾಮಾಜಿಕ ಮತ್ತು ದೈನಂದಿನ ಚಟುವಟಿಕೆಗಳಲ್ಲಿ ಅತ್ಯಂತ ಸುಲಭವಾಗಿಯೇ ಇರುವ, ಸರಳವಾಗಿಯೇ ಇರುವ ಸಂಘಟನೆಯ ಸೂತ್ರಗಳನ್ನು ಅಳವಡಿಸಿಕೊಳ್ಳದೇ ಇರುವುದು. ಸಂಘಟನೆಯ ಸೂತ್ರಗಳನ್ನು ರೂಪಿಸಿ, ಅಳವಡಿಸಿಕೊಳ್ಳಲು ಸುಲಭವಾಗುವಂತೆ ಮಾಡುವ ಒಂದು ಕೇಂದ್ರೀಯ ನಿಯಂತ್ರಣ ವ್ಯವಸ್ಥೆ ಇದುವರೆವಿಗೂ ಆಗದೇ ಇರುವುದು. ಇಂತಹ ವ್ಯವಸ್ಥೆಗಳು ಅವರವರ ಧರ್ಮ ಗುರುಗಳ ಕಾಲಾನಂತರದಲ್ಲಿ ಬೌದ್ಧ ಧರ್ಮದಲ್ಲಿ, ಭಿಕ್ಷುಗಳಿಂದ ತ್ರಿಪೀಠಿಕಗಳು ಮತ್ತು ಕ್ರಿಶ್ಚಿಯನ್ನರಲ್ಲಿ ಅವರ ಸಂತರಿಂದ ಬೈಬಲ್ - ಆಗಿವೆ.

ಈ ವಿಚಾರವಾಗಿ ನಾನು ಸುಮಾರು 20 ವರ್ಷಗಳಿಂದ ಆಳವಾದ ಅಧ್ಯಯನ, ಚಿಂತನೆ ನಡೆಸಿ, ಸಮಾಜದ ಎಲ್ಲಾ ಮುಖಗಳನ್ನು ಒಳಗೊಳ್ಳುವಂತೆ, ಬಸವ ತತ್ವಗಳಾಧಾರದಲ್ಲಿ, ಸಾವಿರಾರು ಅಂಶಗಳನ್ನುಳ್ಳ, ಅನುಷ್ಠಾನ ಯೋಗ್ಯವಾದ ಒಂದು ಯೋಜನೆಯನ್ನು ರೂಪಿಸಿದ್ದೇನೆ. ಇದಕ್ಕೆ ಮುಖ್ಯವಾಗಿ ಮಠಾಧೀಶರುಗಳು - ಧಾರ್ಮಿಕ ಸಂಘ ಸಂಸ್ಥೆಗಳು, ಸಮಾಜ ಮುಖಂಡರು. ವಿದ್ವಾಂಸರುಗಳು, ಸಮಾಜ ಚಿಂತಕರುಗಳನ್ನೊಳಗೊಂಡಂತೆ - ಒಂದೆಡೆ ಸೇರಿ ಕೆಲವರು ಮಾರ್ಗದರ್ಶನ ನೀಡಿದರೆ ಅಥವಾ ಮಠಾಧೀಶರುಗಳು ಒಂದೆಡೆ ಸೇರಿ ಆಶೀರ್ವದಿಸಿದರೂ - ಕಾರ್ಯವು ಮುಂದುವರಿಯುವಂತೆ ಯೋಜನೆಯನ್ನು ರೂಪಿಸಿದ್ದೇನೆ. ಇದು ಎಲ್ಲರೂ ಸೇರಿ ಮಾಡಬೇಕಾದ ಕಾರ್ಯ. ಬೇರೆ - ಬೇರೆ ಗುಂಪುಗಳು, ಬೇರೆ - ಬೇರೆಯಾಗಿ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹಿಂದೆ ಅನೇಕ ಬಾರಿ ಆದಂತೆಯೇ ಮತ್ತೆ ಏನೂ ಆಗುವುದಿಲ್ಲ, ಎಲ್ಲರೂ ಸೇರಿ ಮಾಡಿದರೆ ಮಾತ್ರ ಕಾರ್ಯವು ಪರಿಪೂರ್ಣವಾಗುವುದು.

(ಲೇಖನವು 26ನೆಯ ಪುಟದಲ್ಲಿ ಮುಂದುವರಿದಿದೆ.)



ಬೆಂಗಳೂರಿನಲ್ಲಿ ಶರಣ. ಜಗನ್ನಾಥ ಬೂಥ್‌ಪುರೆಯವರ ಮನೆಯಲ್ಲಿ ನಡೆದ ಬಸವ ಜ್ಯೋತಿ ಕಾರ್ಯಕ್ರಮ

ಧಾರವಾಡದ ರಾಷ್ಟ್ರೀಯ ಬಸವ ದಳದಿಂದ

ಆತ್ಮೀಯ ಆಹ್ವಾನ

ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 15ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಬಸವ ಧರ್ಮ ಪೀಠದ ದ್ವಿತೀಯ ಜಗದ್ಗುರುಗಳಾದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಬಸವ (ಮಂಗಳ)ವಾರ, ದಿ.30-6-2009ರಂದು ಬೆಳಗ್ಗೆ 11 ಗಂಟೆಯಿಂದ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದ ಪ್ರಾರ್ಥನಾ ಮಂದಿರದಲ್ಲಿ ಏರ್ಪಡಿಸಲಾಗಿದೆ. ಉಪನ್ಯಾಸದ ನಂತರ ಗಣ ಪ್ರಸಾದ ದಾಸೋಹವಿದೆ. ಹೆಚ್ಚಿನ ಸಂಖ್ಯೆಯಲ್ಲಿ ಧಾರವಾಡ-ಹುಬ್ಬಳ್ಳಿ ಮತ್ತು ಸಮೀಪದ ರಾಷ್ಟ್ರೀಯ ಬಸವ ದಳಗಳ ಶರಣ ಬಂಧುಗಳು ಮತ್ತು ಸದ್ಭಕ್ತರು ಆಗಮಿಸಬೇಕೆಂದು ಆಹ್ವಾನಿಸುತ್ತಿದ್ದೇವೆ. ಪೂಜ್ಯ ಶ್ರೀ ಮಾತಾಜಿಯವರ ಅಮೃತವಾಣಿಯನ್ನು ಆಲಿಸಿ, ಅವರ ದರ್ಶನ, ಆಶೀರ್ವಾದವನ್ನು ಪಡೆಯಬೇಕೆಂದು ಆಶಿಸುತ್ತೇವೆ.


ಶರಣ.ಎಸ್.ಎಲ್.ಗೌಡರು
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ
ಧಾರವಾಡ.

ಶರಣ.ಸಿದ್ಧಣ್ಣ ನಟೀಗಲ್
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ
ಧಾರವಾಡ.

"ಭಾವ ಸಂಗಮ" ಎಂಬ ವಧು-ವರರ ವೇದಿಕೆಯನ್ನು ಬೆಂಗಳೂರು ಬಸವ ಮಂಟಪದಲ್ಲಿ ಈವರೆಗೆ ನಡೆಸಲಾಗುತ್ತಿದ್ದು, ಕಾರಣಾಂತರಗಳಿಂದ ಪ್ರಸ್ತುತ ವಧು -ವರರ ವೇದಿಕೆಯನ್ನು ಈ ಕೆಳಕಂಡವಿಳಾಸಕ್ಕೆ ಬದಲಾವಣೆ ಮಾಡಲಾಗಿದ್ದು ಈ ವಿಷಯಕ್ಕೆ ಸಂಬಂಧಿಸಿದ ವ್ಯವಹಾರವನ್ನು ಹೊಸ ವಿಳಾಸದೊಂದಿಗೆ ಮಾಡಬೇಕೆಂದು ಮನವಿ.

ಶರಣ.ಇಂದುಶೇಖರ್
870, ಮೊದಲನೆಯ ಮಹಡಿ, 2ನೇ ಅಡ್ಡರಸ್ತೆ
2ನೇ ಮುಖ್ಯರಸ್ತೆ, ಎರಡನೆಯ ಹಂತ,
ರಾಜಾಜಿನಗರ, ಬೆಂಗಳೂರು -560010
ದೂ: 23324277, 9945684230

CPMG/KA/BGW-50/2009-2011 WPP(W)-17R.No



ಶರಣ ಹೂಗಾರ ಮಾದಯ್ಯ